ಮೈಸೂರು ವಿದ್ಯಾಭ್ಯಾಸದ ಇಲಾಖೆ

ಕನ್ನಡ
ಎರಡನೆಯ ಪುಸ್ತಕ

ಪ್ರಕಾಶಕರು
ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪೆನಿ, ಲಿಮಿಟೆಡ್
ಬೆಂಗಳೂರು ಸಿಟಿ
೧೯೩೭

ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು ಸಿಟಿ

ಮುನ್ನುಡಿ

ಈಗ ಬಳಕೆಯಲ್ಲಿರುವ ಬಾಲಬೋಧೆಯನ್ನೂ ರೀಡರುಗಳನ್ನೂ ಷ್ಕರಿಸಿ ಹೊಸ ಪುಸ್ತಕಗಳನ್ನು ಸಿದ್ಧಪಡಿಸಲು ವಿದ್ಯಾಶಾಖೆಯ ಕಾರಿಗಳು ಒಂದು ಸಮಿತಿಯನ್ನು ನೇಮಿಸಿದರು. ಆದರ ಸದಸ್ಯರು ರೆಂದರೆ:—

ಶ್ರೀಮಾನ್‌ಗಳಾದ ಬಿ. ಎಂ. ಶ್ರೀಕಂಠಯ್ಯನವರು (ಅಧ್ಯಕ್ಷರು), ವಾಸುದೇವಯ್ಯನವರು, ಕೆ. ನಾರಾಯಣರಾಯರು, ಡಿ. ಕೆ. ಭಾರದ್ವಾಜ ರು, ದೇವುಡು ನರಸಿಂಹಶಾಸ್ತ್ರಿಗಳು, ಕೆ. ಸಂಪದ್ಗಿರಿರಾಯರು, ್. ಜಿ. ಶಾಸ್ತ್ರಿಗಳು, ಎಂ. ಆರ್. ಶ್ರೀನಿವಾಸಮೂರ್ತಿಗಳು.

ಎಲ್ಲಾ ಪುಸ್ತಕಗಳ ಕವಿತೆಗಳ ಆಯ್ಕೆಯನ್ನು ಸಮಿತಿಯವರು ್ಯಕ್ಷರಿಗೆ ಒಪ್ಪಿಸಿದರು.

* * * *

ಉಪಾಧ್ಯಾಯರಲ್ಲಿ ವಿಜ್ಞಾಪನೆ

ಈ ಸೂಚನೆಗಳನ್ನು ಗಮನಿಸಬೇಕು:—

೧. ೬೦ ಪಾಠಗಳಲ್ಲಿ ಕಡೆಗೆ ೩೦ ಪಾಠಗಳನ್ನು ಚೆನ್ನಾಗಿ ಹೇಳಿಕೊಟ್ಟರೆ ಸಾಕು. ಮಕ್ಕಳು ಮನೆಯಲ್ಲಿ ತಾವೇ ಓದಿಕೊಳ್ಳಲೆಂದೂ, ಅಕ್ಷರಸ್ಥರಾಗಬೇಕೆಂಬ ಕುತೂಹಲವುಳ್ಳ ಹಿರಿಯರಿಗಾಗಿಯೂ, ಹೆಚ್ಚು ಪಾಠಗಳನ್ನು ಕೊಟ್ಟಿದೆ.

೨. ಪಾಠವನ್ನು ಮಕ್ಕಳಿಂದ ಓದಿಸಿ. ಸ್ಪಷ್ಟವಾದ ಉಚ್ಚಾರಣೆ, ಎಲ್ಲೆಲ್ಲಿ ನಿಲ್ಲಿಸಬೇಕೋ ಅಲ್ಲಿ ನಿಲ್ಲಿಸುವುದು, ತಿಳಿಯದ ಮಾತುಗಳಿಗೆ ಸರಿಯಾದ ಅರ್ಥ, ಪಾಠದ ಒಟ್ಟು ಸಾರಾಂಶ ಮನಸ್ಸಿಗೆ ಇಳಿಯುವುದು, ಅದರಮೇಲೆ ಮಕ್ಕಳು ತಮ್ಮ ಮಾತಿನಲ್ಲಿ ವಾಕ್ಯ ಕಟ್ಟಿ ಹೇಳುವುದು—ಈ ಗುರಿಯಿಟ್ಟು ಪಾಠಗಳನ್ನು ಕಲಿಸಿ.

೩. ಒಂದಕ್ಕೊಂದು ಸಂಬಂಧಪಟ್ಟ ಪಾಠಗಳನ್ನು ಮುಗಿಸಿದಮೇ ಒಟ್ಟುಗೂಡಿಸಿ ಅವನ್ನು ಓದುವಂತೆ ಹೇಳಿ. ಆಗಾಗ್ಗೆ ಪಾ ವಿಷಯವನ್ನು ಹುಡುಗರು ಸಂವಾದರೂಪದಲ್ಲಿ ಹೇಳುವ ಮಾಡಿಸಿ.

೪. ವಾಕ್ಯರಚನೆಗೆ ಮನದಟ್ಟಾಗುವ ಮಟ್ಟಿಗೆ ಪ್ರಶ್ನೆಗಳಲ್ಲಿ ಹೇಳಿರು ವ್ಯಾಕರಣಾಂಶಗಳನ್ನು ತಿಳಿಸಿಕೊಡಿ. ಹೆಚ್ಚಿಗೆ ಹೇಳಿ ಬೇ ಪಡಿಸಬೇಡಿ.

೫. ಹುಡುಗರು ತಿಳಿಯದ ಕಡೆ ಪ್ರಶ್ನೆಗಳನ್ನು ಕೇಳುವಹ ಪ್ರೋತ್ಸಾಹಿಸಿ. ನೀವೂ ಪ್ರಶ್ನೆಗಳನ್ನು ಹಾಕಿ ಮುಖ್ಯಾ ಗಳನ್ನು ಅವರ ನೆನಪಿನಲ್ಲಿ ನಿಲ್ಲಿಸಿ.

೬. ಕವಿತೆಗಳನ್ನು ಹುಡುಗರು ಬಾಯಿಪಾಠಮಾಡಿ, ಒಬ್ಬೊ ರಾಗಿಯೂ, ಒಟ್ಟಿಗೆ ಮೇಳದಲ್ಲಿಯೂ ಹಾಡಲಿ. ತ ಮತ್ತು ಮಿತವಾದ ಅಭಿನಯದೊಡನೆ ಹಾಡಲಿ. ಆಯ ಕವಿತೆಯ ಛಂದಸ್ಸಿಗೆ ಒಪ್ಪುವ ಮಟ್ಟಿನಲ್ಲಿ ಅದನ್ನು ಹಾ ವುದನ್ನು ಹೇಳಿಕೊಡಿ (ಗೋವಿನ ಹಾಡಿನ ಮಟ್ಟು, ದಾಸ ಪದದ ಮಟ್ಟು, ಸಾಂಗತ್ಯದ ಮಟ್ಟು ಮುಂತಾದುವು).

೭. ಗೋವಿನ ಹಾಡನ್ನು ಹುಡುಗರಿಗೆ ಗೊಲ್ಲ, ಹಸು, ಕರು ಹುಲಿ ವೇಷಗಳನ್ನು ಹಾಕಿಸಿ ಮಾತುಗಳನ್ನು ಹಂಚಿ ನಾಟ ಆಡಿಸಬಹುದು.

೮. ಒಟ್ಟಿನಲ್ಲಿ, ಕನ್ನಡ ನಾಡಿನ ಚಿನ್ನದಂತಹ ಮಕ್ಕಳು ನಿಮ ಕೈಯಲ್ಲಿವೆ. ತಾಯಿತಂದೆಗಳಂತೆ ಅಕ್ಕರೆಯಿಂದ ಸಂತೋ ದಲ್ಲಿ ಅವರನ್ನು ಬೆಳಸಿ, ಎಳೆಯ ಮನಸ್ಸಿನಮೇಲೆ ಹೆಚ ಹೊರೆಯನ್ನು ಹೇರದೆ, ಆಟಪಾಟಗಳಿಂದ ನಲಿಸಿ, ಕಲಿಸಿ.

ಬಿ. ಎಂ. ಶ್ರೀ.

ವಿಷಯ ಸೂಚಿಕೆ

ಕವಿತೆಗಳು—

ಕನ್ನಡ ಎರಡನೆಯ ಪುಸ್ತಕ

೧. ನಮ್ಮ ಮಹಾರಾಜರು



ನಮ್ಮ ಮಹಾರಾಜರು ಶ್ರೀ ಕೃಷ್ಣರಾಜೇಂದ್ರ ಒಡೆಯರು. ಅವರು ೧೮೮೪ನೆಯ ಇಸವಿಯಲ್ಲಿ ಹುಟ್ಟಿದರು. ಅವರು ರಾಜ್ಯವನ್ನು ೧೯೦೨ರಿಂದ ಆಳುತ್ತಿದ್ದಾರೆ.

ನಮ್ಮ ಮಹಾರಾಜರು ಹಿಂದೆ ಆಳಿದ ಶ್ರೀ ಚಾಮರಾಜ ಒಡೆಯರ ಮಕ್ಕಳು. ಮೇಲಿನ ಚಿತ್ರವನ್ನು ನೋಡಿ. ಕುರ್ಚಿಯಮೇಲೆ ಶ್ರೀ ಚಾಮರಾಜ ಒಡೆಯರು ಕುಳಿತಿದ್ದಾರೆ. ಅವರನ್ನು ಒರಗಿಕೊಂಡು ನಮ್ಮ ಮಹಾರಾಜರು ನಿಂತಿದ್ದಾರೆ. ತೊಡೆಯಮೇಲೆ ನಮ್ಮ ಯುವರಾಜರು ಕುಳಿತಿದ್ದಾರೆ. ಉಳಿದವರು ನಮ್ಮ ಮಹಾರಾಜರ ಅಕ್ಕತಂಗಿಯರು. ಮೇಲಿನ ಚಿತ್ರ ಮಹಾರಾಜರು ಚಿಕ್ಕ ಹುಡುಗರಾಗಿದ್ದಾಗ ತೆಗೆದದ್ದು.

ಮಹಾರಾಜರಿಗೆ ವಿದ್ಯೆಯೆಂದರೆ ಬಲು ಪ್ರೀತಿ. ಅವರಿಗಾಗಿ ಅರಮನೆಯಲ್ಲಿ ಒಂದು ಪಾಠಶಾಲೆ ಇಟ್ಟಿದ್ದರು. ಮಹಾರಾಜರು ಸೋಮಾರಿಗಳಾಗಿ ಇರಲಿಲ್ಲ. ಕಷ್ಟಪಟ್ಟು ಓದುತ್ತಿದ್ದರು. ಅವರಿಗೆ ಕನ್ನಡ, ಸಂಸ್ಕೃತ, ಇಂಗ್ಲೀಷು, ಉರ್ದು ಮುಂತಾದ ಭಾಷೆಗಳು ಬರುತ್ತವೆ. ಅವರಿಗೆ ಸಂಗೀತವೂ ಚೆನ್ನಾಗಿ ಬರುತ್ತದೆ.

ನಮ್ಮ ಮಹಾರಾಜರು ನಮಗಾಗಿ ಪಾಠಶಾಲೆಗಳನ್ನು ಇಟ್ಟಿದ್ದಾರೆ. ಕಳ್ಳರ ಕಾಟ ತಪ್ಪಿಸಲು ಪೋಲೀಸ್ ಜನರನ್ನು ಇಟ್ಟಿದ್ದಾರೆ. ವ್ಯವಸಾಯಕ್ಕೆ ಬೇಕಾದ ಕೆರೆಗಳನ್ನು ಕಟ್ಟಿಸಿದ್ದಾರೆ. ರೋಗ ಬಂದರೆ ವಾಸಿಮಾಡಲು ಆಸ್ಪತ್ರೆಗಳನ್ನು ಇಟ್ಟಿದ್ದಾರೆ. ಹೀಗೆ ಮಹಾರಾಜರು ನಮಗೆ ಎಷ್ಟೋ ಬಗೆಯಲ್ಲಿ ಸಹಾಯ ಮಾಡಿದ್ದಾರೆ. ಮಹಾರಾಜರಿಗೆ ಜನರಮೇಲೆ ಬಹಳ ಪ್ರೀತಿ; ದೇವರಲ್ಲಿ ಬಹಳ ಭಕ್ತಿ.

ಮಹಾರಾಜರ ಉಪಕಾರವನ್ನು ನಾವು ಯಾವಾಗಲೂ ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ನಾವು ಅವರಲ್ಲಿ ಭಕ್ತಿ ಇಡಬೇಕು.

ಬಹುಕಾಲ ನಮ್ಮನ್ನು ಆಳುವಂತೆ ದೇವರು ಅವರನ್ನು ಕಾಪಾಡಲಿ. ಅವರಿಗೂ ಅವರ ಮನೆತನದವರಿಗೂ ದೇವರು ಒಳ್ಳೆಯದನ್ನು ಮಾಡಲಿ.

ಪ್ರಶ್ನೆ

ಮಹಾರಾಜರ ವಿಷಯವಾಗಿ ಈ ಪಾಠದಿಂದ ಏನು ತಿಳಿದುಕೊಂಡಿರಿ? ಮಹಾರಾಜರು ನಮಗೆ ಏನು ಉಪಕಾರಗಳನ್ನು ಮಾಡಿದ್ದಾರೆ? ರಾಜಭಕ್ತಿ ಎಂದರೇನು? ವಯಸ್ಸು, ಜ್ಞಾಪಕ, ಭಾಷೆ, ಆಸ್ಪತ್ರೆ—ಈ ಶಬ್ದಗಳ ಅರ್ಥವೇನು? ಇವು ಯಾವ ಬಗೆಯ ಪದಗಳು? ಆಳುತ್ತಿದ್ದಾರೆ, ತೆಗೆದದ್ದು, ಬರುತ್ತವೆ, ಮಾಡಲಿ—ಇವು ಯಾವ ಬಗೆಯ ಪದಗಳು?

೨. ಪಾಠಶಾಲೆಯಲ್ಲಿ ಕಲಿಯುವುದೇನು?

ರಂಗೇಗೌಡ—ಮಾದೇಗೌಡ! ನಿನ್ನ ಹುಡುಗನನ್ನು ಕರೆದುಕೊಂಡು ಎಲ್ಲಿಗೆ ಹೊರಟಿರುವೆ?

ಮಾದೇಗೌಡ—ಹೊಲಕ್ಕೆ ಕರೆದುಕೊಂಡು ಹೋಗುತ್ತಿದೇನೆ. ಹೊಲಕ್ಕೆ ದನ ನುಗ್ಗದಂತೆ ನೋಡಿಕೊಳ್ಳುತ್ತಾನೆ.

ರಂ.—ನಿನ್ನ ಮಗನನ್ನು ಈಗ ಪಾಠಶಾಲೆಗೆ ಸೇರಿಸಬೇಕು. ನೋಡು, ನನ್ನ ಮಗನನ್ನು ಈಗ ಸೇರಿಸುತ್ತೇನೆ. ಹುಡುಗರು ಚಿಕ್ಕವರಾಗಿರುವಾಗ ವಿದ್ಯೆ ಕಲಿಯಬೇಕು.

ಮಾ.—ಹೊಲ ಉಳುವ ಕೆಲಸಕ್ಕೆ ವಿದ್ಯೆ ಏಕಪ್ಪ?

ರಂ.—ಮಾದೇಗೌಡ! ವಿದ್ಯೆ ಎಲ್ಲರಿಗೂ ಬೇಕು. ನಿನಗೆ ಓದು

ಬರಹ ಬರುವುದಿಲ್ಲ. ಹಣ ಕಾಸುಗಳ ಲೆಕ್ಕ ತಿಳಿಯುವುದಿಲ್ಲ. ಏನಾದರೂ ಕಾಗದ ಬಂದರೆ ಅಯ್ಯನವರ ಹತ್ತಿರ ಹೋಗುತ್ತೀಯೆ. ರಾಗಿ, ಹುರುಳಿ ಮಾರಿದರೆ ಶಾನುಭೋಗರು ನಿನಗೆ ಲೆಕ್ಕ ಹೇಳಬೇಕು. ನೀನೆ ಓದು ಬರಹ ಕಲಿತಿದ್ದರೆ ಈ ಕಷ್ಟ ತಪ್ಪುತ್ತಿತ್ತು.

ಮಾ.—ನಮ್ಮಪ್ಪ ಪಾಠಶಾಲೆಗೆ ಹಾಕಲಿಲ್ಲ. ನನಗೆ ಓದು ಬರಹ ಬರಲಿಲ್ಲ.

ರಂ.—ಈಗ ನಿನ್ನ ಮಗನನ್ನು ಪಾಠಶಾಲೆಗೆ ಸೇರಿಸು. ಓದಿ ಬುದ್ಧಿವಂತನಾಗುತ್ತಾನೆ. ಬೇಕಾದ ಕಾಗದಗಳನ್ನು ಓದುತ್ತಾನೆ. ಬೇಕಾದ ಕಾಗದಗಳನ್ನು ಬರೆಯುತ್ತಾನೆ. ಜನಗಳಿಗೆ ವಿದ್ಯೆ ಬರಲೆಂದು ಸರ್ಕಾರದವರು ಪಾಠಶಾಲೆಗಳನ್ನು ಇಟ್ಟಿದ್ದಾರೆ. ವರ್ಷಕ್ಕೆ ಅರುವತ್ತು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಾರೆ.

ಮಾ.—ಅಹುದು ರಂಗೇಗೌಡ. ನನ್ನ ಹುಡುಗನನ್ನು ಪಾಠಶಾಲೆಗೆ ಸೇರಿಸಬೇಕು.

ರಂ.—ಸೇರಿಸಿದರೆ ಬಹಳ ಒಳ್ಳೆಯದು. ಪಾಠಶಾಲೆಗೆ ಕಾಲಕ್ಕೆ ಸರಿಯಾಗಿ ಹೋಗುವ ಅಭ್ಯಾಸ ಉಂಟಾಗುತ್ತದೆ. ಗೊತ್ತಾದ ಕೆಲಸವನ್ನು ಗೊತ್ತಾದ ಕಾಲದಲ್ಲಿ ಮಾಡುವ ಅಭ್ಯಾಸ ಬರುತ್ತದೆ. ಉಪಾಧ್ಯಾಯರು ಒಳ್ಳೆಯ ನಡತೆಯನ್ನು ಹೇಳಿಕೊಡುತ್ತಾರೆ. ತಂದೆತಾಯಿಗಳಲ್ಲಿ ಭಕ್ತಿ, ಅಣ್ಣತಮ್ಮಂದಿರಲ್ಲಿ ಪ್ರೀತಿ, ಪ್ರಾಣಿಗಳಲ್ಲಿ ದಯೆ, ನಿಜವನ್ನೇ ಹೇಳುವುದು, ಒಟ್ಟುಗೂಡಿ ಕೆಲಸ ಮಾಡುವುದು, ಭೇದವಿಲ್ಲದೆ ಎಲ್ಲರೂ ಅಣ್ಣತಮ್ಮಂದಿರಂತೆ ಇರುವುದು ಮುಂತಾದುವನ್ನೆಲ್ಲ ಕಲಿಸಿಕೊಡುತ್ತಾರೆ. ಚೊಕ್ಕಟವಾಗಿರುವುದು, ಒಪ್ಪವಾಗಿ ಸಾಮಾನುಗಳನ್ನು ಇಟ್ಟುಕೊಳ್ಳುವುದು, ಕೆಲಸವನ್ನು ಶ್ರದ್ಧೆಯಿಂದ ಮಾಡುವುದು, ಇವೆಲ್ಲ ಬರುತ್ತವೆ.

ಮಾ.—ಒಳ್ಳೆಯದು ರಂಗೇಗೌಡ. ಪಾಠಶಾಲೆಗೆ ನಡೆ. ನನ್ನ ಮಗನನ್ನೂ ಸೇರಿಸುತ್ತೇನೆ.

ಪ್ರಶ್ನೆ

ವಿದ್ಯೆ ಎಲ್ಲರಿಗೂ ಬೇಕು ಎಂದು ಹೇಳಿದೆಯಲ್ಲ—ಏಕೆ ಬೇಕು? ಪಾಠಶಾಲೆಯಲ್ಲಿ ನೀವು ಕಲಿಯಬೇಕಾದದ್ದು ಏನು? ಈ ಪಾಠದಿಂದ ಆರು ನಾಮಪದಗಳನ್ನೂ, ಆರು ಕ್ರಿಯಾಪದಗಳನ್ನೂ, ನಾಲ್ಕು ಸರ್ವನಾಮಗಳನ್ನೂ ತೆಗೆದು ಹೇಳಿ.

೩. ಕಷ್ಟಪಟ್ಟರೆ ಫಲವುಂಟು



ಒಬ್ಬ ಮನುಷ್ಯ ಬಾಡಿಗೆಗೆ ಗಾಡಿ ಹೊಡೆದು ಜೀವಿಸುತ್ತಿದ್ದನು. ಒಂದು ದಿನ ಇವನ ಗಾಡಿ ಕೆಸರಿನಲ್ಲಿ ಹೂತುಕೊಂಡಿತು. ಎತ್ತು ಎಳೆಯಲಾರದೆ ಹೋಯಿತು. ಆಗ ಗಾಡಿಯವನು ಅಲ್ಲಿ ಕುಳಿತುಕೊಂಡು "ಅಯ್ಯೋ ದೇವರೆ! ನನ್ನ ಗತಿ ಹೀಗಾಯಿತು. ಗಾಡಿ ಇಲ್ಲಿ ಹೂತುಹೋಯಿತು. ಇನ್ನು ನನ್ನ ಜೀವನಕ್ಕೆ ಏನುಮಾಡಲಿ? ನಿತ್ಯವೂ ಬಾಡಿಗೆಯಿಂದ ಹಣವಡ್ಡವನ್ನು ಸಂಪಾದಿಸಿಕೊಳ್ಳುತ್ತಿದ್ದೆನು. ಈಗ ಅದಕ್ಕೂ ಕಲ್ಲು ಬಿತ್ತು. ಅಯ್ಯೋ ನನ್ನ ಮಕ್ಕಳಿಗೆ ಇನ್ನೇನು ಗತಿ!" ಎಂದು ಗೋಳಾಡುತ್ತಿದ್ದನು.

ಆ ಸಮಯಕ್ಕೆ ಸರಿಯಾಗಿ ಒಬ್ಬ ಮುದುಕ ಅಲ್ಲಿಗೆ ಬಂದನು. ಆ ಗಾಡಿಯವನನ್ನು ನೋಡಿ "ಅಪ್ಪಾ! ಏಕೆ ಅಳುತ್ತೀಯೆ? ಸುಮ್ಮನೆ ಅತ್ತರೆ ಗಾಡಿ ಮೇಲಕ್ಕೆ ಎದ್ದೀತೇ? ಕೆಸರಲ್ಲಿ ಇಳಿದು ಚಕ್ರವನ್ನು ಹಿಡಿದು ಬಲವಾಗಿ ಮೇಲಕ್ಕೆ ಎತ್ತು. ದೇವರು ನಿನಗೆ ಸಹಾಯ ಮಾಡುತ್ತಾನೆ. ಅದನ್ನು ಹೊರಕ್ಕೆ ತೆಗೆಯುವ ಪ್ರಯತ್ನಮಾಡು. ಸುಮ್ಮನೆ ಹಲುಬಿದರೆ ಏನಾಯಿತು?" ಎಂದನು.

ಆಗ ಬಂಡಿಯವನು ಎದ್ದು ಕೆಸರಲ್ಲಿ ಇಳಿದು ಬಂಡಿಯ ಚಕ್ರವನ್ನು ಮೇಲಕ್ಕೆ ಎತ್ತಿದನು. ಎತ್ತು ಗಾಡಿಯನ್ನು ಸರಾಗವಾಗಿ ಮುಂದಕ್ಕೆ ಎಳೆದುಕೊಂಡುಹೋಯಿತು.

ಆದ್ದರಿಂದ ಕಷ್ಟಪಡುವವನಿಗೆ ಕೆಲಸ ಕೈಗೂಡುವುದು. ಕೈ ಕೆಸರಾದರೆ ಬಾಯಿ ಮೊಸರಾಗುವುದು.

ಪ್ರಶ್ನೆ

ಬಾಡಿಗೆ, ಹಲುಬು, ಪ್ರಯತ್ನ, ಕಲ್ಲುಬಿತ್ತು—ಇವುಗಳ ಅರ್ಥವೇನು? ಈ ಕಥೆಯನ್ನು ನಿಮ್ಮ ಮಾತಿನಲ್ಲಿ ಹೇಳಿ. ಇದರ ನೀತಿಯೇನು? ಈ ಪಾಠದ ಬರೆಯುವ ಚಿಹ್ನೆಗಳನ್ನು ಗಮನಿಸಿ.

“....” ! ? } ಈ ಗುರುತು ಏನು ಸೂಚಿಸುತ್ತದೆ? ಇವು ಬರುವ ವಾಕ್ಯಗಳನ್ನು ಓದಿ ಅರ್ಥಮಾಡಿ.

ಈ ಪಾಠದ ಸರ್ವನಾಮ, ನಾಮಪದ, ಕ್ರಿಯಾಪದಗಳನ್ನು ವಿಂಗಡಿಸಿ.

೪. ನಕಲಿಯ ಶಾಮ

ಒಂದೂರಿನಲ್ಲಿ ಒಬ್ಬ ದೊರೆ ಇದ್ದನು. ಆತನ ಹತ್ತಿರ ನಕಲಿಯ ಶಾಮನೆಂಬ ಒಬ್ಬ ಹಾಸ್ಯಗಾರ ಇದ್ದನು. ಒಂದು ದಿನ ಇವನಮೇಲೆ ರಾಜನಿಗೆ ಕೋಪ ಬಂತು. “ಎಲಾ ನಕಲಿಯ ಶಾಮ! ನಾಳೆಯಿಂದ ನಿನ್ನ ಮುಖ ತೋರಿಸಬೇಡ” ಎಂದನು.

ನಕಲಿಯ ಶಾಮನು ಮಾರನೆಯ ದಿನ ಬೆಳಗಿನ ಜಾವಕ್ಕೆ ಎದ್ದನು. ಒಂದು ಮಡಕೆಯನ್ನು ತೆಗೆದುಕೊಂಡು, ಅದರಲ್ಲಿ ಕಣ್ಣು ಕಾಣಿಸುವಂತೆ ಎರಡು ತೂತನ್ನು ಮಾಡಿ ಮುಖಕ್ಕೆ ಕವಿಚಿಕೊಂಡನು. ಹೀಗೆ ಮುಖವನ್ನು ಮರಸಿಕೊಂಡು, ದೊರೆ ಏಳುವುದಕ್ಕೆ ಮುಂಚೆಯೆ, ಅವನು ಮಲಗುವ ಮನೆಯ ಬಾಗಿಲಿಗೆ ಹೋಗಿ ನಿಂತಿದ್ದನು.

ಬೆಳಗಾಗುತ್ತ ಬಂತು. ಅರಸನ ಹತ್ತಿರ ಮಲಗಿದ್ದ ಮಗು ಎದ್ದು ಬಂತು. ಕತ್ತಿನಿಂದ ಕೆಳಕ್ಕೆ ಮನುಷ್ಯನೂ, ಕತ್ತಿನಿಂದ ಮೇಲಕ್ಕೆ ಕರಿಯ ಮಡಕೆಯೂ ಆಗಿದ್ದ ರೂಪವನ್ನು ಕಂಡು ಭಯದಿಂದ ಕಿಟ್ಟನೆ ಕಿರಿಚಿಕೊಂಡಿತು. ಅರಸನು ಗಾಬರಿಯಾಗಿ ಎದ್ದು ನೋಡಿದನು. ಮಗು ಅಳುತ್ತಾ ನಿಂತಿತ್ತು. ಅದರ ಎದುರಿಗೆ ಮಡಕೆ ಕವಿಚಿಕೊಂಡಿದ್ದ ಮನುಷ್ಯನು ದೊರೆಗೆ ನಮಸ್ಕಾರ ಮಾಡಿದನು. “ಮಹಾಸ್ವಾಮಿ, ನಾನು ನಕಲಿಯ ಶಾಮ. ಇಂದಿನಿಂದ ಮುಖ ತೋರಿಸಬೇಡವೆಂದು ಅಪ್ಪಣೆ ಆಗಿತ್ತು.

ಆದರಿಂದ ನನ್ನ ಮುಖ ತಮಗೆ ಕಾಣದಹಾಗೆ ಮಡಕೆ ಕವಿಚಿಕೊಂಡಿದ್ದೇನೆ. ಕ್ಷಮಿಸಬೇಕು'' ಎಂದನು.

ದೊರೆ ನಕ್ಕು ಅವನನ್ನು ಮನ್ನಿಸಿದನು.

ಪ್ರಶ್ನೆ

ಹಾಸ್ಯಗಾರ, ನಕಲಿ, ಮರಸು, ಗಾಬರಿ, ಮನ್ನಿಸು—ಇವುಗಳ ಅರ್ಥವನ್ನು ಹೇಳಿ. " " ಈ ಗುರುತು ಈ ಪಾಠದಲ್ಲಿ ಏತಕ್ಕೆ ಹಾಕಿದೆ? ನಕಲಿಯ ಶಾಮನು ಮಡಕೆಯನ್ನು ಏಕೆ ಕವಿಚಿಕೊಂಡ? ದೊರೆ ಏನುಮಾಡಿದ? ಒಂದೂರು, ಎರಡು ತೂತು—ಇಲ್ಲಿ ಒಂದು, ಎರಡು ಸಂಖ್ಯಾವಾಚಕಗಳು. ಎಂದರೆ, ಸಂಖ್ಯೆಯನ್ನು ಹೇಳುವ ಶಬ್ದಗಳು. ಹೀಗೆಯೇ ಮೂರು, ನಾಲ್ಕು ಮುಂತಾದುವು ಸಂಖ್ಯಾವಾಚಕಗಳು. ಒಬ್ಬ, ಇಬ್ಬರು ಮುಂತಾದುವೂ ಈ ಜಾತಿಯ ಶಬ್ದಗಳೇ.

೫. ಮನೆಯ ತೋಟ

ಮನೆಯ ಮುಂದೆ ಹೂವಿನ ಗಿಡಗಳಿದ್ದರೆ ಎಷ್ಟು ಚೆನ್ನಾಗಿರುತ್ತದೆ! ಆ ಗಿಡಗಳ ನಡುವೆ ಕುಳಿತುಕೊಂಡರೆ ನಮಗೆ ಎಷ್ಟು ಸಂತೋಷ ವಾಗುವುದು! ಮನೆಯ ಸುತ್ತಲೂ ಹೂವು ಹಣ್ಣುಗಳ ಚಿಕ್ಕ ತೋಟವಿರಬೇಕು. ಅದರಿಂದ ಮನೆಯ ಅಂದ ಹೆಚ್ಚುತ್ತದೆ.

ಮನೆಯ ತೋಟದಲ್ಲಿ ಎಂಥ ಗಿಡಗಳನ್ನು ಬೆಳೆಯಬಹುದು? ದೇವರ ಪೂಜೆಗೆ ಬೇಕಾದ ಹೂವು ಗಿಡಗಳನ್ನು ಬೆಳೆಯಬಹುದು. ಕೆಲವು ಹೂವುಗಳ ಬಣ್ಣ ಬಹಳ ಸೊಗಸು. ಕೆಲವು ಹೂವುಗಳ ವಾಸನೆ ಬಹಳ ಇಂಪು. ಕೆಲವು ಹೂವುಗಳ ಬಣ್ಣ ಮತ್ತು ವಾಸನೆ, ಎರಡೂ ಸೊಂಪು. ಹೂವುಗಳಲ್ಲಿ ಮಲ್ಲಿಗೆ, ಜಾಜಿ, ಸುಗಂಧರಾಜ, ಸೇವಂತಿಗೆ, ಗುಲಾಬಿ, ಪಾರಿಜಾತ ಮುಂತಾದ ಬಗೆಗಳಿವೆ. ಇವುಗಳನ್ನೆಲ್ಲ ಮನೆಯ ಮುಂದೆ ಬೆಳೆಯಬಹುದು.

ಮಲ್ಲಿಗೆ ಬೆಳ್ಳಗಿರುತ್ತದೆ. ಅದರಲ್ಲಿ ದುಂಡುಮಲ್ಲಿಗೆ, ಸೂಜಿಮಲ್ಲಿಗೆ, ಕೋಲುಮಲ್ಲಿಗೆ ಮತ್ತು ಸುತ್ತುಮಲ್ಲಿಗೆ ಮೊದಲಾದ ವಿಧಗಳುಂಟು. ಜಾಜಿಯಲ್ಲಿ ಬಿಳಿ, ಹಳದಿ ಮತ್ತು ಕೆಂಪು ಬಣ್ಣದ ಹೂವುಗಳಿರುತ್ತವೆ. ಜಾಜಿಯ ಹೂವು ಹಗುರ; ಬಹು ಮೃದು; ಬೇಗ ಬಾಡುವುದು. ಸುಗಂಧರಾಜ ಪುಷ್ಪ ಉದ್ದ, ಇದು ಬೆಳ್ಳಗಿರುತ್ತದೆ, ಇದರ ರೇಕು ದಪ್ಪ.

ಸೇವಂತಿಗೆಯಲ್ಲಿ ಹಳದಿ, ಬಿಳುಪು, ಕೆಂಪು ಮತ್ತು ನೀಲಿ ಬಣ್ಣದ ಹೂವುಗಳುಂಟು. ಇದರ ವಾಸನೆ ಇಂಪಲ್ಲ. ಹೂವು ಜಾಗ್ರತೆ ಬಾಡುವುದಿಲ್ಲ. ಗುಲಾಬಿ ಹೂವು ಬಣ್ಣದಲ್ಲಿಯೂ ವಾಸನೆಯಲ್ಲಿಯೂ ಮಿಗಿಲಾದುದು. ಇದರಲ್ಲಿ ನಾನಾ ವರ್ಣದ ಹೂವುಗಳುಂಟು. ಆದರೆ ಬಿಳುಪು ಮತ್ತು ಕೆಂಪು ಮಿಶ್ರದಿಂದ ಆಗುವ ಗುಲಾಬಿ ಬಣ್ಣದ ಹೂವುಗಳೇ ಹೆಚ್ಚು.

ಮನೆಯ ತೋಟದಲ್ಲಿ ಕೆಲವು ಹಣ್ಣಿನ ಗಿಡಗಳನ್ನೂ ಬೆಳೆಯಬಹುದು. ನಿಂಬೆ, ದಾಳಿಂಬೆ, ಬಾಳೆ, ಸೀಬೆ ಮುಂತಾದುವು ಉಪಯೋಗಕ್ಕೆ ಬರುತ್ತವೆ. ಕೆಲವರು ಚಕ್ಕೋತ, ಮಾವು ಮತ್ತು ಹಲಸಿನ ಮರಗಳನ್ನೂ ಬೆಳೆಯುತ್ತಾರೆ. ಈ ಹಣ್ಣುಗಳೆಲ್ಲ ರುಚಿಯಾಗಿರುತ್ತವೆ.

ನಮ್ಮ ಊಟಕ್ಕೆ ಬೇಕಾದ ತರಕಾರಿಗಳನ್ನು ಹಿತ್ತಿಲಲ್ಲಿ ಬೆಳೆಯಬಹುದು. ತರಕಾರಿಗಳಲ್ಲಿ ಬದನೆಯಕಾಯಿ, ಬೆಂಡೆಯಕಾಯಿ, ಹೀರೆಕಾಯಿ, ಪಡಲಕಾಯಿ, ಸೌತೆಕಾಯಿ, ಮೂಲಂಗಿ ಮುಂತಾದುವು ಉಂಟು. ಸೊಪ್ಪುಗಳಲ್ಲಿ ದಂಟು, ಕೀರೆಸೊಪ್ಪು, ಮೆಂತೆಯಸೊಪ್ಪು, ಮುಖ್ಯವಾದುವು. ಇವುಗಳಿಂದ ತಾಳದ, ಹುಳಿ, ಗೊಜ್ಜು ಮುಂತಾದ ವ್ಯಂಜನಗಳನ್ನು ಮಾಡುತ್ತಾರೆ.

ಹುಡುಗರು ತೋಟವನ್ನು ಸ್ವಂತವಾಗಿ ಮಾಡಬೇಕು. ತೋಟದಲ್ಲಿರುವ ಗಿಡಮರಗಳನ್ನು ಅಕ್ಕರೆಯಿಂದ ಕಾಣಬೇಕು. ಅವುಗಳಿಗೆ ಆಗಾಗ ನೀರನ್ನು ಹಾಕಿ ಸಾಕಬೇಕು. ಒಳ್ಳೆಯ ಹುಡುಗರು ಗಿಡಮರಗಳನ್ನು ನೋಯಿಸುವುದಿಲ್ಲ; ಅವುಗಳ ರೆಂಬೆಗಳನ್ನು ಮುರಿಯುವುದಿಲ್ಲ, ಹೂವುಗಳನ್ನು ಕೀಳುವುದಿಲ್ಲ. ಅವುಗಳನ್ನು ಪ್ರೀತಿಯಿಂದ ಬೆಳಸುತ್ತಾರೆ.

ಪ್ರಶ್ನೆ

ಸಂತೋಷ, ಇಂಪು, ವಾಸನೆ, ವಿಧ, ಮಿಗಿಲು, ವ್ಯಂಜನ, ಅಕ್ಕರೆ—ಇವುಗಳ ಅರ್ಥವನ್ನು ಹೇಳಿ. ಮನೆಯ ತೋಟದಲ್ಲಿ ಏನೇನು ಬೆಳೆಯಬಹುದು? ನಿಮ್ಮ ಮನೆಯಲ್ಲಿ ನೀವು ತೋಟ ಮಾಡಿದ್ದೀರಾ? ಅದರಲ್ಲಿ ಏನೇನು ಬೆಳಸಿದ್ದೀರಿ? ವಸ್ತುಗಳ ಗುಣಗಳನ್ನು ಹೇಳುವ ಶಬ್ದಗಳು ಗುಣವಾಚಕಗಳು. ಉದಾ: ಚಿಕ್ಕ, ದುಂಡು, ಮೃದು, ಹಗುರ.

೬. ಹತ್ತಿ



ಹತ್ತಿಯು ಗಿಡದಿಂದ ಜನರಿಗೆ ಬಹಳ ಉಪಯೋಗವಿದೆ. ಹತ್ತಿಯಿಂದ ನೂಲೂ, ನೂಲಿನಿಂದ ಬಟ್ಟೆಯೂ ಆಗುತ್ತವೆ. ನಮ್ಮ ದೇಶದ ಜನರು ಹತ್ತಿಯ ಬಟ್ಟೆಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ. ಉಣ್ಣೆ, ನಾರು ಮತ್ತು ರೇಷ್ಮೆ, ಇವುಗಳಿಂದಲೂ ಬಟ್ಟೆಗಳು ಆಗುತ್ತವೆ.

ಹತ್ತಿಯ ಗಿಡದಲ್ಲಿ ಕೆಲವು ಜಾತಿಗಳುಂಟು. ಒಂದು ಜಾತಿಯ ಗಿಡ ಸುಮಾರು ಎರಡಡಿ ಎತ್ತರ ಬೆಳೆಯುತ್ತದೆ. ನಮ್ಮ ದೇಶದಲ್ಲಿ ಇದನ್ನು ಹೊಲಗಳಲ್ಲಿ ವಿಶೇಷವಾಗಿ ಬೆಳೆಯುತ್ತಾರೆ. ಇನ್ನೊಂದು ಜಾತಿಯ ಗಿಡ ಇಪ್ಪತ್ತು ಅಡಿ ಎತ್ತರ ಬೆಳೆಯುತ್ತದೆ. ಇದೇ ಜಡೆಹತ್ತಿ ಗಿಡ. ಇದನ್ನು ಮನೆಯ ಹಿತ್ತಿಲಲ್ಲಿಯೂ ತೋಟಗಳಲ್ಲಿಯೂ ಬೆಳೆಯುತ್ತಾರೆ.

ಹತ್ತಿಯ ಹೂವು ಸಾಮಾನ್ಯವಾಗಿ ಹಳದಿ ಬಣ್ಣವಾಗಿ ಇರುತ್ತದೆ. ಆಕಾರದಲ್ಲಿ ದಾಸವಾಳ, ಬೆಂಡೆ, ದೊಡ್ಡ ಜಿಂದಿಗೆ ಹೂವುಗಳನ್ನು ಹೋಲುತ್ತದೆ. ಹೂವಿಂದ ಮುಮ್ಮೂಲೆಯ ಕಾಯಾಗುವುದು. ಕಾಯಿ ಬಲಿಯುತ್ತ ಬಂದರೆ ಒಳಗೆ ತೊಳೆಗಳು ಕಾಣಿಸಿಕೊಳ್ಳುತ್ತವೆ. ಒಂದೊಂದು ಕಾಯಿಯಲ್ಲಿ ಮೂರು ತೊಳೆಗಳು ಇರುತ್ತವೆ. ಕಾಯಿ ಒಣಗಿ ಬಿರಿದಾಗ ಈ ತೊಳೆಗಳೇ ಹತ್ತಿಯಾಗಿ ಹರಡುತ್ತವೆ. ಹತ್ತಿಯಲ್ಲಿ ಬೀಜಗಳು ಹುದುಗಿಕೊಂಡು ಇರುತ್ತವೆ. ಬೀಜಗಳ ಬಣ್ಣ ಕಪ್ಪು. ಹತ್ತಿ ಎಳೆ

ಎಳೆಯಾಗಿ ಬೀಜಗಳಿಗೆ ಅಂಟಿಕೊಂಡಿರುತ್ತದೆ. ಎಳೆಗಳು ಉದ್ದವಾಗಿರುವ ಹತ್ತಿ ಉತ್ತಮವಾದದ್ದು.

ಹತ್ತಿಯ ಬೆಳೆ ಪುಷ್ಯ ಮತ್ತು ಮಾಘ ಮಾಸಗಳಲ್ಲಿ ಬರುತ್ತದೆ. ಆಗ ಜನರು ಹತ್ತಿಯನ್ನು ಗಿಡದಿಂದ ಬಿಡಿಸಿ ಬುಟ್ಟಿಗಳಲ್ಲಿ ತುಂಬಿ ತರುತ್ತಾರೆ. ಆ ಹತ್ತಿಯನ್ನು ರಾಟೆಗೆ ಕೊಟ್ಟು ಬೀಜವನ್ನು ಬೇರೆ ಮಾಡುತ್ತಾರೆ. ಬೀಜ ತೆಗೆದ ಹತ್ತಿಗೆ "ಅರಳೆ" ಎಂದು ಹೆಸರು. ಅರಳೆಯನ್ನು ಹಂಜಿಗಳನ್ನಾಗಿ ಮಾಡಿ ಚರಕದಿಂದ ನೂಲುತ್ತಾರೆ. ನೂಲಿನಿಂದ ನವಾರ, ಧೋತ್ರ, ಪಂಚೆ, ಸೀರೆ ಮೊದಲಾದುವು ಆಗುತ್ತವೆ.

ಹತ್ತಿಯ ಬೀಜದಿಂದ ಎಣ್ಣೆ ತೆಗೆಯುವುದುಂಟು. ಈ ಎಣ್ಣೆಯನ್ನು ಅಡಿಗೆಗೆ ಉಪಯೋಗಿಸುತ್ತಾರೆ. ಇದರ ಹಿಂಡಿ ಒಳ್ಳೆಯ ಗೊಬ್ಬರ. ಬೀಜ ದನಕರುಗಳಿಗೆ ಒಳ್ಳೆಯ ಆಹಾರ.

ಹತ್ತಿಯನ್ನು ನಮ್ಮ ದೇಶದಲ್ಲಿ ಚಿತ್ರದುರ್ಗದ ಸುತ್ತಲೂ ಹೆಚ್ಚಾಗಿ ಬೆಳೆಯುತ್ತಾರೆ. ಉತ್ತರ ಕರ್ಣಾಟಕದಲ್ಲಿಯೂ ಒಂದು ಬಗೆಯ ಕಪ್ಪು ಮಣ್ಣಿನ ಭೂಮಿಯಲ್ಲಿ ತುಂಬ ಹತ್ತಿಯನ್ನು ಬೆಳೆಯುತ್ತಾರೆ. ಹತ್ತಿಯಿಂದ ಬೀಜಗಳನ್ನು ಬೇರೆಮಾಡುವ ಯಂತ್ರಗಳು ದಾವಣಗೆರೆಯಲ್ಲಿ ಬಹಳವಾಗಿ ಇವೆ. ನೂಲನ್ನೂ ಬಟ್ಟೆಗಳನ್ನೂ ಗಿರಣಿಗಳಲ್ಲಿ ಹೆಚ್ಚಾಗಿ ಮಾಡುತ್ತಾರೆ. ಇಂಥ ಗಿರಣಿಗಳು ಬೆಂಗಳೂರು ಮೈಸೂರು ಮತ್ತು ಹುಬ್ಬಳ್ಳಿಗಳಲ್ಲಿ ಇವೆ.


ಪ್ರಶ್ನೆ

ರೇಷ್ಮೆ, ಹೋಲು, ಹುದುಗು, ಅರಳೆ, ಚರಕ, ಗಿರಣಿ—ಎಂದರೇನು? ಹತ್ತಿಯನ್ನು ಎಲ್ಲೆಲ್ಲಿ ಬೆಳೆಯುತ್ತಾರೆ? ಹತ್ತಿ ಎಷ್ಟು ಬಗೆ? ಹತ್ತಿಯಿಂದ ನಮಗೆ ಏನು ಪ್ರಯೋಜನವಾಗುತ್ತದೆ? ಈ ಪಾಠದಲ್ಲಿ ಬರುವ ಸಂಖ್ಯಾವಾಚಕಗಳನ್ನು ಹೇಳಿ. ಅಂಥ, ಇಂಥ, ಎಂಥ—ಇವು ಯಾವ ಬಗೆಯ ಶಬ್ದಗಳು?

೨. ಕಾಡುಮೃಗಗಳು – ಸಾಕಿದ ಪ್ರಾಣಿಗಳು

ಕಾಡಿನಲ್ಲಿ ವಾಸಮಾಡುವ ಆನೆ, ಹುಲಿ, ಚಿರತೆ, ಕರಡಿ ಮೊದಲಾದುವುಗಳಿಗೆ ಕಾಡುಮೃಗಗಳೆಂದು ಹೆಸರು. ಇವು ಕಾಡುಗಳಲ್ಲಿ ಹುಟ್ಟಿ, ಅಲ್ಲಿಯೆ ಬೆಳೆದು ಓಡಾಡಿಕೊಂಡು ಇರುತ್ತವೆ.

ಹುಲಿ, ಚಿರತೆ, ಕಿರುಬ, ತೋಳ ಮತ್ತು ನರಿಗಳು ಇತರ ಜಂತುಗಳನ್ನು ಕೊಂದು ಅವುಗಳ ಮಾಂಸವನ್ನು ತಿನ್ನುತ್ತವೆ. ಆದುದರಿಂದ



ಇವು ಮಾಂಸಾಹಾರಿಗಳು. ಇವುಗಳ ಸ್ವಭಾವ ಕ್ರೂರ. ತಾವು ತಿನ್ನುವ ಪ್ರಾಣಿಗಳನ್ನು ಹುಲಿ, ಕಿರುಬ ಮತ್ತು ಚಿರತೆಗಳು ಹೊಂಚುಹಾಕಿ ಹಿಡಿಯುತ್ತವೆ. ಇವುಗಳಿಗೆ ರಾತ್ರಿಯಲ್ಲಿ ಕಣ್ಣು ಚೆನ್ನಾಗಿ ಕಾಣಿಸುತ್ತದೆ.

ಆನೆ, ಸಾರಗ, ಜಿಂಕೆ, ಕಾಡೆಮ್ಮೆಗಳು ಸೊಪ್ಪು, ಹುಲ್ಲು, ಜೊಂಡು ಮೊದಲಾದುವನ್ನು ತಿನ್ನುತ್ತವೆ. ಆದುದರಿಂದ ಇವು ಸಸ್ಯಾಹಾರಿಗಳು.

ಕಾಡುಮೃಗಗಳಿಂದ ಮನುಷ್ಯರಿಗೆ ನಷ್ಟವುಂಟಾಗುತ್ತದೆ. ಹುಲಿ, ಚಿರತೆ, ಕಿರುಬ, ಇವು ರೈತರ ದನಕರುಗಳನ್ನು ಹಿಡಿದು ಕೊಂದು ತಿನ್ನುವುವು. ತೋಳ ಕುರಿಗಳನ್ನು ಹಿಡಿದು ತಿನ್ನುತ್ತದೆ. ನರಿ ಊರೊಳಗೆ ಬಂದು ಕೋಳಿಗಳನ್ನು ಎತ್ತಿಕೊಂಡು ಹೋಗುವುದುಂಟು. ಒಂದೊಂದು ಬಾರಿ ನರಿಗಳು ಗುಂಪಾಗಿ ಕಬ್ಬಿನ ಗದ್ದೆಗಳಿಗೆ ನುಗ್ಗುತ್ತವೆ. ಆನೆ, ಸಾರಗ, ಜಿಂಕೆ, ಕಾಡುಹಂದಿ ಮೊದಲಾದುವು ಹೊಲ, ಗದ್ದೆ ಮತ್ತು ತೋಟಗಳಿಗೆ ನುಗ್ಗಿ ಪೈರನ್ನು ತಿಂದು ನಷ್ಟಪಡಿಸುತ್ತವೆ.

ಮನುಷ್ಯನ ಹತ್ತಿರ ಇರುವ ಹಸು, ಎಮ್ಮೆ, ಕುರಿ, ಮೇಕೆ, ಕುದುರೆ, ಕತ್ತೆ, ನಾಯಿ ಮೊದಲಾದುವು ಸಾಕಿದ ಪ್ರಾಣಿಗಳು. ಇವುಗಳೆಲ್ಲ ಒಂದಾನೊಂದು ಕಾಲದಲ್ಲಿ ಕಾಡುಮೃಗಗಳಾಗಿ ಇದ್ದುವು. ಮನುಷ್ಯನು ಯಾವಾಗಲೋ ಪೂರ್ವದಲ್ಲಿ ಅವುಗಳನ್ನು ಹಿಡಿದು ಪಳಗಿಸಿಕೊಂಡನು.

ಸಾಕಿದ ಪ್ರಾಣಿಗಳಿಂದ ಮನುಷ್ಯನಿಗೆ ಬಹಳ ಪ್ರಯೋಜನಗಳಿವೆ. ಹಸು, ಎಮ್ಮೆ ಮತ್ತು ಆಡು ಹಾಲನ್ನು ಕೊಡುತ್ತವೆ. ಎತ್ತು ಹೊಲ ಗದ್ದೆಗಳನ್ನು ಉಳುವುದಕ್ಕೂ, ಬಂಡಿ ಎಳೆಯುವುದಕ್ಕೂ ಉಪಯೋಗ ವಾಗಿದೆ. ಕುದುರೆ ಸವಾರಿಗೆ ಬರುತ್ತದೆ, ಗಾಡಿಗೂ ಕಟ್ಟುತ್ತೇವೆ. ನಾಯಿ ಮನೆಯನ್ನೂ ಕುರಿ ಮಂದೆಯನ್ನೂ ಕಾಯುತ್ತದೆ. ದನ, ಕುರಿ, ಮೇಕೆ ಮತ್ತು ಹಂದಿಗಳ ಮಾಂಸವನ್ನು ಕೆಲವರು ತಿನ್ನುತ್ತಾರೆ. ಈ ಪ್ರಾಣಿಗಳ ಚರ್ಮ ಅನೇಕ ಕೆಲಸಗಳಿಗೆ ಬರುತ್ತದೆ.

ಪ್ರಶ್ನೆ

ಕಾಡುಮೃಗಗಳು ಯಾವುವು? ಸಾಕಿದ ಪ್ರಾಣಿಗಳು ಯಾವುವು? ಜಂತು, ಸ್ವಭಾವ, ಸಸ್ಯಾಹಾರಿ, ಮಾಂಸಾಹಾರಿ, ನಷ್ಟ, ಪಳಗಿಸು—ಎಂದರೇನು? ಕಾಡು ಮೃಗಗಳಿಂದ ನಮಗೆ ಏನು ಅಪಾಯ? ಪಳಗಿಸಿದ ಪ್ರಾಣಿಗಳಿಂದ ನಮಗೆ ಏನು ಲಾಭ? ಈ ಪಾಠದಲ್ಲಿ ಬರುವ ಗುಣವಾಚಕ, ಸಂಖ್ಯಾವಾಚಕಗಳನ್ನು ಹೇಳಿ. ಬಹಳ, ಅನೇಕ—ಇವು ಯಾವ ಬಗೆಯ ಶಬ್ದಗಳು?

೮. ಮಳೆ ಮೋಡ

ಹುಡುಗ—ಮೋಡ ಎಂದರೇನು?

ಉಪಾಧ್ಯಾಯ—ಮೋಡ ಎನ್ನುವುದು ಆಕಾಶದಲ್ಲಿ ತೇಲುವ ಮಂಜು. ನೀರಿನ ಆವಿ ಮೇಲಕ್ಕೆ ಹೋದಾಗ ತಣ್ಣಗಾಗಿ ತುಂತುರಾಗುತ್ತದೆ. ಈ ತುಂತುರುಗಳ ಗುಂಪೇ ಮೋಡ.

ಹು.—ಆವಿ ಏತಕ್ಕೆ ಆಗುತ್ತದೆ?

ಉ.—ಭೂಮಿಯಮೇಲೆ ಕೆರೆ, ಹೊಳೆ, ಸರೋವರ, ಸಮುದ್ರ ಎಂಬ ನೀರಿನ ಭಾಗಗಳಿವೆ. ಸೂರ್ಯನ ಶಾಖದಿಂದ ಆ ನೀರು ಕಾದು ಹಬೆಯಾಗುತ್ತದೆ. ಆ ಹಬೆ ಕಣ್ಣಿಗೆ ಕಾಣುವುದಿಲ್ಲ. ಈಗ ಒಂದು ಒದ್ದೆ ಬಟ್ಟೆಯನ್ನು ಹಿಂಡಿ ಒಣಗಹಾಕಿದರೆ ಕೆಲವು ಕಾಲದಮೇಲೆ ಬಟ್ಟೆ ಒಣಗು ವುದು. ಅದರಲ್ಲಿದ್ದ ನೀರು ಕಣ್ಣಿಗೆ ಕಾಣದೆ ಆವಿಯಾಗಿ ಹೋಯಿತು.

ಹು.—ಮಳೆ ಯಾವಾಗ ಬೀಳುತ್ತದೆ?

ಉ.—ಮೋಡಗಳು ಹೆಚ್ಚುತ್ತ ಬಂದಾಗ ಅವುಗಳಲ್ಲಿ ನೀರು ಹೆಚ್ಚಾಗುತ್ತದೆ. ತುಂತುರುಗಳು ಒಂದಕ್ಕೊಂದು ಸೇರಿ ಹನಿಗಳಾಗುತ್ತವೆ.

ಹನಿಗಳು ಭಾರವಾಗಿರುವುದರಿಂದ ಆಕಾಶದಲ್ಲಿ ನಿಲ್ಲದೆ ಭೂಮಿಯಮೇಲೆ ಬೀಳುತ್ತವೆ. ಇದೇ ಮಳೆ. ಮಳೆ ಬರುವ ಮೊದಲು ಮೋಡಗಳು ಕಪ್ಪಗೆ ಕಾಣುವುದುಂಟು. ಆಗ ನೀರು ಹೆಚ್ಚಾಗಿದೆಯೆಂದೂ ಆ ನೀರು ಮಳೆಯಾಗಿ ಬೀಳುವುದೆಂದೂ ತಿಳಿಯಬೇಕು.

ಹು.—ಗುಡುಗು ಮಿಂಚು ಏಕಾಗುತ್ತವೆ?

ಉ.—ಮೋಡಗಳಲ್ಲಿ ವಿದ್ಯುಚ್ಛಕ್ತಿ ಸೇರಿರುತ್ತದೆ.

ಹು.—ವಿದ್ಯುಚ್ಛಕ್ತಿ ಎಂದರೇನು?

ಉ.—ಅದು ಒಂದು ಬಗೆಯ ಶಕ್ತಿ. ಅದು ಮಿಂಚನ್ನೂ ಗುಡುಗನ್ನೂ ಉಂಟುಮಾಡುತ್ತದೆ. ಮಿಂಚು ವಿದ್ಯುತ್ತಿನ ದೊಡ್ಡ ಕಿಡಿ. ಈ ಕಿಡಿ ಹಾರುವಾಗ ಗಾಳಿ ನುಗ್ಗಿ ಗುಡುಗುಡು ಎಂದು ಸದ್ದಾಗುತ್ತದೆ. ಆ ಸದ್ದೇ ಗುಡುಗು. ಮಿಂಚೂ ಗುಡುಗೂ ಒಂದೇ ಕಾಲದಲ್ಲಿ ಉಂಟಾಗುತ್ತವೆ. ಆದರೆ ಸದ್ದು ನಿಧಾನವಾಗಿ ನಮ್ಮ ಹತ್ತಿರಕ್ಕೆ ಬರುತ್ತದೆ. ಮಿಂಚು ಮಾತ್ರ ಕಣ್ಣು ಮಿಟುಕಿಸುವಷ್ಟರಲ್ಲಿ ಥಳಾರನೆ ಹೊಳೆದುಬಿಡುತ್ತದೆ.

ಹು.—ಸಿಡಿಲು ಎಂದರೇನು!

ಉ.—ಮಿಂಚು ಒಂದೊಂದುವೇಳೆ ಭೂಮಿಗೆ ಸಮೀಪದಲ್ಲಿ ಹಾರುವುದುಂಟು. ಆಗ ಅದು ಮನೆಗಳನ್ನೋ ಮರಗಳನ್ನೋ ಅಪ್ಪಳಿಸಿ ಉರಿಸಿಬಿಡುತ್ತದೆ. ಹೀಗೆ ಮಿಂಚು ಭೂಮಿಗೆ ಹತ್ತಿರದಲ್ಲಿ ಆರ್ಭಟದಿಂದ ಹಾರಿದರೆ ಸಿಡಿಲು ಎನ್ನುತ್ತೇವೆ. ಸಿಡಿಲಿನ ಮೊಳಗು ಬಹಳ ಭಯವನ್ನುಂಟುಮಾಡುತ್ತದೆ.

ಪ್ರಶ್ನೆ

ಹುಡುಗರು ಉಪಾಧ್ಯಾಯರನ್ನು ತಮಗೆ ತಿಳಿಯದ ವಿಷಯವನ್ನು ತಿಳಿದುಕೊಳ್ಳುವುದಕ್ಕಾಗಿ ಪ್ರಶ್ನೆ ಹಾಕಬೇಕು. ಹೇಳಿದ್ದು ತಿಳಿಯದೆಹೋದರೆ ತಿರುಗಿ ಪ್ರಶ್ನೆ ಕೇಳಿ, ಚೆನ್ನಾಗಿ ತಿಳಿದುಕೊಳ್ಳಬೇಕು.

ಈ ಪಾಠದಲ್ಲಿ ಹುಡುಗನು ಪ್ರಶ್ನೆಗಳನ್ನು ಹಾಕಿ ಉಪಾಧ್ಯಾಯರಿಂದ ಮಳೆಯ ವಿಷಯವನ್ನೆಲ್ಲಾ ತಿಳಿಯುತ್ತಾನೆ. ಓದಿದ್ದು ಹೇಳಿದ್ದು ಹುಡುಗರಿಗೆ ತಿಳಿಯಿತೋ ಇಲ್ಲವೋ ಕಂಡುಕೊಳ್ಳುವುದಕ್ಕೆ ಉಪಾಧ್ಯಾಯರು ಹುಡುಗರಿಗೆ ಪ್ರಶ್ನೆ ಹಾಕುತ್ತಾರೆ. ಹುಡುಗರು ಕೇಳಿದ ಪ್ರಶ್ನೆಯನ್ನು ಚೆನ್ನಾಗಿ ತಿಳಿದುಕೊಂಡು, ಸರಿಯಾದ ಉತ್ತರವನ್ನು ಕೊಡಬೇಕು.

ಈ ಪಾಠದ ಪ್ರಶ್ನೆಗಳಿಗೆ ಉತ್ತರವನ್ನು ಕೊಡಿ. ಮೋಡ, ಆವಿ, ಮಳೆ, ಗುಡುಗು, ಮಿಂಚು, ಸಿಡಿಲು—ಇವು ಹೇಗೆ ಆಗುತ್ತವೆ?

೯. ಭೂಮಿ, ಆಕಾಶ

ನಾವು ತಿರುಗಾಡುವ ಈ ನೆಲವೇ ಭೂಮಿ. ಭೂಮಿಯ ಮೇಲೆ ನಾವು ಮನೆಗಳನ್ನು ಕಟ್ಟಿಕೊಂಡಿದ್ದೇವೆ. ನಮ್ಮ ಹೊಲ, ಗದ್ದೆ, ತೋಟಗಳು ಈ ಭೂಮಿಯ ಮೇಲೆಯೆ ಇವೆ. ನಾವು ಸಾಕಿಕೊಂಡಿರುವ ಪ್ರಾಣಿಗಳು, ಕಾಡಿನಲ್ಲಿರುವ ಮೃಗಗಳು ಭೂಮಿಯಮೇಲೆ ವಾಸಮಾಡುತ್ತವೆ.

ಪಕ್ಷಿಗಳು ಹಾರಾಡುವುದು ಆಕಾಶದಲ್ಲಿ. ತಲೆಯೆತ್ತಿ ನೋಡಿದರೆ ಆಕಾಶ ಕಾಣುತ್ತದೆ. ಆಕಾಶದಲ್ಲಿ ಮೋಡಗಳು ತೇಲಾಡಿಕೊಂಡು ನಿಂತಿರುತ್ತವೆ. ಹಲವು ವೇಳೆ ಗಾಳಿಯ ಹೊಡೆತದಿಂದ ಈ ಮೇಘಗಳು ಓಡುತ್ತಲೂ ಇರುತ್ತವೆ. ಮೋಡಗಳಿಲ್ಲದಾಗ ಆಕಾಶ ನೀಲಿಯ ಬಣ್ಣವಾಗಿ ಕಾಣುತ್ತದೆ.

ಹಗಲು ಆಕಾಶದಲ್ಲಿ ಯಾರು ಪ್ರಕಾಶಿಸುತ್ತಾರೆ? ಸೂರ್ಯನಲ್ಲವೆ? ಸೂರ್ಯನಿಂದ ನಮಗೆ ಶಾಖವೂ ಬೆಳಕೂ ಸಿಕ್ಕುತ್ತವೆ. ಸೂರ್ಯನನ್ನು ಮೋಡಗಳು ಮುಚ್ಚಿದಾಗ ಅವನ ಕಾಂತಿ ಕಡಮೆಯಾಗುತ್ತದೆ. ಒಂದೊಂದು ಬಾರಿ ಮೋಡಗಳು ಆಕಾಶದಲ್ಲಿ ಹೆಚ್ಚಾಗಿ ಸೇರಿ, ಮಳೆ ಸುರಿಸುವುದುಂಟು. ಸೂರ್ಯನ ಬಿಸಿಲು ಈ ಮಳೆಯ ಹನಿಗಳಮೇಲೆ ಬಿದ್ದಾಗ ಆಕಾಶದಲ್ಲಿ ಕಾಮನ ಬಿಲ್ಲು ಮೂಡುತ್ತದೆ. ಸೂರ್ಯ ಹುಟ್ಟುವಾಗಲೂ ಮುಳುಗುವಾಗಲೂ ಅವನ ಬೆಳಕು ಮೋಡಗಳಮೇಲೆ ಬಿದ್ದು ಮೋಡಗಳು ಬಗೆ ಬಗೆಯ ಬಣ್ಣಗಳಿಂದ ಹೊಳೆಯುತ್ತವೆ.

ರಾತ್ರಿ ಆಕಾಶದಲ್ಲಿ ಚಂದ್ರ ಮತ್ತು ನಕ್ಷತ್ರಗಳು ಕಾಣಿಸುತ್ತವೆ. ಚಂದ್ರ ಕೆಲವು ದಿವಸಗಳವರೆಗೆ ತುಂಬುತ್ತ ಬೆಳೆಯುವನು. ಕೆಲವು ದಿವಸಗಳವರೆಗೆ ಸವೆಯುತ್ತ ಕರಗುವನು. ಅವನು ಬೆಳೆಯುವಾಗ ಶುಕ್ಲಪಕ್ಷ, ಕರಗುವಾಗ ಕೃಷ್ಣಪಕ್ಷ. ನಕ್ಷತ್ರಗಳು ಕರಗದೆ ಬೆಳೆಯದೆ ಒಂದೇ ರೀತಿ ಥಳಥಳಿಸುತ್ತವೆ.

ಆಕಾಶದಲ್ಲಿ ಸೂರ್ಯ ಚಂದ್ರ ನಕ್ಷತ್ರಗಳಲ್ಲದೆ ಗ್ರಹಗಳೂ ಇವೆ. ನಾವು ವಾಸಮಾಡುವ ಭೂಮಿ ಒಂದು ಗ್ರಹ. ಇದು ಸೂರ್ಯನ ಸುತ್ತಲೂ ತಿರುಗುತ್ತದೆ. ಭೂಮಿ ಇತರ ಗ್ರಹಗಳಂತೆ ಗುಂಡಾಗಿದೆ. ಆದರೆ ನಮ್ಮ ಕಣ್ಣಿಗೆ ಸ್ವಲ್ಪ ಭಾಗ ಮಾತ್ರ ಕಾಣುವುದರಿಂದ ಚಪ್ಪಟೆಯಾಗಿರುವಂತೆ

ತೋರುತ್ತದೆ. ದಿಗಂತದಲ್ಲಿ ಭೂಮಿಯೂ ಆಕಾಶವೂ ಸೇರುವಂತೆ ಕಾಣು ತ್ತದೆ. ಆದರೆ ಅವು ನಿಜವಾಗಿ ಸೇರುವುದಿಲ್ಲ.

ಈ ಭೂಮಿಯಲ್ಲಿ ಒಂದು ಪಾಲು ನೆಲ ನಾಲ್ಕು ಪಾಲು ನೀರು ಇವೆ. ನೀರು ಕೆರೆ, ಕುಂಟೆ, ನದಿ, ಸಮುದ್ರ ಮುಂತಾದ ರೂಪಗಳಲ್ಲಿದೆ. ನೀರು ಬಹಳ ಹೆಚ್ಚಾಗಿ ಸೇರಿರುವ ಭಾಗಗಳಿಗೆ ಸಮುದ್ರಗಳೆಂದೂ ಸಾಗರಗಳೆಂದೂ ಹೇಳುತ್ತಾರೆ. ಸಮುದ್ರದ ನೀರು ಉಪ್ಪು.

ನೆಲವನ್ನು ಖಂಡ, ದೇಶ ಎಂದು ವಿಂಗಡಿಸಿದ್ದಾರೆ. ಖಂಡ ಭೂಮಿಯ ದೊಡ್ಡ ಭಾಗ. ದೇಶ ಖಂಡದ ಒಂದು ಸಣ್ಣ ಭಾಗ. ನೆಲ ಕೆಲವು ಕಡೆ ಮೈದಾನವಾಗಿಯೂ, ಕೆಲವು ಕಡೆ ಎತ್ತರವಾಗಿ ಕಲ್ಲು ಮಣ್ಣುಗಳಿಂದ ಕೂಡಿದ ಬೆಟ್ಟವಾಗಿಯೂ ಇದೆ. ಎತ್ತರಕ್ಕೆ ತಕ್ಕ ಹಾಗೆ ಗುಡ್ಡ, ಬೆಟ್ಟ, ಪರ್ವತ ಎಂದು ಹೇಳುತ್ತಾರೆ.


ಪ್ರಶ್ನೆ

ಮೇಘ, ಶಾಖ, ಶುಕ್ಲಪಕ್ಷ, ಕೃಷ್ಣಪಕ್ಷ, ದಿಗಂತ, ಖಂಡ—ಎಂದರೇನು? ಭೂಮಿ ಚಪ್ಪಟೆಯೆ, ಗುಂಡೆ? ಭೂಮಿಯಲ್ಲಿ ನೆಲಕ್ಕೆ ಏನೇನು ಹೆಸರು? ನೀರಿಗೆ ಏನೇನು ಹೆಸರು? ಆಕಾಶದಲ್ಲಿ ಏನೇನು ಕಾಣುತ್ತದೆ? ನಾವು ವಾಸಮಾಡುವ ಭೂಮಿ ಒಂದು ಗ್ರಹ—ಎಂದರೇನು? ಚೆನ್ನಾಗಿ ತಿಳಿದುಕೊಳ್ಳಿ. ಭೂಮಿ ಯಾತರಮೇಲಾದರೂ ನಿಂತಿದೆಯೆ? ಆಕಾಶವನ್ನು ಹೋಗಿ ಮುಟ್ಟುತ್ತದೆಯೆ? ಕಾಮನಬಿಲ್ಲು ಹೇಗೆ ಹುಟ್ಟುತ್ತದೆ? ಅದರಲ್ಲಿ ಎಷ್ಟು ಬಣ್ಣ? ನಕ್ಷತ್ರವೆಂದರೇನು? ಗ್ರಹವೆಂದರೇನು?

೧೦. ಹೊಗೆಯ ಗಾಡಿ

ಎತ್ತಿನ ಗಾಡಿ, ಕುದುರೆ ಗಾಡಿ, ಮೋಟಾರ್—ಇವು ಸಾಧಾರಣ ವಾದ ರಸ್ತೆಯಮೇಲೆ ನಡೆಯುತ್ತವೆ. ಹೊಗೆಯ ಗಾಡಿ ಸಾಧಾರಣ ರಸ್ತೆಯಮೇಲೆ ನಡೆಯುವುದಿಲ್ಲ. ಇದಕ್ಕಾಗಿಯೇ ಬೇರೆ ರಸ್ತೆಯನ್ನು ಮಾಡಿದ್ದಾರೆ. ಈ ರಸ್ತೆಯಮೇಲೆ ಹಾಸಿರುವ ಕಬ್ಬಿಣದ ಕಂಬಿಗಳಮೇಲೆ ಹೊಗೆಯ ಗಾಡಿ ಹೋಗುತ್ತದೆ. ಈ ಕಂಬಿಗೆ ರೈಲ್ ಎಂದು ಹೆಸರು. ರೈಲ್ ಮೇಲೆ ಹೋಗುವ ಹೊಗೆಯ ಗಾಡಿಗೆ ರೈಲ್ ಗಾಡಿ ಎಂದೂ ಹೆಸರಿದೆ. ಕಂಬಿಗಳಮೇಲೆ ಚಕ್ರಗಳು ಸರಾಗವಾಗಿ ಉರುಳುತ್ತವೆ. ಆದ್ದರಿಂದ ಈ ಗಾಡಿ ವೇಗವಾಗಿ ಓಡುತ್ತದೆ.

ರೈಲು ಗಾಡಿಗಳಲ್ಲಿ ಮೂರು ನಾಲ್ಕು ತರದ ಗಾಡಿಗಳುಂಟು. ಸಾಮಾನುಗಳನ್ನು ತುಂಬಿ ಕಳುಹಿಸುವ ಗಾಡಿಗಳಿಗೆ ಗುಡ್ಸ್ ಗಾಡಿಗಳೆಂದು



ಹೆಸರು. ಇವು ನಿಧಾನವಾಗಿ ಓಡುತ್ತವೆ. ಪ್ರತಿಯೊಂದು ಸ್ಟೇಷನ್ನಿನಲ್ಲಿಯೂ ನಿಲ್ಲುತ್ತವೆ. ಜನರನ್ನು ಮಾತ್ರ ಕುಳ್ಳಿರಿಸುವ ಗಾಡಿಗಳಿಗೆ ಪ್ಯಾಸೆಂಜರ್ ಗಾಡಿಗಳೆಂದು ಹೆಸರು. ಇವುಗಳ ವೇಗ ಸ್ವಲ್ಪ ಹೆಚ್ಚು. ಮೂರನೆಯ ಬಗೆಯ ಗಾಡಿಗಳಲ್ಲಿ ಟಪ್ಪಾಲನ್ನು ಸಾಗಿಸುತ್ತಾರೆ; ಜನರನ್ನೂ ಕುಳ್ಳಿರಿಸುತ್ತಾರೆ. ಇವೇ ಮೆಯಿಲ್ ಗಾಡಿಗಳು. ಇವುಗಳ ವೇಗ ಹೆಚ್ಚು. ಇವು ಎಲ್ಲ ಸ್ಟೇಷನ್ನುಗಳಲ್ಲಿಯೂ ನಿಲ್ಲುವುದಿಲ್ಲ. ಈ ಮೂರು ಬಗೆಯಲ್ಲದೆ ಎಕ್ಸ್‌ಪ್ರೆಸ್ ಎಂಬ ಇನ್ನೊಂದು ಬಗೆಯ ಗಾಡಿ ಉಂಟು. ಇದೂ ಬಲು ವೇಗವಾಗಿ ಹೋಗುತ್ತದೆ.

ಗಾಡಿಗಳನ್ನು ಕೊಕ್ಕೆಗಳಿಂದ ಒಂದಕ್ಕೊಂದು ಸಾಲಾಗಿ ತಗುಲಿಸುತ್ತಾರೆ. ಈ ಸಾಲಿನ ಮುಂಭಾಗದಲ್ಲಿ "ಎಂಜಿನ್" ಎಂಬ ಯಂತ್ರವನ್ನು ತಗುಲಿಸುತ್ತಾರೆ. ಈ ಯಂತ್ರ ಕಬ್ಬಿಣದ್ದು. ಇದರಲ್ಲಿ ಒಂದು ಕಡೆ ನೀರು ತುಂಬಿರುತ್ತದೆ. ಇನ್ನೊಂದು ಕಡೆ ಬೆಂಕಿ ಉರಿಯುತ್ತದೆ. ನೀರು ಬೆಂಕಿಯಿಂದ ಕಾದು ಆವಿಯಾಗುತ್ತದೆ. ಈ ಆವಿಯ ಬಲದಿಂದ ಯಂತ್ರದ ಚಕ್ರಗಳು ಹೊರಳುತ್ತವೆ. ಯಂತ್ರ ಉಳಿದ ಗಾಡಿಗಳನ್ನು ಎಳೆಯುತ್ತದೆ. ಕೆಲವು ಕಡೆಗಳಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಎಂಜಿನ್ ನಡಸುತ್ತಾರೆ.

ಸಾಧಾರಣವಾದ ಎತ್ತಿನ ಗಾಡಿ ಗಂಟೆಗೆ ಮೂರು ಮೈಲಿ ಹೋಗುತ್ತದೆ; ರೈಲ್ ಗಾಡಿ ೨೦–೩೦ ಮೈಲಿ ಹೋಗುತ್ತದೆ. ಎತ್ತಿನ ಗಾಡಿಯಿಂದ ಆಗುವ ಒಂದು ದಿವಸದ ಪ್ರಯಾಣ ರೈಲಿನಿಂದ ಒಂದೇ ಗಂಟೆಯಲ್ಲಿ ಆಗುತ್ತದೆ. ಆದ್ದರಿಂದ ಜನರು ರೈಲಿನಲ್ಲಿ ಜಾಗ್ರತೆಯಾಗಿ ಊರಿಂದೂರಿಗೆ ಹೋಗಬಹುದು. ಇದರಲ್ಲಿ ಜನರಿಗೆ ಅಪಾಯ ಕಡಮೆ, ವೆಚ್ಚ ಸುಲಭ. ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸಾಮಾನುಗಳನ್ನು ಸುಲಭದಲ್ಲಿ ಸಾಗಿಸಬಹುದು. ಬರಗಾಲದಲ್ಲಿ ಅಕ್ಕಿ, ರಾಗಿ ಮುಂತಾದ ದವಸಗಳನ್ನು ಬೇಕಾದ ಕಡೆಗೆ ಜಾಗ್ರತೆ ಕಳುಹಿಸಿ ಜನರನ್ನು ಬದುಕಿಸಬಹುದು.

ಪ್ರಶ್ನೆ

ಹೊಗೆಯ ಗಾಡಿ ಎಂದರೆ ಹೇಗಿರುತ್ತದೆ? ವಿವರವಾಗಿ ಹೇಳಿ. ಇದು ಎಷ್ಟು ಬಗೆ? ಅವುಗಳ ವ್ಯತ್ಯಾಸವೇನು? ರೈಲಿನಿಂದ ಆಗುವ ಪ್ರಯೋಜನಗಳೇನು? ನೀವು ರೈಲು ಪ್ರಯಾಣ ಮಾಡಿದ್ದೀರಾ? ಆಗ ಏನೇನು ನೋಡಿದಿರಿ? ರೈಲ್, ಎಂಜಿನ್, ಗುಡ್ಸ್, ಪ್ಯಾಸೆಂಜರ್, ಮೆಯಿಲ್, ಎಕ್ಸ್‌ಪ್ರೆಸ್, ಸ್ಟೇಷನ್—ಇವು ಇಂಗ್ಲೀಷ್ ಶಬ್ದಗಳು—ಇವುಗಳ ಅರ್ಥವೇನು? ಗಾಡಿ, ಕಂಬಿ, ಚಕ್ರ, ಜನ—ಇವಕ್ಕೆ ಬಹುವಚನಗಳನ್ನು ಹೇಳಿ. ಈ ವಾಕ್ಯಗಳಲ್ಲಿ ಸರಿಯಾದ ಕ್ರಿಯಾಪದವನ್ನು ಸೇರಿಸಿ:—ಸೂರ್ಯನ ಬೆಳಕು ಮೋಡಗಳ ಮೇಲೆ ಬಿದ್ದು ಅವು ಹೊಳೆಯು—. ನಕ್ಷತ್ರಗಳು ಥಳಥಳಿಸು—. ಹೊಗೆಯ ಗಾಡಿ ಕಂಬಿಯ ಮೇಲೆ ಹೋಗು—. ಚಕ್ರಗಳು ಉರುಳು—. ಯಂತ್ರ ಎಳೆಯು—.

೧೧. ಯದುರಾಯರು

ನೂರಾರು ವರ್ಷಗಳ ಹಿಂದೆ ಮೈಸೂರು ದೇಶವನ್ನು ಈಗಿನ ಹಾಗೆ ಒಬ್ಬರೇ ರಾಜರು ಆಳುತ್ತಿರಲಿಲ್ಲ. ಇದರ ಭಾಗಗಳನ್ನು ಅಲ್ಲಲ್ಲಿ ಬೇರೆಬೇರೆ ಪಾಳೆಯಗಾರರು ಆಳುತ್ತಿದ್ದರು. ಪಾಳೆಯಗಾರರು ಆಗಾಗ್ಗೆ ತಮ್ಮ ತಮ್ಮಲ್ಲಿಯೆ ಜಗಳ ಆಡುತ್ತಿದ್ದರು. ಸೋತವರ ಸೀಮೆಯನ್ನು ಗೆದ್ದವರು ಕಿತ್ತುಕೊಳ್ಳುತ್ತ ಇದ್ದರು.

ಹೀಗಿರುವ ಕಾಲದಲ್ಲಿ ಯದುರಾಯರು ಮತ್ತು ಕೃಷ್ಣರಾಯರು ಎಂಬ ಅಣ್ಣತಮ್ಮಂದಿರು ನಮ್ಮ ಸೀಮೆಗೆ ಬಂದರು. ಇವರು ಯಾದವ ವಂಶದವರು. ಶ್ರೀ ಕೃಷ್ಣನೂ ಇದೇ ವಂಶದವನು. ಇವರು ಉತ್ತರ ದೇಶದಿಂದ ಹೊರಟು ಅಲ್ಲಲ್ಲಿ ಪ್ರಯಾಣ ಮಾಡುತ್ತ ಕಡೆಗೆ ನಂಜನಗೂಡಿನ ಹತ್ತಿರಕ್ಕೆ ಬಂದರು.

ನಂಜನಗೂಡಿನ ಬಳಿ ಹದಿನಾಡೆಂಬ ಚಿಕ್ಕ ರಾಜ್ಯವಿತ್ತು. ಆಗ ಹದಿನಾಡಿನ ದೊರೆಗಳಾದ ಚಾಮರಾಜರು ಸತ್ತುಹೋಗಿದ್ದರು. ಅವರಿಗೆ ಗಂಡುಮಕ್ಕಳು ಇರಲಿಲ್ಲ. ಚಿಕ್ಕದೇವಾಜಮ್ಮಣ್ಣಿ ಎಂಬ ಮಗಳು ಮಾತ್ರ ಇದ್ದಳು.

ಹದಿನಾಡಿಗೆ ಪಕ್ಕದಲ್ಲಿ ಕಾರುಗಹಳ್ಳಿ ಎಂಬ ಪಾಳೆಯಪಟ್ಟು ಇದ್ದಿತು. ಅದರ ಪಾಳೆಯಗಾರ ಮಾರನಾಯಕ ದುಷ್ಟ. ಅವನು ತೊರೆಯರ ಜಾತಿಯವನು. ಆ ದುಷ್ಟನು ಹದಿನಾಡನ್ನು ಕಿತ್ತುಕೊಂಡು, ಚಿಕ್ಕದೇವಾಜಮ್ಮಣ್ಣಿಯನ್ನು ಮದುವೆಮಾಡಿ ಕೊಡಿ ಎಂದು ಕೇಳಿದನು. ಆ ಕೀಳು ಜಾತಿಯವನಿಗೆ ಮಗಳನ್ನು ಕೊಡಲು ದೊರೆಯ ಹೆಂಡತಿಗೆ ಇಷ್ಟವಿರಲಿಲ್ಲ. ಆದರೆ ಮಾಡುವುದೇನು? ಸಹಾಯಕ್ಕೆ ಯಾರೂ ಇರಲಿಲ್ಲ. ಆಕೆ ಮನಸ್ಸು ಇಲ್ಲದಿದ್ದರೂ ಒಪ್ಪಬೇಕಾಯಿತು. ಮದುವೆಗೆ ಅರಮನೆ ಅಲಂಕಾರವಾಗುತ್ತಿತ್ತು.

ಈ ಸಮಾಚಾರಗಳೆಲ್ಲ ಯದುರಾಯರಿಗೂ ಕೃಷ್ಣರಾಯರಿಗೂ ತಿಳಿಯಿತು. "ನಾವು ಬಂದು ಸಹಾಯ ಮಾಡುತ್ತೇವೆ. ಮಾರನಾಯಕನನ್ನು ಕೊಂದು ನಿಮ್ಮ ಕಷ್ಟವನ್ನು ತಪ್ಪಿಸುತ್ತೇವೆ" ಎಂದು ಅವರು ರಾಣಿಗೆ ಗುಟ್ಟಾಗಿ ಹೇಳಿಕಳುಹಿಸಿದರು. ರಾಣಿಗೆ ಬಹಳ ಸಂತೋಷವಾಯಿತು. ಆಕೆ ಒಪ್ಪಿದಳು. ಅವರು ಅರಮನೆಯನ್ನು ಗುಟ್ಟಾಗಿ ಸೇರಿದರು. ಯದುರಾಯರು ಸುಂದರರೂಪುಳ್ಳವರು, ಬಹಳ ಬಲಶಾಲಿಗಳು, ರಾಜಕುಮಾರರು. ರಾಣಿ ಅವರನ್ನು ನೋಡಿ ತನ್ನ ಮಗಳಿಗೆ ತಕ್ಕ ವರ ಸಿಕ್ಕಿದನೆಂದು ಸಂತೋಷಪಟ್ಟಳು.

ಮಾರನಾಯಕನು ತನಗೆ ಮದುವೆ ಆಗುವುದೆಂದು ಸಂತೋಷವಾಗಿ ಇದ್ದನು. ಅರಮನೆಗೆ ಅಲಂಕಾರ ಆಗುತ್ತಲೇ ಇದ್ದಿತು. ಆಗ ಯದುರಾಯರೂ ಕೃಷ್ಣರಾಯರೂ ಮಾರನಾಯಕನಮೇಲೆ ಯುದ್ಧಕ್ಕೆ ನಿಂತರು. ಮಾರನಾಯಕನು ಕೋಪದಿಂದ ತನ್ನ ಜನರನ್ನು ಸೇರಿಸಿಕೊಂಡು ಅವರನ್ನು ಮುತ್ತಿದನು. ಆದರೆ ಬಲಶಾಲಿಗಳಾದ ರಾಜಕುಮಾರರು ಮಾರನಾಯಕನನ್ನು ಕೊಂದು ಅವನ ಕಡೆಯವರನ್ನು ಓಡಿಸಿದರು.

ರಾಣಿಗೆ ಇದನ್ನೆಲ್ಲ ನೋಡಿ ಬಹಳ ಸಂತೋಷವಾಯಿತು. ಮಗಳನ್ನು ಯದುರಾಯರಿಗೆ ಕೊಟ್ಟು ಮದುವೆ ಮಾಡಿದಳು. ಯದುರಾಯರು ಹದಿನಾಡನ್ನೂ ಕಾರುಗಹಳ್ಳಿಯನ್ನೂ ಸೇರಿಸಿ ಆಳಿದರು. ಅವರೆ ನಮ್ಮ ಮಹಾರಾಜರ ಮೂಲಪುರುಷರು.

ಪ್ರಶ್ನೆ

ನಮ್ಮ ಮಹಾರಾಜರ ಮೂಲಪುರುಷರ ಚರಿತ್ರೆಯನ್ನು ತಿಳಿಸಿ. ಪಾಳೆಯ ಪಟ್ಟು, ಪಾಳೆಯಗಾರ ಎಂದರೇನು? ಕ್ರಿಯಾಪದಗಳಲ್ಲಿ ಹಿಂದೆ ನಡೆದದ್ದನ್ನು ಹೇಳುವುದು ಒಂದು ರೂಪ: ಈಗ ನಡೆಯುತ್ತಿರುವುದನ್ನು ಹೇಳುವುದು ಒಂದು ರೂಪ. ಈಗ ನೋಡಿ: ಈ ಪಾಠದಲ್ಲಿ ಇದ್ದರು, ಬಂದರು, ಇದ್ದಳು, ಇದ್ದಿತು, ಇತ್ತು, ಕೇಳಿದನು—ಇವೆಲ್ಲಾ ಹಿಂದೆ ನಡೆದದ್ದನ್ನು ಹೇಳುತ್ತವೆ. ಇಂಥ ರೂಪಕ್ಕೆ ಭೂತಕಾಲಕ್ರಿಯೆ ಎಂದು ಹೆಸರು. ಮಾಡುತ್ತೇವೆ, ತಪ್ಪಿಸುತ್ತೇವೆ, ಇರುತ್ತೇವೆ, ಬರುತ್ತೇವೆ, ಇರುತ್ತದೆ, ಕೇಳುತ್ತಾನೆ—ಮುಂತಾದುವು ಈಗ ನಡೆಯುವ ಅಥವಾ ಮುಂದೆ ನಡೆಯುವುದನ್ನು ಹೇಳುತ್ತವೆ. ಇಂಥ ರೂಪಕ್ಕೆ ವರ್ತಮಾನಕಾಲ ಅಥವಾ ಭವಿಷ್ಯತ್ಕಾಲ ಕ್ರಿಯೆ ಎಂದು ಹೆಸರು.

೧೨. ಕಾವೇರಿ ಮತ್ತು ತುಂಗಭದ್ರೆ

ನಮ್ಮ ಸಂಸ್ಥಾನದಲ್ಲಿ ಕಾವೇರಿ ಮತ್ತು ತುಂಗಭದ್ರೆ ದೊಡ್ಡ ನದಿಗಳು ಕಾವೇರಿ ಕೊಡಗು ಸೀಮೆಯಲ್ಲಿ ತಲಕಾವೇರಿಯ ಬಳಿ ಹುಟ್ಟುತ್ತದೆ. ಕೊಡಗಿನಲ್ಲಿಯೂ ನಮ್ಮ ಸೀಮೆಯಲ್ಲಿಯೂ ಹರಿದು ಮದ್ರಾಸ್ ಪ್ರಾಂತ ವನ್ನು ಪ್ರವೇಶಿಸುತ್ತದೆ. ಈ ನದಿಯ ಹೆಚ್ಚು ಭಾಗ ಮದ್ರಾಸ್ ಪ್ರಾಂತದಲ್ಲಿ ಹರಿಯುತ್ತದೆ. ಕಾವೇರಿ ನದಿ ಬಂಗಾಳ ಸಮುದ್ರವನ್ನು ಸೇರುತ್ತದೆ.

ಕಾವೇರಿಯಿಂದ ಜನರಿಗೆ ಬಹಳ ಪ್ರಯೋಜನವಿದೆ. ಇದರ ನೀರನ್ನು ದಾರಿಯುದ್ದಕ್ಕೂ ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಇದಕ್ಕಾಗಿ ಅಲ್ಲಲ್ಲಿ ಅಣೆಕಟ್ಟುಗಳನ್ನು ಹಾಕಿ ಕಾಲುವೆಗಳನ್ನು ತೆಗೆದಿದ್ದಾರೆ. ಈ ಅಣೆಕಟ್ಟೆಗಳಲ್ಲಿ ಕನ್ನಂಬಾಡಿ ಕಟ್ಟೆಯೇ ಬಹಳ ದೊಡ್ಡದು. ಕಾಲುವೆಗಳಲ್ಲಿ ಅರ್ವಿನ್ ಕಾಲುವೆಯೇ ದೊಡ್ಡದು. ಕೆರೆಗಳಲ್ಲಿ ಕೃಷ್ಣರಾಜಸಾಗರವೇ ದೊಡ್ಡದು.

ಕಾವೇರಿ ನಮ್ಮ ಸೀಮೆಯನ್ನು ಬಿಡುವಾಗ ಶಿವನಸಮುದ್ರದ ಬಳಿ ಕೆಳಕ್ಕೆ ದುಮುಕುತ್ತದೆ. ಹೀಗೆ ದುಮುಕುವ ನೀರಿನಿಂದ ಯಂತ್ರಗಳನ್ನು ತಿರುಗಿಸುತ್ತಾರೆ. ಅದರಿಂದ ವಿದ್ಯುಚ್ಛಕ್ತಿ ಹುಟ್ಟುತ್ತದೆ. ಇದರ ಸಹಾಯದಿಂದ ಅನೇಕ ಊರುಗಳಲ್ಲಿ ದೀಪಗಳನ್ನು ಹಚ್ಚಿಸುತ್ತಾರೆ; ಕೈಗಾರಿಕೆಯ ಕೆಲಸಗಳನ್ನು ಮಾಡಿಸುತ್ತಾರೆ.

ಕಾವೇರಿ ನದಿಯನ್ನು "ದಕ್ಷಿಣಗಂಗೆ" ಎಂದು ಹೇಳುತ್ತಾರೆ. ಇದರ ಉದ್ದಕ್ಕೂ ಪುಣ್ಯಕ್ಷೇತ್ರಗಳಿವೆ. ಇವುಗಳಲ್ಲಿ ಶ್ರೀರಂಗಪಟ್ಟಣ, ತಲಕಾಡು ಮತ್ತು ಶ್ರೀರಂಗ ಮುಖ್ಯವಾದುವು.

ತುಂಗಭದ್ರೆ ತುಂಗಾ ಮತ್ತು ಭದ್ರಾ ಎಂಬ ಎರಡು ನದಿಗಳು ಕೂಡಿ ಆಗಿರುವ ಹೊಳೆ. ಈ ಎರಡು ನದಿಗಳು ಕಡೂರು ಡಿಸ್ಟ್ರಿಕ್ಟಿನಲ್ಲಿ ವರಾಹ ಪರ್ವತದ ಬಳಿ ಹುಟ್ಟುತ್ತವೆ. ತುಂಗಾ ನದಿ ಶೃಂಗೇರಿ, ತೀರ್ಥಹಳ್ಳಿ ಮತ್ತು ಶಿವಮೊಗ್ಗೆಗಳ ಮಾರ್ಗ ಹರಿಯುತ್ತದೆ. ಭದ್ರಾ ನದಿ ಕಳಸ, ನರಸಿಂಹ ರಾಜಪುರ ಮತ್ತು ಭದ್ರಾವತಿಗಳ ಮಾರ್ಗವಾಗಿ ಹರಿಯುತ್ತದೆ. ಈ ಎರಡು ನದಿಗಳೂ ಶಿವಮೊಗ್ಗೆಗೆ ಹತ್ತು ಮೈಲಿಗಳ ದೂರದಲ್ಲಿ ಕೂಡಲಿ ಎಂಬ ಸ್ಥಳದಲ್ಲಿ ಒಂದಕ್ಕೊಂದು ಸೇರುತ್ತವೆ.

ಕೂಡಲಿಯಿಂದ ಮುಂದಕ್ಕೆ ತುಂಗಭದ್ರೆ ಎಂಬ ಹೆಸರು ಬರುತ್ತದೆ. ತುಂಗಭದ್ರೆ ನಮ್ಮ ಸಂಸ್ಥಾನವನ್ನು ಹರಿಹರದ ಸಮೀಪದಲ್ಲಿ ಬಿಡುತ್ತದೆ. ಅನಂತರ ಬೊಂಬಾಯಿ ಮತ್ತು ಮದ್ರಾಸ್ ಆಧಿಪತ್ಯಗಳಲ್ಲಿ ಹರಿದು ಕರ್ನೂಲಿನ ಹತ್ತಿರ ಕೃಷ್ಣಾ ನದಿಯನ್ನು ಸೇರುತ್ತದೆ. ಆದ್ದರಿಂದ ತುಂಗ ಭದ್ರೆಯನ್ನು ಕೃಷ್ಣಾ ನದಿಯ ಉಪನದಿ ಎಂದು ಹೇಳುತ್ತೇವೆ.

ತುಂಗಾ ನದಿ ವ್ಯವಸಾಯಕ್ಕೆ ಹೆಚ್ಚು ಅನುಕೂಲವಾಗಿಲ್ಲ. ಕಾಡಿನಲ್ಲಿ ಬೆಳೆದ ಮರಗಳನ್ನು ಕಡಿದು ಆ ತೊಲೆಗಳನ್ನು ಈ ನದಿಯಲ್ಲಿ ತೇಲಬಿಡು ತ್ತಾರೆ. ಹೀಗೆ ಚೌಬೀನಿ ಮರಗಳನ್ನು ಸಾಗಿಸುವುದಕ್ಕೆ ಈ ನದಿ ಸಹಾಯವಾಗಿದೆ.

ಭದ್ರಾ ನದಿಯಿಂದ ವ್ಯವಸಾಯಕ್ಕೆ ಹೆಚ್ಚು ಉಪಯೋಗವಿದೆ. ಈಚೆಗೆ ಸರ್ಕಾರದವರು ಈ ನದಿಗೆ ಅಣೆಕಟ್ಟಿ ಕಾಲುವೆಗಳನ್ನು ತೆಗೆದಿದ್ದಾರೆ.

ಪ್ರಶ್ನೆ

ಕಾವೇರಿ ನದಿ ಎಲ್ಲಿ ಹುಟ್ಟುತ್ತದೆ? ಎಲ್ಲೆಲ್ಲಿ ಹರಿಯುತ್ತದೆ? ಎಲ್ಲಿ ಸಮುದ್ರಕ್ಕೆ ಸೇರುತ್ತದೆ? ತುಂಗಭದ್ರಾ ನದಿಯ ವಿಷಯವನ್ನೂ ಹೇಳಿ. ಈ ನದಿ ಗಳಿಂದ ಏನು ಪ್ರಯೋಜನವಾಗಿದೆ? ಈ ಪಾಠದಲ್ಲಿರುವ ಗುಣವಾಚಕಗಳನ್ನು ತೋರಿಸಿ. ಹುಟ್ಟುತ್ತದೆ, ಹೇಳುತ್ತಾರೆ, ಸೇರುತ್ತದೆ, ತೆಗೆದಿದ್ದಾರೆ—ಇವು ಯಾವ ಕಾಲದ ಕ್ರಿಯಾಪದಗಳು? ಇವಕ್ಕೆ ಭೂತಕಾಲದ ರೂಪಗಳನ್ನು ಹೇಳಿ. ಇವು ಏಕವಚನವೋ, ಬಹುವಚನವೋ? ಇವಕ್ಕೆ ತಕ್ಕ ನಾಮಪದಗಳನ್ನು ಸೇರಿಸಿ ವಾಕ್ಯಗಳನ್ನು ಮಾಡಿ.

೧೩. ಋತುಗಳು

ಯುಗಾದಿ ಹಬ್ಬದಿಂದ ಇನ್ನೊಂದು ಯುಗಾದಿ ಹಬ್ಬದವರೆಗೆ ಒಂದು ವರ್ಷ. ಈ ವರ್ಷದಲ್ಲಿ ಚೈತ್ರ, ವೈಶಾಖ, ಜ್ಯೇಷ್ಠ, ಆಷಾಢ, ಶ್ರಾವಣ, ಭಾದ್ರಪದ, ಆಶ್ವಯುಜ, ಕಾರ್ತಿಕ, ಮಾರ್ಗಶೀರ್ಷ, ಪುಷ್ಯ, ಮಾಘ ಮತ್ತು ಫಾಲ್ಗುಣ ಎಂಬ ಹನ್ನೆರಡು ತಿಂಗಳಿವೆ. ಇವುಗಳಲ್ಲಿ ಎರಡೆರಡು ತಿಂಗಳಿಗೆ ಒಂದೊಂದು ಋತು.

ಚೈತ್ರ, ವೈಶಾಖ—ವಸಂತ ಋತು
ಜ್ಯೇಷ್ಠ, ಆಷಾಢ—ಗ್ರೀಷ್ಮ ಋತು
ಶ್ರಾವಣ, ಭಾದ್ರಪದ—ವರ್ಷ ಋತು
ಆಶ್ವಯುಜ, ಕಾರ್ತಿಕ—ಶರದೃತು
ಮಾರ್ಗಶೀರ್ಷ, ಪುಷ್ಯ—ಹೇಮಂತ ಋತು
ಮಾಘ, ಫಾಲ್ಗುಣ—ಶಿಶಿರ ಋತು

ವಸಂತ ಋತುವಿನಲ್ಲಿ ಮರಗಳೂ, ಬಳ್ಳಿಗಳೂ ಚಿಗುರಿ, ಹೂವು ಕಾಯಿಬಿಡುತ್ತವೆ. ಬಿಸಿಲು ಚೆನ್ನಾಗಿ ಕಾಯುತ್ತದೆ. ಮುಂಗಾರು ಮಳೆ ಸುರಿಯುತ್ತದೆ.

ಗ್ರೀಷ್ಮ ಋತುವಿನಲ್ಲಿ ಸೂರ್ಯನ ತಾಪ ಹೆಚ್ಚು. ಗಾಳಿ ಬಲವಾಗಿ ಬೀಸುತ್ತದೆ. ರೈತರು ಹೊಲಗಳನ್ನು ಉತ್ತು ಬಿತ್ತುತ್ತಾರೆ.

ವರ್ಷ ಋತುವಿನಲ್ಲಿ ಹೆಚ್ಚಾಗಿ ಮಳೆ ಸುರಿಯುತ್ತದೆ. ಇದೇ ಹಿಂಗಾರು ಮಳೆ. ಎಲ್ಲೆಲ್ಲಿಯೂ ಕೆರೆ, ಕಟ್ಟೆ, ಕೊಳ, ನದಿ ಮುಂತಾದುವು ತುಂಬಿರುತ್ತವೆ.

ಶರದೃತುವಿನಲ್ಲಿ ಆಕಾಶ ನಿರ್ಮಲವಾಗಿರುತ್ತದೆ. ಚಂದ್ರ ಚೆನ್ನಾಗಿ ಪ್ರಕಾಶಿಸುತ್ತಾನೆ. ಕೆರೆ, ಕೊಳ, ನದಿ ಮುಂತಾದುವುಗಳ ನೀರು ತಿಳಿಯಾಗಿ, ತುಂಬಿ, ನೋಡುವುದಕ್ಕೆ ಸಂತೋಷವಾಗುತ್ತದೆ. ಭೂಮಿ ಬೆಳೆಗಳಿಂದ ಕೂಡಿ ಚೆಲುವಾಗಿ ಇರುತ್ತದೆ.

ಹೇಮಂತ ಋತುವಿನಲ್ಲಿ ಹಿಮ ಬೀಳುತ್ತದೆ. ಪೈರುಗಳೆಲ್ಲ ಬಲಿತು ಕೊಯಿಲಿಗೆ ಬರುತ್ತವೆ.

ಶಿಶಿರ ಋತುವಿನಲ್ಲಿ ಧಾನ್ಯಗಳೆಲ್ಲ ಒಕ್ಕಣೆಯಾಗುತ್ತವೆ. ಇದೇ ಸುಗ್ಗಿಯ ಕಾಲ. ಪದಾರ್ಥಗಳೆಲ್ಲ ಅಗ್ಗವಾಗಿ ಇರುತ್ತವೆ.

ಮೂರು ಋತುಗಳಿಗೆ ಒಂದು ಆಯನ. ಸಂವತ್ಸರಕ್ಕೆ ಉತ್ತರಾಯನ ಮತ್ತು ದಕ್ಷಿಣಾಯನ ಎಂದು ಎರಡು ಅಯನಗಳಿವೆ. ಉತ್ತರಾಯನದಲ್ಲಿ ಸೂರ್ಯ ದಕ್ಷಿಣದ ಕಡೆಯಿಂದ ಉತ್ತರದ ಕಡೆಗೆ ಹೋಗುವಹಾಗೆ ಕಾಣುತ್ತಾನೆ. ದಕ್ಷಿಣಾಯನದಲ್ಲಿ ಸೂರ್ಯ ಉತ್ತರದಿಂದ ದಕ್ಷಿಣಕ್ಕೆ ಹೋಗುವ ಹಾಗೆ ಕಾಣುತ್ತಾನೆ.

ಪ್ರಶ್ನೆ

ಋತುಗಳು ಎಷ್ಟು? ಯಾವುವು? ಯಾವ ಯಾವ ಋತುವಿನಲ್ಲಿ ಏನೇನು ನಡೆಯುತ್ತದೆ? ಒಂದೊಂದಾಗಿ ಹೇಳಿ. ಮುಂಗಾರು, ಹಿಂಗಾರು, ಬಿತ್ತನೆ, ಒಕ್ಕಣೆ—ಎಂದರೇನು?

ಈ ಪಾಠದಲ್ಲಿರುವ ಶಬ್ದಗಳನ್ನು ಈ ರೀತಿ ವಿಂಗಡಿಸಿ:—೧. ಆರು ನಾಮ ಪದಗಳು. ೨. ಸಂಖ್ಯಾವಾಚಕಗಳು. ೩. ಏಕವಚನ ನಾಮಪದ. ೪. ಬಹುವಚನ ನಾಮಪದ. ೫. ಏ. ವ. ಕ್ರಿಯಾಪದ. ೬. ಬ. ವ. ಕ್ರಿಯಾಪದ. ೭. ವರ್ತಮಾನಕಾಲ ಕ್ರಿಯೆ. ಭೂತಕಾಲ ಕ್ರಿಯೆ ಇದೆಯೆ? ಇರುವ ವರ್ತಮಾನ ಕ್ರಿಯೆಗಳಿಗೆ ಭೂತರೂಪವನ್ನು ಹೇಳಿ.

೧೪. ಸಂತೆ

ಹಳ್ಳಿಗಳಲ್ಲಿ ರೈತರು ವ್ಯವಸಾಯದಿಂದ ಜೀವನ ಮಾಡುತ್ತಾರೆ. ಇವರು ತಾವು ಕಷ್ಟಪಟ್ಟು ಬೆಳೆದ ದಿನಸುಗಳನ್ನು ಮಾರಿ ಹಣವನ್ನು ಸಂಪಾದಿಸಬೇಕು. ಈ ಹಣದಿಂದ ತಮಗೆ ಬೇಕಾದ ಇತರ ಸಾಮಾನುಗಳನ್ನು ಕೊಂಡುಕೊಳ್ಳಬೇಕು. ಹಳ್ಳಿಗಳಲ್ಲಿ ಎಲ್ಲ ಬಗೆಯ ಅಂಗಡಿಗಳೂ ಇರುವುದಿಲ್ಲ. ದೊಡ್ಡ ಊರುಗಳಿಗೆ ಹೋಗುವುದಕ್ಕೆ ರೈತರಿಗೆ ದೂರ. ಆದ್ದರಿಂದ ಸುತ್ತಲ ಹಳ್ಳಿಯವರು ಬಂದು ಹೋಗುವುದಕ್ಕೆ ಅನುಕೂಲವಾದ ಕಡೆ ಜನರು ವ್ಯಾಪಾರಕ್ಕಾಗಿ ಸೇರುತ್ತಾರೆ. ಹೀಗೆ ಸೇರುವುದಕ್ಕೆ ಸಂತೆ ಎಂದು ಹೆಸರು.

ಸಂತೆ ನಮ್ಮ ದೇಶದಲ್ಲಿ ಬಹು ಕಾಲದಿಂದಲೂ ನಡೆಯುತ್ತಿದೆ. ಅದು ದೇಶದ ಎಲ್ಲಾ ಕಡೆಗಳಲ್ಲೂ ವಾರಕ್ಕೊಂದಾವರ್ತಿ ನಡೆಯುತ್ತದೆ. ಸಂತೆ

ಸೇರುವ ಕಡೆ ಅಂಗಡಿಗಳನ್ನು ಇಡುವುದಕ್ಕೆ ಸ್ಥಳಗಳನ್ನು ಗೊತ್ತುಮಾಡಿರುತ್ತಾರೆ. ಅಲ್ಲಿ ನೆರಳಿಗೆ ಮರಗಳನ್ನು ಬೆಳಸಿರುತ್ತಾರೆ. ಕುಡಿಯುವ ನೀರಿಗೆ ಬಾವಿಗಳನ್ನು ತೋಡಿಸಿರುತ್ತಾರೆ.

ಸಂತೆಗಳಲ್ಲಿ ಅಕ್ಕಿ, ರಾಗಿ, ಬೇಳೆ, ಉಪ್ಪು, ಮೆಣಸಿನಕಾಯಿ, ಸೀಮೆ ಎಣ್ಣೆ ಮುಂತಾದ ಪದಾರ್ಥಗಳನ್ನು ಮಾರುತ್ತಾರೆ. ತೆಂಗಿನಕಾಯಿ, ಬಾಳೆಯ ಹಣ್ಣು, ಮಾವಿನ ಹಣ್ಣು ಮುಂತಾದ ಹಣ್ಣು ಕಾಯಿಗಳನ್ನು ಮಾರುತ್ತಾರೆ. ಬಾಳೆಯಕಾಯಿ, ಬದನೆಯಕಾಯಿ ಮೊದಲಾದ ಕಾಯಿ ಪಲ್ಯಗಳನ್ನು ಮಾರುತ್ತಾರೆ. ಸೀರೆ, ಕಂಬಳಿ, ದುಪಟಿ ಮುಂತಾದ ಬಟ್ಟೆಗಳನ್ನು ಮಾರುತ್ತಾರೆ. ಕೆಲವು ಸಂತೆಗಳಲ್ಲಿ ದನಕರುಗಳನ್ನೂ ಮಾರುವುದುಂಟು.

ಸಂತೆಗಳಾಗುವುದರಿಂದ ಜನರಿಗೆ ಬಹಳ ಉಪಯೋಗವುಂಟು. ರೈತರು ತಾವು ಕಷ್ಟಪಟ್ಟು ಬೆಳೆದ ದಿನಸುಗಳನ್ನು ಮಾರಬಹುದು. ನೇಗೆಯವರು, ಕುಂಬಾರರು, ಮೇದರು ಮೊದಲಾದವರೆಲ್ಲ ತಾವು ಮಾಡಿದ ಪದಾರ್ಥಗಳನ್ನು ಸಂತೆಗೆ ಮಾರಾಟಕ್ಕೆ ತೆಗೆದುಕೊಂಡು ಹೋಗಬಹುದು. ಸುತ್ತಮುತ್ತಲಿರುವ ಜನರು ಸಂತೆಗೆ ಬರುವುದರಿಂದ ತಮತಮಗೆ ಬೇಕಾದ ಸಾಮಾನುಗಳನ್ನು ಕೊಂಡುಕೊಳ್ಳಬಹುದು. ಒಬ್ಬರನ್ನೊಬ್ಬರು ನೋಡಿ ಕ್ಷೇಮಸಮಾಚಾರ ವಿಚಾರಿಸಬಹುದು.

ಪ್ರಶ್ನೆ

ಸಂತೆಗಳಿಂದ ಏನು ಪ್ರಯೋಜನ? ಅಲ್ಲಿ ಏನೇನು ಮಾರಾಟಕ್ಕೆ ಬರುತ್ತದೆ? ದಿನಸುಗಳನ್ನು . . . . ಸಾಮಾನುಗಳನ್ನು . . . . ಅಂಗಡಿಗಳನ್ನು . . . . ಹಣ್ಣು ಕಾಯಿಗಳನ್ನು . . . . ದನಕರುಗಳನ್ನು . . . . ಇವಕ್ಕೆ ತಕ್ಕ ಕ್ರಿಯಾಪದಗಳನ್ನು ಸೇರಿಸಿ ವಾಕ್ಯಗಳನ್ನು ಮಾಡಿ. ನಾಮಪದಗಳನ್ನೂ ಸೇರಿಸಿ ಯಾರು ಮಾಡುತ್ತಾರೆಂಬುದನ್ನು ಹೇಳಿ. ವರ್ತಕರು ಸಾಮಾನನ್ನು ಮಾರುತ್ತಾರೆ. ಈ ವಾಕ್ಯದಲ್ಲಿ ವರ್ತಕರು—ಕರ್ತೃ, ನಾಮಪದ: ಪ್ರಥಮಾ ವಿಭಕ್ತಿ. ಮಾರುತ್ತಾರೆ—ಕ್ರಿಯೆ. ಏನನ್ನು ಮಾರುತ್ತಾರೆ—ಸಾಮಾನನ್ನು. ಇದು ಕರ್ಮ, ನಾಮಪದ ದ್ವಿತೀಯಾ ವಿಭಕ್ತಿ. ಹೀಗೆ ವಾಕ್ಯದಲ್ಲಿ ಕರ್ತೃಪದ, ಕ್ರಿಯಾಪದ, ಬೇಕಾದ ಕಡೆ ಕರ್ಮಪದ—ಇವು ಮೂರು ಇರಬಹುದು. ನಿಮ್ಮ ವಾಕ್ಯಗಳನ್ನು ಈ ರೀತಿ ಕರ್ತೃ, ಕರ್ಮ, ಕ್ರಿಯೆ—ಮೂರೂ ಇರುವಂತೆ ಹೇಳಿ.

೧೫. ಉಳುವುದು, ವ್ಯವಸಾಯ



ಪೈರನ್ನು ಬೆಳೆಯುವುದಕ್ಕೆ ವ್ಯವಸಾಯ ಎಂದು ಹೆಸರು. ಇದಕ್ಕೆ ಆರಂಬವೆಂತಲೂ ಒಕ್ಕಲತನವೆಂತಲೂ ಹೇಳುತ್ತಾರೆ. ಭೂಮಿ ಸ್ವಲ್ಪ ವಾಗಿದ್ದರೆ ಅದನ್ನು ಗುದ್ದಲಿಯಿಂದ ಅಗೆದು ಸಿದ್ಧಪಡಿಸಬಹುದು. ಭೂಮಿ ಹೆಚ್ಚಾಗಿದ್ದರೆ ನೇಗಿಲಿಂದ ಉತ್ತು ಸಿದ್ಧಪಡಿಸಬೇಕು. ಅಗೆಯುವುದ ಕ್ಕಿಂತ ಉಳುವುದು ಸುಲಭ.

ಈ ಚಿತ್ರದಲ್ಲಿ ನೋಡಿ. ರೈತ ಎರಡೆತ್ತು ಕಟ್ಟಿರುವ ಏರಿನಿಂದ ಹೊಲವನ್ನು ಉಳುತ್ತಾನೆ. ಮೇಣಿಯಮೇಲೆ ಕೈಯಿಟ್ಟು ಬಲವಾಗಿ ಅವುಕುತ್ತಾನೆ. ನೇಗಿಲ ತುದಿಯಲ್ಲಿರುವ ಗುಳ ಭೂಮಿಯೊಳಕ್ಕೆ ಹೋಗಿದೆ. ನೇಗಿಲಿಂದ ಬಂದಿರುವ ಈಚನ್ನು ನೊಗಕ್ಕೆ ಹಗ್ಗದಿಂದ ಕಟ್ಟಿದ್ದಾನೆ. ಮೇಣಿಗೆ ಕಟ್ಟಿದ ಹಗ್ಗವನ್ನು ಎಳೆದು, ನೊಗಕ್ಕೆ ಬಿಗಿದಿದ್ದಾನೆ. ಎತ್ತುಗಳು ನೇಗಿಲನ್ನು ಬಲವಾಗಿ ಎಳೆಯುತ್ತವೆ. ಆಗ ಭೂಮಿಯ ಮಣ್ಣು ಕಿತ್ತು ಬಂದು ತಿರುವಿಬೀಳುತ್ತದೆ. ಉತ್ತುಕೊಂಡು ಹೋದಹಾಗೆಲ್ಲ ನೇಗಿಲ ಹಿಂದೆ ಹಳ್ಳಬೀಳುತ್ತದೆ. ಈ ಹಳ್ಳಕ್ಕೆ ನೇಗಿಲಸಾಲು ಅಥವಾ ನೇಗಿಲ ತೆರೆ ಎನ್ನುತ್ತಾರೆ.

ರೈತ ಹೊಲದ ತುದಿಯವರೆಗೂ ಉತ್ತುಕೊಂಡು ಹೋಗುತ್ತಾನೆ. ಅಲ್ಲಿ ತಿರುವಿಕೊಂಡು ಮೊದಲು ಉತ್ತ ನೇಗಿಲಸಾಲಿನ ಪಕ್ಕದಲ್ಲಿಯೇ ಪುನಃ ಉತ್ತುಕೊಂಡು ಬರುತ್ತಾನೆ. ಹೊಲದ ಮಣ್ಣೆಲ್ಲಾ ತಿರುಗಿಬೀಳುವ

ವರೆಗೂ ಉತ್ತು ಆಮೇಲೆ ಅಡ್ಡಡ್ಡವಾಗಿ ಇನ್ನೊಂದುಸಲ ಉಳುತ್ತಾನೆ. ಬಿತ್ತುವುದಕ್ಕೆ ಮೊದಲು ಹೀಗೆ ನೆಲವನ್ನು ಕಷ್ಟಪಟ್ಟು ಸಿದ್ಧಪಡಿಸಬೇಕು.

ಉಳುವುದರಿಂದ ಅನೇಕ ಪ್ರಯೋಜನಗಳುಂಟು. ಭೂಮಿಯಲ್ಲಿ ಬೆಳೆದಿದ್ದ ಕಳೆಯೆಲ್ಲ ಕಿತ್ತುಬಂದು ಮಣ್ಣಿನಲ್ಲಿ ಮುಚ್ಚಿಹೋಗುತ್ತದೆ. ಕೆಳಮಣ್ಣು ಮೇಲಕ್ಕೆ ಬಂದು ಬಿಸಿಲು ಗಾಳಿಗೆ ತಗುಲಿ ಹದವಾಗುತ್ತದೆ. ಬಿಗಿಯಾಗಿದ್ದ ಭೂಮಿ ಮೆದುವಾಗಿ ಪೈರಿನ ಬೇರು ಸರಾಗವಾಗಿ ಇಳಿಯುತ್ತದೆ. ಮಳೆಯ ನೀರು ಮೊದಲಿನಂತೆ ಉರುಳಿಹೋಗದೆ ಸಡಿಲವಾದ ಮಣ್ಣಿನಲ್ಲಿ ಇಳಿಯುತ್ತದೆ. ನೆಲ ಹೆಚ್ಚು ದಿವಸ ಹಸಿಯಾಗಿರುತ್ತದೆ.

ನಾಡುನೇಗಿಲಿಗಿಂತ ಸೀಮೆನೇಗಿಲು ಒಳ್ಳೆಯದು. ಸೀಮೆಯ ನೇಗಿಲು ಕಬ್ಬಿಣದ್ದು. ಇದರಲ್ಲಿ ಗುಳದ ಮೇಲ್ಗಡೆ ತೆಳುವಾದ ರೆಕ್ಕೆಯಿರುತ್ತದೆ. ಗುಳ ಎತ್ತಿಹಾಕಿದ ಮಣ್ಣನ್ನು ರೆಕ್ಕೆ ಚೆನ್ನಾಗಿ ಮಗುಚಿ ಹಾಕುತ್ತದೆ.

ಕೆಲವು ದೇಶಗಳಲ್ಲಿ ಕುದುರೆಗಳನ್ನು ಕಟ್ಟಿ ಉಳುತ್ತಾರೆ. ನಮ್ಮ ದೇಶದಲ್ಲಿ ನೇಗಿಲಿಗೆ ಎತ್ತುಗಳನ್ನು ಕಟ್ಟುತ್ತಾರೆ. ಕೆಲವು ಕಡೆ ಕೋಣಗಳನ್ನು ಕಟ್ಟುವುದುಂಟು.

ಪ್ರಶ್ನೆ

ಉಳುವುದನ್ನು ಹೋಗಿ ನೋಡಿ: ಅದರ ವಿವರವನ್ನೆಲ್ಲಾ ಹೇಳಿ. ಈ ಪಾಠದಲ್ಲಿ ಬರುವ ದ್ವಿತೀಯಾ ವಿಭಕ್ತಿಯ ಕರ್ಮಪದಗಳನ್ನೂ, ಅವಕ್ಕೆ ಸಂಬಂಧಿಸಿದ ಕ್ರಿಯಾಪದ, ಕರ್ತೃಪದಗಳನ್ನೂ ತಿಳಿಸಿ.

ಉದಾ.—ರೈತನು ಹೊಲವನ್ನು ಉಳುತ್ತಾನೆ. ಈ ವಾಕ್ಯದಲ್ಲಿ ರೈತನು ಕರ್ತೃಪದ, ಹೊಲವನ್ನು ಕರ್ಮಪದ, ಉಳುತ್ತಾನೆ ಕ್ರಿಯಾಪದ. ಹಳ್ಳಿ, ಸಂತೆ, ಹಗ್ಗ, ಕೋಣಗಳು, ಎತ್ತುಗಳು--ಇವು ಕರ್ಮಪದವಾಗಬೇಕಾದರೆ ಯಾವ ರೂಪ ಹೇಳಿ. ಇವಕ್ಕೆ ತಕ್ಕ ಕ್ರಿಯಾಪದಗಳನ್ನು ಸೇರಿಸಿ.

೧೬. ಹದ್ದು

ಹದ್ದು ಮಾಂಸವನ್ನು ತಿನ್ನುವ ಪಕ್ಷಿ. ಅದು ಪಕ್ಷಿಗಳಲ್ಲಿ ಬಹಳ ದೊಡ್ಡದು. ನೋಟಕ್ಕೆ ಅಂದವಾಗಿಲ್ಲ. ಅದರ ಕೊಕ್ಕು ಉದ್ದವಾಗಿ ತುದಿಯಲ್ಲಿ ಬಾಗಿಕೊಂಡಿರುತ್ತದೆ. ಕಾಲುಗಳೂ ಹೆಜ್ಜೆಗಳೂ ದೊಡ್ಡವು. ಹದ್ದಿನ ರೆಕ್ಕೆಗಳು ಬಹಳ ಬಲವಾಗಿವೆ. ಆದ್ದರಿಂದ ಹದ್ದು ಬಹುಕಾಲದ

ವರೆಗೂ ಹಾರುತ್ತಿರಬಲ್ಲುದು. ಅದರ ದೃಷ್ಟಿ ಬಹು ಸೂಕ್ಷ್ಮ. ಬಹಳ ದೂರದಲ್ಲಿರುವ ಆಹಾರವನ್ನು ಅದು ನೋಡಿ ಗೊತ್ತುಹಚ್ಚಬಲ್ಲುದು.

ಹದ್ದುಗಳಲ್ಲಿ ರಣಹದ್ದು ಎಂಬ ಒಂದು ಜಾತಿಯಿದೆ. ಇದರ ತಲೆಯೂ ಕತ್ತೂ ತುಪ್ಪಳದಿಂದ ತುಂಬಿರದೆ ಬೋಳಾಗಿರುತ್ತವೆ. ರಣಹದ್ದು ಎತ್ತರವಾದ ಮರಗಳ ಮೇಲಾಗಲಿ, ಕೋಡುಗಲ್ಲಿನ ಮೇಲಾಗಲಿ ಗೂಡು ಕಟ್ಟುತ್ತದೆ. ಮರಿಗಳನ್ನು ಬಹಳ ದಿವಸಗಳವರೆಗೂ ಗುಟುಕು ಕೊಟ್ಟು ಸಾಕುತ್ತದೆ.

ಹದ್ದುಗಳು ಆಕಾಶದಲ್ಲಿ ಹಾರುತ್ತಾ ಇರುವಾಗ, ಒಂದನ್ನೊಂದು ನೋಡುತ್ತಾ ಇರುತ್ತವೆ. ಸತ್ತ ಪ್ರಾಣಿಯನ್ನು ಕಂಡು ಒಂದು ಹದ್ದು ಭೂಮಿಗೆ ಇಳಿದರೆ, ಒಡನೆ ಇತರ ಹದ್ದುಗಳೂ ಅದರ ಹಿಂದೆ ಇಳಿಯುತ್ತವೆ. ಆ ಹದ್ದುಗಳೆಲ್ಲ ಸೇರಿ ಸತ್ತ ಪ್ರಾಣಿಯನ್ನು ಗಬಗಬನೆ ತಿಂದುಬಿಡುತ್ತವೆ. ಇದರಿಂದ ಸತ್ತಪ್ರಾಣಿ ಕೊಳೆತು ನಾರುವುದಕ್ಕೆ ಅವಕಾಶವಿರುವುದಿಲ್ಲ. ಇದೇ ಹದ್ದುಗಳಿಂದ ನಮಗಾಗುವ ಪ್ರಯೋಜನ.

ಡೇಗೆ, ಗಿಡುಗ, ಗರುಡ, ಇವು ಹದ್ದಿನ ವರ್ಗಕ್ಕೆ ಸೇರಿದ ಇತರ ಪಕ್ಷಿಗಳು. ಗರುಡಪಕ್ಷಿಯ ಕುತ್ತಿಗೆಯೂ ಹೊಟ್ಟೆಯೂ ಬಿಳುಪು. ಮಿಕ್ಕ ಭಾಗ ಕೆಂಪು. ಇದನ್ನು ವಿಷ್ಣುವಿನ ವಾಹನವೆಂದು ಕೆಲವರು ಗೌರವಿಸು ತ್ತಾರೆ. ಗರುಡನನ್ನು ಕಂಡರೆ ಹಾವಿಗೆ ಬಲು ಭಯ. ಅದು ಒಡನೆಯೆ ಹುತ್ತವನ್ನು ಸೇರಿಬಿಡುತ್ತದೆ. ಇಲ್ಲದಿದ್ದರೆ ಗರುಡಪಕ್ಷಿ ಎರಗಿ, ಎತ್ತಿ ಕೊಂಡುಹೋಗಿ ತಿಂದುಬಿಡುವುದು.

ಪ್ರಶ್ನೆ

ಮಾಂಸ, ಮರಿಗಳು, ಪ್ರಾಣಿ, ಪಕ್ಷಿಗಳು, ಗರುಡ—ಈ ಶಬ್ದಗಳು ಯಾವ ವಚನ? ಇವು ಕರ್ತೃಪದಗಳು, ಪ್ರಥಮಾ ವಿಭಕ್ತಿ. ಇವನ್ನು ದ್ವಿತೀಯಾ ವಿಭಕ್ತಿಮಾಡಿ ಹೇಳಿ.

ಈ ರೂಪಗಳನ್ನು ಗಮನಿಸಿ.—

ಪ್ರ. ವಿ.	ದ್ವಿ. ವಿ.
ಕಾಲು, ಕಾಲುಗಳು—	ಕಾಲನ್ನು, ಕಾಲುಗಳನ್ನು
ಹುತ್ತ, ಹುತ್ತಗಳು—	ಹುತ್ತವನ್ನು, ಹುತ್ತಗಳನ್ನು
ಪ್ರಾಣಿ, ಪ್ರಾಣಿಗಳು—	ಪ್ರಾಣಿಯನ್ನು, ಪ್ರಾಣಿಗಳನ್ನು

ಹೀಗೆಯೇ ನೆಲ, ನೇಗಿಲು, ಹದ್ದು—ಇವಕ್ಕೆ ಪ್ರಥಮಾ ವಿಭಕ್ತಿ ದ್ವಿತೀಯಾ ವಿಭಕ್ತಿ ಏಕವಚನ ಬಹುವಚನಗಳನ್ನು ಹೇಳಿ.

೧೭. ಉಣ್ಣೆಯ ಬಟ್ಟೆಗಳು

ಪ್ರತಿಯೊಂದು ಹಳ್ಳಿಯಲ್ಲಿಯೂ ಸಾಮಾನ್ಯವಾಗಿ ಕುರಿಗಳು ಇರುತ್ತವೆ. ಕೆಲವು ಗ್ರಾಮಗಳಲ್ಲಿ ಕುರಿಗಳನ್ನು ಹೆಚ್ಚಾಗಿ ಸಾಕುತ್ತಾರೆ. ಅಗೋ! ಆ ಕುರುಬ ತನ್ನ ಕುರಿ ಮಂದೆಯನ್ನು ಮೇಯಿಸುತ್ತ ನಿಂತಿದ್ದಾನೆ. ಅವನು ಕಂಬಳಿಯನ್ನು ಹೊದ್ದುಕೊಂಡು ಪಿಳ್ಳಂಗೋವಿ ಊದುತ್ತಿದ್ದಾನೆ.

ಕಂಬಳಿ ಹೊದ್ದುಕೊಂಡರೆ ಬೆಚ್ಚಗಿರುತ್ತದೆ. ಕಂಬಳಿಯನ್ನು ಕುರಿಯ ತುಪಟದಿಂದ ಮಾಡುತ್ತಾರೆ. ತುಪಟಕ್ಕೆ ಉಣ್ಣೆ ಎಂದೂ ಹೇಳುವುದುಂಟು. ತುಪಟ ಕುರಿಗಳ ಮೈಮೇಲೆ ಬೆಳೆಯುತ್ತದೆ.

ತುಪಟ ಚೆನ್ನಾಗಿ ಬೆಳೆದಮೇಲೆ ಕುರಿಗಳನ್ನು ನೀರಿನಲ್ಲಿ ಚೊಕ್ಕಟವಾಗಿ ತೊಳೆಯುತ್ತಾರೆ. ಆಮೇಲೆ ಮೈ ಒಣಗುವವರೆಗೂ ಬಿಸಿಲಿನಲ್ಲಿ ಓಡಾಡಿಸುತ್ತಾರೆ. ಒಣಗಿದಮೇಲೆ ಕುರಿಯನ್ನು ಮಲಗಿಸಿ ದೊಡ್ಡ ಕತ್ತರಿಗಳಿಂದ ತುಪಟವನ್ನು ಕತ್ತರಿಸುತ್ತಾರೆ. ಕತ್ತರಿಸಿದ ತುಪಟವನ್ನು ಉಣ್ಣೆಯೆಂದು ಕರೆಯುತ್ತಾರೆ.

ಉಣ್ಣೆಯನ್ನು ನೂತು ದಾರವನ್ನೂ, ದಾರವನ್ನು ನೆಯ್ದು ಕಂಬಳಿಯನ್ನೂ ಮಾಡುತ್ತಾರೆ. ಈ ಕಂಬಳಿ ಒರಟಾಗಿರುತ್ತದೆ. ಮರಿಗಳ ಉಣ್ಣೆಯಿಂದ ಆದ ಕಂಬಳಿ ನಯವಾಗಿರುತ್ತದೆ. ನಮ್ಮ ಸೀಮೆಯಲ್ಲಿ ಚಿತ್ರದುರ್ಗ ಮತ್ತು ಕೋಲಾರ ಡಿಸ್ಟ್ರಿಕ್ಟುಗಳಲ್ಲಿ ಒಳ್ಳೆಯ ಕಂಬಳಿ ಆಗುತ್ತದೆ. ಮಂಡ್ಯದ ಕಡೆ ಬಿಳಿಯ ಉಣ್ಣೆಯಿಂದ ಧಾವಳಿ ನೇಯುತ್ತಾರೆ. ಹುಣಸೂರು, ಚಿಕ್ಕನಾಯಕನಹಳ್ಳಿ ಮುಂತಾದ ಕಡೆಗಳಲ್ಲಿ ಉಜ್ಜುಗಂಬಳಿ ಮಾಡುತ್ತಾರೆ.

ಕೆಲವು ದೇಶಗಳಲ್ಲಿ ಬಹು ನಯವಾದ ಉಣ್ಣೆ ಸಿಕ್ಕುತ್ತದೆ. ಇದರಿಂದ ಟ್ವೀಡ್, ಸರ್ಜ್, ಫ್ಲಾನಲ್, ಬನಾತು, ಸಕಲಾತಿ ಎಂಬ ನಯವಾದ ಬಟ್ಟೆಗಳನ್ನು ಮಾಡುತ್ತಾರೆ. ಕಾಶ್ಮೀರ ದೇಶದಲ್ಲಿ ಮೇಕೆಯ ಕೂದಲಿಂದ ಬಹು ಬೆಲೆಯುಳ್ಳ ಶಾಲುಗಳನ್ನು ಮಾಡುತ್ತಾರೆ. ಕೆಲವು ಸೀಮೆಗಳಲ್ಲಿ ಒಂಟೆಯ ಕೂದಲಿಂದಲೂ, ಲಾಮ, ಅಲ್ಪಾಕ ಎಂಬ ಪ್ರಾಣಿಗಳ ಕೂದಲಿಂದಲೂ ಬಟ್ಟೆಗಳನ್ನು ಮಾಡುತ್ತಾರೆ.

ಬಿಳಿಯ ಉಣ್ಣೆಗೆ ಯಾವ ಬಣ್ಣವನ್ನಾದರೂ ಕೊಡಬಹುದು. ಆದುದರಿಂದ ಇದಕ್ಕೆ ಬೆಲೆ ಹೆಚ್ಚು. ಉತ್ತಮವಾದ ಉಣ್ಣೆಯನ್ನು ಕೊಡುವ ಬಿಳಿಯ ಕುರಿಗಳನ್ನು ಸಾಕಿದರೆ ಲಾಭವುಂಟು. ಇಂಥ ಕುರಿಗಳನ್ನು ಸಾಕುವುದಕ್ಕೆ ನಮ್ಮ ಸರ್ಕಾರದವರು ಬೇಕಾದ ಸಹಾಯ ಮಾಡುತ್ತಿದಾರೆ.

ಉಣ್ಣೆಯ ಬಟ್ಟೆ ನಮ್ಮ ಮೈ ಶಾಖವನ್ನು ಹತ್ತಿಯ ಬಟ್ಟೆಗಿಂತಲೂ ಚೆನ್ನಾಗಿ ಕಾಪಾಡುತ್ತದೆ. ಆದ್ದರಿಂದ ಚಳಿಗಾಲದಲ್ಲಿ ಉಣ್ಣೆಯ ಬಟ್ಟೆಗಳನ್ನು ಹಾಕಿಕೊಂಡರೆ ಬೆಚ್ಚಗಿರುತ್ತದೆ.

ಪ್ರಶ್ನೆ

ಕುರಿಗಳನ್ನು, ಕಂಬಳಿಯನ್ನು, ತುಪಟವನ್ನು, ದಾರವನ್ನು — ಇವು ಯಾವ ವಿಭಕ್ತಿ? ಇವುಗಳ ಪ್ರಥಮಾ ವಿಭಕ್ತಿಯನ್ನು ಹೇಳಿ. ಉಣ್ಣೆ, ಬಣ್ಣ, ಕುರಿ, ಶಾಖ — ಇವು ಯಾವ ವಿಭಕ್ತಿ? ಇವುಗಳ ದ್ವಿತೀಯಾ ವಿಭಕ್ತಿಯನ್ನು ಹೇಳಿ. ಪ್ರಥಮಾ ವಿಭಕ್ತಿಗೆ ಏನು ಸೇರಿದರೆ ದ್ವಿತೀಯಾ ವಿಭಕ್ತಿಯಾಗುತ್ತದೆ? (—ಅನ್ನು) ಉದಾ.— ಕುರಿ, ಕುರಿಯನ್ನು; ಕುರಿಗಳು, ಕುರಿಗಳನ್ನು. ಮನೆ, ಮನೆಯನ್ನು; ಮನೆಗಳು, ಮನೆಗಳನ್ನು. ಹೊಲ, ಹೊಲವನ್ನು; ಹೊಲಗಳು, ಹೊಲಗಳನ್ನು. ಹೀಗೇ ಐದಾರು ಬೇರೆ ಉದಾಹರಣೆಗಳನ್ನು ಕೊಡಿ.

೧೮. ಹಗಲು, ರಾತ್ರಿ

ಯಾವಾಗ ಹಗಲು? ಯಾವಾಗ ರಾತ್ರಿ? ಸೂರ್ಯ ಇರುವಾಗ ಹಗಲು, ಇಲ್ಲದಾಗ ರಾತ್ರಿ. ನಿತ್ಯವೂ ಸೂರ್ಯ ಹುಟ್ಟುತ್ತಾನೆ; ಆಕಾಶದಲ್ಲಿ ಸಂಚರಿಸುತ್ತಾನೆ; ಆಮೇಲೆ ಮುಳುಗುತ್ತಾನೆ. ಹೀಗೆ ಸೂರ್ಯ ತಿರುಗುವಂತೆ ನಮಗೆ ಪ್ರತಿದಿನವೂ ಕಾಣುತ್ತಾನೆ. ಆದರೆ ನಿಜವಾಗಿ ತಿರುಗುವುದು ಈ ಭೂಮಿ. ಸೂರ್ಯ ಒಂದೇ ಕಡೆ ಇರುತ್ತಾನೆ.

ಒಂದು ಪರೀಕ್ಷೆ ಮಾಡಿ. ಒಂದು ದೀಪದ ಎದುರಿಗೆ ಒಂದು ಚೆಂಡನ್ನು ಹಿಡಿಯಿರಿ. ದೀಪವೇ ಸೂರ್ಯ, ಚೆಂಡೇ ಭೂಮಿ ಎಂದು ತಿಳಿಯೋಣ. ಚೆಂಡು ಗುಂಡಾಗಿರುವುದರಿಂದ ದೀಪದ ಬೆಳಕು ಎಲ್ಲ ಕಡೆಗಳಲ್ಲೂ ಬಿದ್ದಿಲ್ಲ. ಬೆಳಕು ಬಿದ್ದಿರುವ ಭಾಗಕ್ಕೆ ಹಗಲು, ಬೆಳಕಿಲ್ಲದ ಭಾಗಕ್ಕೆ ರಾತ್ರಿ. ಚೆಂಡನ್ನು ತಿರುಗಿಸೋಣ. ರಾತ್ರಿಯಾಗಿದ್ದ ಭಾಗಕ್ಕೆ ಹಗಲೂ, ಹಗಲಿದ್ದ ಭಾಗಕ್ಕೆ ರಾತ್ರಿಯೂ ಆಗುತ್ತವೆ.

ಹೀಗೆ ಭೂಮಿ ಸುತ್ತುವುದರಿಂದ ನಮಗೆ ಹಗಲಿದ್ದಾಗ ಆಚೆಯ ಕಡೆಯ ಜನರಿಗೆ ರಾತ್ರಿ ಇರುತ್ತದೆ. ಅವರಿಗೆ ಹಗಲಿದ್ದಾಗ ನಮಗೆ ರಾತ್ರಿ ಇರುತ್ತದೆ. ನಾವು ರಾತ್ರಿಯಲ್ಲಿ ಭೂಮಿಯೊಡನೆ ತಿರುಗುತ್ತೇವೆ. ಯಾವಾಗ ಸೂರ್ಯನ ಬೆಳಕು ನಮಗೆ ಸ್ವಲ್ಪ ಸ್ವಲ್ಪ ಬರುವಂತೆ ಆಗುತ್ತದೋ ಆಗ ಬೆಳಗಾಯಿತು ಎನ್ನುತ್ತೇವೆ. ಸೂರ್ಯನನ್ನು ಮೊದಲು ಕಂಡಾಗ ಸೂರ್ಯ ಹುಟ್ಟಿದನು ಎನ್ನುತ್ತೇವೆ. ಆಗ ಪ್ರಾತಃಕಾಲ. ಭೂಮಿ ತಿರುಗುತ್ತ ಸೂರ್ಯ ನೆತ್ತಿಗೆ ಬಂದಾಗ ಮಧ್ಯಾಹ್ನ ಎನ್ನುತ್ತೇವೆ. ಆಮೇಲೆ ನಾವು ಮುಂದಕ್ಕೆ ತಿರುಗಿ ಸೂರ್ಯನನ್ನು ಹಿಂದೆ ಬಿಡುತ್ತೇವೆ. ಸೂರ್ಯನು ಮರೆಯಾಗುತ್ತ ಬರುವಾಗ ಸಾಯಂಕಾಲ, ಸೂರ್ಯ ಮುಳುಗುತ್ತಾನೆ ಎನ್ನುತ್ತೇವೆ. ಮುಳುಗಿದಮೇಲೆ ಸೂರ್ಯನ ಬೆಳಕು ಬೀಳುವುದಿಲ್ಲ. ಆಗ ರಾತ್ರಿ ಎನ್ನುತ್ತೇವೆ.

ಭೂಮಿ ಪಶ್ಚಿಮದ ಕಡೆಯಿಂದ ಪೂರ್ವದ ಕಡೆಗೆ ತಿರುಗುತ್ತದೆ. ಹೀಗೆ ಒಂದು ಬಾರಿ ತಿರುಗುವ ಕಾಲವನ್ನು ಒಂದು ದಿನ ಎನ್ನುತ್ತೇವೆ. ಒಂದು ದಿನವನ್ನು ಇಪ್ಪತ್ತುನಾಲ್ಕು ಗಂಟೆಗಳಾಗಿ ಹಂಚಿದ್ದಾರೆ. ಆದ್ದರಿಂದ ಹಗಲು ಹನ್ನೆರಡು ಗಂಟೆ ರಾತ್ರಿ ಹನ್ನೆರಡು ಗಂಟೆ ಎಂದು ಹೇಳಬಹುದು.

ಭೂಮಿ ಸೂರ್ಯನ ಸುತ್ತಲೂ ಉರುಳಿಕೊಂಡು ಒಂದು ಪ್ರದಕ್ಷಿಣೆ ಮಾಡುವುದಕ್ಕೆ ಸುಮಾರು ೩೬೫ ದಿವಸಗಳು ಬೇಕು. ಈ ಕಾಲವನ್ನು ಒಂದು ವರ್ಷ ಎನ್ನುತ್ತೇವೆ. ಭೂಮಿ ಸೂರ್ಯನ ಸುತ್ತಲೂ ತಿರುಗುವಂತೆ ಚಂದ್ರ ಭೂಮಿಯ ಸುತ್ತಲೂ ತಿರುಗುತ್ತಾನೆ. ಹೀಗೆ ಚಂದ್ರ ಭೂಮಿಯನ್ನು ಒಂದು ಪ್ರದಕ್ಷಿಣೆ ಮಾಡುವುದಕ್ಕೆ ಸುಮಾರು ೨೯ ದಿವಸಗಳು ಬೇಕು. ಈ ಕಾಲವನ್ನು ಒಂದು ತಿಂಗಳು ಎನ್ನುತ್ತೇವೆ.

ಪ್ರಶ್ನೆ

ಈ ಪಾಠದಲ್ಲಿರುವ ಪ್ರಥಮಾ ವಿಭಕ್ತಿಗಳು ಯಾವುವು? ಉದಾ.— ಹಗಲು, ರಾತ್ರಿ, ಸೂರ್ಯ — ಮುಕ್ಕವುಗಳನ್ನು ಗುರುತು ಹಿಡಿಯಿರಿ. ದ್ವಿತೀಯಾ ವಿಭಕ್ತಿಗಳು ಯಾವುವು? ಉದಾ.— ಚಿತ್ರವನ್ನು, ಚೆಂಡನ್ನು, ಸೂರ್ಯನನ್ನು— ಮುಕ್ಕವುಗಳನ್ನು ಗುರುತು ಹಿಡಿಯಿರಿ. ಈ ಪಾಠದಿಂದ ಹತ್ತು ಕ್ರಿಯಾಪದಗಳನ್ನು ತೆಗೆದು ತೋರಿಸಿ. ಆ ಕ್ರಿಯಾಪದಗಳನ್ನು ಸೇರಿಸಿ ವಾಕ್ಯಗಳನ್ನು ಮಾಡಿ.

೧೯. ಇಬ್ಬನಿ, ಮಂಜು

ವರ್ಷದ ಕೆಲವು ದಿವಸಗಳಲ್ಲಿ ಬೆಳಗಿನ ಹೊತ್ತು ಹುಲ್ಲು ಗರುಕೆಯ ಮೇಲೆ ಏನು ಕಾಣಿಸುತ್ತದೆ? ನೀರಿನ ಸಣ್ಣ ಸಣ್ಣ ಹನಿಗಳು ಮುತ್ತಿನ ಮಣಿಗಳ ಹಾಗೆ ಕಾಣಿಸುವುದಲ್ಲವೆ? ಇದೇ ಇಬ್ಬನಿಯ ನೀರು. ಇದು ಗಿಡದ ಎಲೆಗಳ ಮೇಲೂ ಇರುತ್ತದೆ. ಆದರೆ ಗರುಕೆಯ ಮೇಲಿರುವ ಇಬ್ಬನಿಯೆ ಚೆಂದ. ಬಿಸಿಲು ಏರುತ್ತ ಏರುತ್ತ ಈ ನೀರು ಇಂಗಿ ಹೋಗುತ್ತದೆ.

ಮಾರ್ಗಶೀರ್ಷ, ಪುಷ್ಯ, ಮಾಘ ಮತ್ತು ಫಾಲ್ಗುಣ— ಈ ನಾಲ್ಕು ತಿಂಗಳಲ್ಲಿ ಮಂಜು ಬೀಳುತ್ತದೆ. ಆಗ ಚಳಿ ಹೆಚ್ಚಾಗಿರುವುದರಿಂದ ಗಾಳಿಯಲ್ಲಿರುವ ಆವಿ ತಣ್ಣಗಾಗಿ ತುಂತುರಾಗುತ್ತದೆ. ಇದೇ ಮಂಜು. ಇದು ತಂಪಾದ ಬೆಳಗಿನ ಹೊತ್ತೂ ಸಾಯಂಕಾಲದ ಹೊತ್ತೂ ಬೀಳುತ್ತದೆ. ಮಂಜು ಮೇಘದ ಹಾಗೆ ಕಾಣುತ್ತದೆ. ಒಂದೊಂದುವೇಳೆ ಹೊಗೆಯ ಹಾಗೂ ಕಾಣುತ್ತದೆ.

ಮಂಜು ಒತ್ತಾಗಿ ಬೀಳುವಾಗ ಸಣ್ಣ ತುಂತುರು ಮಳೆ ಬೀಳುವ ಹಾಗೆ ಇರುತ್ತದೆ. ಆಗ ಬಟ್ಟೆ ಬರೆ ನೆನೆದು ತಣ್ಣಗಾಗುವುದೂ ಉಂಟು. ಮಂಜು ಬೀಳುವಾಗ ಒಂದೊಂದು ಕಾಲದಲ್ಲಿ ಹತ್ತಿರ ಇರುವ ಪದಾರ್ಥಗಳು ಕೂಡ ಚೆನ್ನಾಗಿ ಕಾಣುವುದಿಲ್ಲ. ಅವು ನವಿರುಬಟ್ಟೆಯ ತೆರೆಯೊಳಗೆ ಕಾಣುವಹಾಗೆ ಕಾಣಿಸುತ್ತವೆ. ಬೆಟ್ಟದಮೇಲೂ ನೀರಿನಮೇಲೂ ಗಿಡಗಳು ಗುಂಪಾಗಿರುವ ಕಡೆಯಲ್ಲೂ ಮಂಜು ಬಲವಾಗಿ ಬೀಳುತ್ತದೆ.

ಪ್ರಶ್ನೆ

ಇರು — ಇರುತ್ತದೆ: ಹೋಗು — ಹೋಗುತ್ತದೆ: ಬೀಳು — ಬೀಳುತ್ತದೆ: ಕಾಣು — ಕಾಣುತ್ತದೆ: ಹುಟ್ಟು — ಹುಟ್ಟುತ್ತಾನೆ: ಮುಳುಗು — ಮುಳುಗುತ್ತಾನೆ: ತಿರುಗು — ತಿರುಗುತ್ತಾನೆ — ಇವು ಯಾವ ಕಾಲ? ಇವಕ್ಕೆ ಭೂತಕಾಲವನ್ನು ಹೇಳಿ. ಕರ್ತೃಪದವನ್ನು ಸೇರಿಸಿ ಒಂದೊಂದು ವಾಕ್ಯಗಳನ್ನು ಹೇಳಿ. ಕರ್ಮಪದವನ್ನು ಸೇರಿಸಿ ಹೇಳಿ. ಇರು, ಹೋಗು, ಹುಟ್ಟು ಮುಂತಾದುವಕ್ಕೆ ಕರ್ಮಪದ ಸೇರುತ್ತದೆಯೆ? ಕೆಲವು ಕ್ರಿಯೆಗಳಿಗೆ ಸೇರಬಹುದು. ಕೆಲವಕ್ಕೆ ಸೇರುವುದಿಲ್ಲ. ಇದನ್ನು ಗಮನಿಸಿ.

೨೦. ದೊರೆ ಮತ್ತು ಅಪರಾಧಿಗಳು



ಒಂದು ದಿನ ಒಬ್ಬ ದೊರೆ ಬಂದೀಖಾನೆಯನ್ನು ನೋಡುವುದಕ್ಕೆ ಹೋದನು. ಅಲ್ಲಿ ನಾಲ್ಕು ಜನ ಅಪರಾಧಿಗಳು ಕೆಲಸ ಮಾಡುತ್ತಿದ್ದರು. ದೊರೆ ಅವರಲ್ಲಿ ಒಬ್ಬನನ್ನು ಕರೆದು "ಎಲಾ, ನಿನಗೇಕೆ ಶಿಕ್ಷೆಯಾಯಿತು?" ಎಂದು ಕೇಳಿದನು. ಅವನು "ಮಹಾಸ್ವಾಮಿ! ನಾನು ತಪ್ಪು ಮಾಡಲಿಲ್ಲ. ನನ್ನಮೇಲಿನ ದ್ವೇಷದಿಂದ ಸಾಕ್ಷಿಗಳು ಸುಳ್ಳು ಹೇಳಿದರು" ಎಂದನು.

ಆಗ ಅರಸನು ಮತ್ತೊಬ್ಬನನ್ನು ಕರೆದು "ನಿನ್ನ ಸೆರೆಗೆ ಕಾರಣ ವೇನು?" ಎಂದು ಕೇಳಿದನು. ಖೈದಿ "ಬುದ್ಧಿ! ನಾನು ಅಪರಾಧಿಯಲ್ಲ. ನ್ಯಾಯಾಧಿಪತಿ ಅನ್ಯಾಯವಾಗಿ ಶಿಕ್ಷೆ ವಿಧಿಸಿದನು" ಎಂದನು.

ಅರಸನು ಮೂರನೆಯವನನ್ನು ಹೀಗೆಯೆ ಪ್ರಶ್ನೆ ಮಾಡಿದನು. ಅವನು "ಪ್ರಭುವೆ! ನಮ್ಮೂರಿನಲ್ಲಿ ನನ್ನ ಹಾಗೆಯೆ ಇನ್ನೊಬ್ಬನಿದ್ದನು. ಅವನು ತಪ್ಪುಮಾಡಿ ಓಡಿಹೋದನು. ಅವನೇ ನಾನೆಂದು ನನಗೆ ಶಿಕ್ಷೆಮಾಡಿದ್ದಾರೆ" ಎಂದು ಅರಿಕೆ ಮಾಡಿದನು.

ಹೀಗೆಯೇ ನಾಲ್ಕನೆಯವನನ್ನೂ ದೊರೆ ಕೇಳಿದನು. ಅವನು "ಅಯ್ಯೋ! ನಾನೊಬ್ಬರ ಗಂಟನ್ನು ಕದ್ದೆ. ಆದ್ದರಿಂದ ನನಗೆ ಶಿಕ್ಷೆಯಾಯಿತು" ಎಂದನು. ಆಕ್ಷಣವೆ ದೊರೆ ಅಲ್ಲಿದ್ದ ಅಧಿಕಾರಿಯನ್ನು ಕರೆದು "ಈ ನಾಲ್ಕನೆಯವನು ಪ್ರಾಮಾಣಿಕನಾಗಿದ್ದಾನೆ. ತಪ್ಪನ್ನೇನೋ ಮಾಡಿದನು. ಆದರೆ ಅದನ್ನು ಮುಚ್ಚಬೇಕೆಂದು ಸುಳ್ಳು ಹೇಳಲಿಲ್ಲ.

ಇವನು ಇದುವರೆಗೂ ಅನುಭವಿಸಿದ ಶಿಕ್ಷೆಯೆ ಸಾಕು. ಇನ್ನು ಇವನನ್ನು ಬಿಟ್ಟುಬಿಡು. ಉಳಿದ ಮೂರು ಜನರೂ ಸುಳ್ಳರು, ಅವರು ಇಲ್ಲಿಯೇ ಇರಲಿ'' ಎಂದು ಹೇಳಿದನು.

ಆದುದರಿಂದ ಒಂದುವೇಳೆ ತಪ್ಪುಮಾಡಿದರೂ ನಿಜವನ್ನು ಹೇಳಿದರೆ ಒಳ್ಳೆಯದಾಗುವುದು.

ಪ್ರಶ್ನೆ

ಈ ಪಾಠದ ನಾಮಪದ, ಕ್ರಿಯಾಪದಗಳನ್ನು ವಿಂಗಡಿಸಿ ಹೇಳಿ. ಅವುಗಳ ವಚನ, ವಿಭಕ್ತಿ, ಕಾಲ ಇವುಗಳನ್ನು ತಿಳಿಸಿ. ಕರ್ತೃಪದ, ಕರ್ಮಪದಗಳನ್ನು ಗುರುತಿಸಿ.' ದ್ವೇಷದಿಂದ— ಇದು ತೃತೀಯಾ ವಿಭಕ್ತಿ. ದ್ವೇಷ, ದ್ವೇಷವನ್ನು, ದ್ವೇಷದಿಂದ. ಹೀಗೆಯೇ ಹೊಲ, ಹೊಲವನ್ನು, ಹೊಲದಿಂದ; ಕುರಿ, ಕುರಿಯನ್ನು, ಕುರಿಯಿಂದ; ಮನೆ, ಮನೆಯನ್ನು, ಮನೆಯಿಂದ. ತೃತೀಯಾ ವಿಭಕ್ತಿಯುಳ್ಳ ನಾಲ್ಕು ವಾಕ್ಯಗಳನ್ನು ಹೇಳಿ. ಉದಾ.— ಎಲ್ಲಿಂದ ಬಂದಿರಿ?— ಮನೆಯಿಂದ ಬಂದೆವು, ಊರಿನಿಂದ ಬಂದೆವು. ತೃತೀಯೆಗೆ—ಇಂದ ಸೇರುತ್ತದೆ.

೨೧. ದೋಣಿ, ಹೊಳೆ ದಾಟುವುದು

ಪ್ರಯಾಣ ಮಾಡುವಾಗ ಮಧ್ಯ ಹೊಳೆ ಬಂದರೆ, ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೇಗೆ ಹೋಗುವುದು? ಇದಕ್ಕಾಗಿ ಕೆಲವು ಸ್ಥಳಗಳಲ್ಲಿ ಸೇತುವೆಗಳನ್ನು ಕಟ್ಟಿರುತ್ತಾರೆ. ಸೇತುವೆ ಇಲ್ಲದ ಕಡೆ ನೀರಿನಮೇಲೆ ತೇಲುವ ದೋಣಿ, ಜಂಗಾಲು, ಹರಿಗೋಲು ಮುಂತಾದುವನ್ನು ಜನರು ಉಪಯೋಗಿಸುತ್ತಾರೆ. ಬೇಸಗೆಯಲ್ಲಿ ಅನೇಕ ನದಿಗಳ ನೀರು ಇಳಿದು ಹೋಗುತ್ತದೆ. ಆಗ ಜನರು ಸರಾಗವಾಗಿರುವ ಸ್ಥಳದಲ್ಲಿ ನದಿಯನ್ನು ಹಾಯುತ್ತಾರೆ. ಇಂತಹ ಸ್ಥಳಕ್ಕೆ ಹಾಯ್ಗಡ ಎಂದು ಹೆಸರು.

ದೋಣಿಯನ್ನು ಮರದ ದಿಮ್ಮಿಯಿಂದಾಗಲಿ ಹಲಗೆಗಳಿಂದಾಗಲಿ ಮಾಡುತ್ತಾರೆ. ದಿಮ್ಮಿಯನ್ನು ಉದ್ದಕ್ಕೂ ಮಧ್ಯದಲ್ಲಿ ತೋಡಿದರೆ ಹಳ್ಳ ವಾಗುತ್ತದೆ. ಈ ಹಳ್ಳದಲ್ಲಿ ಜನರು ಕುಳಿತುಕೊಳ್ಳುತ್ತಾರೆ. ಈ ದೋಣಿಗಿಂತ ಹಲಗೆಗಳನ್ನು ಜೋಡಿಸಿ ಕಟ್ಟಿದ ದೋಣಿ ಉತ್ತಮ. ಇದು ಸುಲಭವಾಗಿ ಹೊರಳುವುದಿಲ್ಲ. ಇದನ್ನು ಬೇಕಾದಷ್ಟು ದೊಡ್ಡದಾಗಿಯೂ ಕಟ್ಟಬಹುದು.

ದೋಣಿಯನ್ನು ಅಂಬಿಗನು ನಡಸುತ್ತಾನೆ. ಅವನು ದೋಣಿಯಲ್ಲಿ ನಿಂತು, ಉದ್ದವಾದ ಮತ್ತು ಬಲವಾದ ಬಿದಿರು ಗಣೆಯನ್ನು ನೆಲಕ್ಕೆ

ಊರಿ ಅಮುಕುತ್ತಾನೆ. ಆಗ ದೋಣಿ ಮುಂದಕ್ಕೆ ಸಾಗುತ್ತದೆ. ನದಿ ಆಳವಾಗಿದ್ದು ಗಣೆಗೆ ನೆಲ ಸಿಕ್ಕದಿದ್ದರೆ, ಅವನು ಹುಟ್ಟುಹಾಕಿ ನೀರನ್ನು ಬಗಿಯುತ್ತಾನೆ. ಆಗಲೂ ದೋಣಿ ಮುಂದಕ್ಕೆ ಹೋಗುತ್ತದೆ.

ಜಂಗಾಲನ್ನು ಮಾಡಬೇಕಾದರೆ ಎರಡು ದೋಣಿಗಳನ್ನು ಸ್ವಲ್ಪ ದೂರ ಬಿಟ್ಟು ಇಡಬೇಕು; ಅವೆರಡರಮೇಲೆ ಹಲಗೆಗಳನ್ನು ಹಾಕಿ ಭದ್ರಪಡಿಸಬೇಕು; ಸುತ್ತಲೂ ತಡೆಗಟ್ಟನ್ನು ಕಟ್ಟಬೇಕು. ಜಂಗಾಲು ಹೊರಳುವುದಿಲ್ಲ. ಇದರಲ್ಲಿ ಹೆಚ್ಚು ಜನರು ಕುಳಿತು ಸುರಕ್ಷಿತವಾಗಿ ನದಿಯನ್ನು ದಾಟಬಹುದು. ಜಂಗಾಲಿನಲ್ಲಿ ಹೆಚ್ಚು ಸಾಮಾನು ಹಾಕಬಹುದು. ಗಾಡಿಗಳನ್ನು ಕೂಡ ನಿಲ್ಲಿಸಬಹುದು.

ಹರಿಗೋಲನ್ನು ಬಲವಾದ ಬಿದಿರು ದೆಬ್ಬೆಗಳಿಂದಲೂ ತೊಗಲಿನಿಂದಲೂ ಮಾಡುತ್ತಾರೆ. ಆರು ಅಥವಾ ಏಳು ಮೊಳ ಅಗಲವಿರುವ ದೊಡ್ಡ ಬುಟ್ಟಿಯನ್ನು ತೆಗೆದುಕೊಳ್ಳುತ್ತಾರೆ. ಇದರ ಹೊರಗಡೆ ಸುತ್ತಲೂ ಹದಮಾಡಿದ ತೊಗಲನ್ನು ಹೊದಿಸುತ್ತಾರೆ. ಆಮೇಲೆ ಅಂಚಿನಲ್ಲಿ ಸುತ್ತಲೂ ಬಿಗಿಯಾಗಿ ಹೊಲಿಯುತ್ತಾರೆ. ಹರಿಗೋಲಿಗೆ ಉಕ್ಕಡವೆಂದೂ ಹೆಸರಿದೆ. ಇದರಲ್ಲಿಯೂ ಜನರು ಕುಳಿತುಕೊಳ್ಳುತ್ತಾರೆ.

ಅಂಬಿಗನು ದೋಣಿ, ಜಂಗಾಲು, ಹರಿಗೋಲು ಮುಂತಾದುವನ್ನು ನಡಸುತ್ತಾನೆ. ನದಿಯನ್ನು ದಾಟುವ ಜನರು ಅವನಿಗೆ ಕೂಲಿ ಕೊಡುತ್ತಾರೆ. ಇದರಿಂದ ಅವನ ಜೀವನ ನಡೆಯುತ್ತದೆ.

ಪ್ರಶ್ನೆ

ಈ ಪಾಠದಲ್ಲಿ ತೃತೀಯಾ ವಿಭಕ್ತಿಗಳನ್ನು ತೋರಿಸಿ. ಒಂದು ಕಡೆಯಿಂದ ಇನ್ನೊಂದು ಕಡೆಗೆ—ಇಲ್ಲಿ **ಕಡೆಯಿಂದ** ಯಾವ ವಿಭಕ್ತಿ? ತೃತೀಯಾ ವಿಭಕ್ತಿ. **ಕಡೆಗೆ**—ಚತುರ್ಥೀ ವಿಭಕ್ತಿ. ಹೀಗೆಯೇ ಸ್ಥಳಕ್ಕೆ, ನೆಲಕ್ಕೆ, ಗಣೆಗೆ, ಅವನಿಗೆ—ಇವು ಚತುರ್ಥೀ ವಿಭಕ್ತಿ.

ಪ್ರಥಮಾ—	ಹೊಲ	ಕುರಿ	ಮನೆ
ದ್ವಿತೀಯಾ—	ಹೊಲವನ್ನು	ಕುರಿಯನ್ನು	ಮನೆಯನ್ನು
ತೃತೀಯಾ—	ಹೊಲದಿಂದ	ಕುರಿಯಿಂದ	ಮನೆಯಿಂದ
ಚತುರ್ಥೀ—	ಹೊಲಕ್ಕೆ	ಕುರಿಗೆ	ಮನೆಗೆ

—ಗೆ, —ಇಗೆ—ಕ್ಕೆ ಇವು ಸೇರಿದ್ದರೆ ಚತುರ್ಥಿ. ಚತುರ್ಥೀ ವಿಭಕ್ತಿಯನ್ನು ಸೇರಿಸಿ ನಾಲ್ಕು ವಾಕ್ಯಗಳನ್ನು ಹೇಳಿ. ಎಲ್ಲಿಗೆ ಹೋಗುತ್ತೀರಿ? ಮನೆಗೆ ಹೋಗುತ್ತೇವೆ, ಹೊಲಕ್ಕೆ ಹೋಗುತ್ತೇವೆ. ಊರಿಗೆ, ಹಳ್ಳಿಗೆ, ತೋಟಕ್ಕೆ.

೨೨. ಒಡಹುಟ್ಟಿದವರಲ್ಲಿ ಪ್ರೀತಿ



ಮೈಸೂರು ರಾಜ್ಯವನ್ನು ಕೆಲವು ಕಾಲ ಬೆಟ್ಟದ ಚಾಮರಾಜ ಒಡೆಯರು ಆಳಿದರು. ಆದರೆ ಅವರ ರಾಜ್ಯಭಾರ ಕೆಲವು ಜನರಿಗೆ ಚೆನ್ನಾಗಿ ತೋರಲಿಲ್ಲ. ಆಗ ಆ ಜನರು ಚಾಮರಾಜ ಒಡೆಯರನ್ನು ಸಿಂಹಾಸನ ದಿಂದ ತೆಗೆದು ರಾಜ ಒಡೆಯರಿಗೆ ಪಟ್ಟ ಕಟ್ಟಿದರು. ರಾಜ ಒಡೆಯರು ಚಾಮರಾಜ ಒಡೆಯರ ತಮ್ಮಂದಿರು.

ಜನರು ಹೀಗೆ ಮಾಡಿದ್ದರಿಂದ ಬೆಟ್ಟದ ಒಡೆಯರಿಗೆ ಅಸಮಾಧಾನ ವಾಯಿತು. ತಮ್ಮನು ರಾಜ್ಯದಮೇಲಿನ ಆಸೆಯಿಂದ ಕೆಟ್ಟವರ ಮಾತನ್ನು ಕೇಳಿದನೆಂದು ಕೋಪಮಾಡಿಕೊಂಡರು. ಆಗ ಬೆಟ್ಟದ ಒಡೆಯರ ಸ್ನೇಹಿತರು ರಾಜ ಒಡೆಯರನ್ನು ಸಿಂಹಾಸನದಿಂದ ತಳ್ಳುವುದಾಗಿ ಹೇಳಿ ದಂಗೆಯೆದ್ದರು. ರಾಜ ಒಡೆಯರು ಈ ದಂಗೆಯನ್ನು ಅಡಗಿಸಿ ಅಣ್ಣಂದಿರನ್ನು ಸಭೆಗೆ ಬರಮಾಡಿ ಕೊಂಡರು.

ಚಾಮರಾಜರು ಸಭೆಗೆ ಬರುತ್ತಲು ದೊರೆಗಳು ಎದ್ದು ನಿಂತು ಅಣ್ಣಂದಿರನ್ನು ಅಪ್ಪಿಕೊಳ್ಳಲು ಹೋದರು. ಚಾಮರಾಜರಿಗೆ ಅದು ತಿಳಿಯಲಿಲ್ಲ. ತಮ್ಮನ್ನು ಕೊಲ್ಲುವುದಕ್ಕಾಗಿ ಬರುತ್ತಿದ್ದಾರೆಂದು ತಿಳಿದು ದೊರೆಗಳನ್ನು ಕೆಳಕ್ಕೆ ಕೆಡವಿದರು. ಆದರೆ ರಾಜ ಒಡೆಯರು ಕೋಪ ಮಾಡಿಕೊಳ್ಳಲಿಲ್ಲ. ಮೆಲ್ಲನೆದ್ದು ಅಣ್ಣಂದಿರನ್ನು ಒಂದು ಮನೆಯಲ್ಲಿ ಸೆರೆಯಾಗಿಟ್ಟರು.

ಇದೆಲ್ಲವನ್ನೂ ನೋಡುತ್ತಿದ್ದ ನರಸರಾಜನೆಂಬ ದುಷ್ಟನು ಒಂದು ಆಲೋಚನೆ ಮಾಡಿದನು. "ಚಾಮರಾಜರನ್ನು ಕಂಡರೆ ದೊರೆಗಳಿಗೆ ಆಗುವುದಿಲ್ಲ. ಚಾಮರಾಜರ ಕಣ್ಣುಗಳನ್ನು ಕೀಳಿಸಿದರೆ ದೊರೆಗಳಿಗೆ ಸಂತೋಷವಾಗುತ್ತದೆ. ಆಗ ಅವರು ನನಗೆ ಬಹುಮಾನ ಕೊಡುತ್ತಾರೆ" ಎಂದು ಅವನು ಹೇಳಿಕೊಂಡನು. ಹಾಗೆಯೆ ಇಬ್ಬರು ಕಟುಕರನ್ನು ಆ ಕೆಲಸಕ್ಕೆ ನಿಯಮಿಸಿದನು.

ಈ ಸಮಾಚಾರ ಹೇಗೋ ದೊರೆಗಳಿಗೆ ತಿಳಿಯಿತು. ಕೂಡಲೆ ದೊರೆಗಳು ನರಸರಾಜನನ್ನೂ ಅವನ ಅಣ್ಣನನ್ನೂ ಹಿಡಿತರಿಸಿದರು. ನರಸರಾಜನು ಹೆದರಿಕೆಯಿಂದ ನಡುಗುತ್ತಿದ್ದನು. "ಎಲಾ ನೀಚ! ನಿನ್ನ ಅಣ್ಣನ ಕಣ್ಣುಗಳನ್ನು ಕೀಳು" ಎಂದು ನರಸರಾಜನಿಗೆ ದೊರೆಗಳು ಆಜ್ಞೆ ಮಾಡಿದರು. ಅವನು ಅಳುತ್ತಾ "ಮಹಾಸ್ವಾಮಿ! ನನ್ನ ಅಣ್ಣನು ಏನು ತಪ್ಪು ಮಾಡಿದ್ದಾನೆ?" ಎಂದು ಕೇಳಿದನು. ಆಗ ರಾಜ ಒಡೆಯರು "ನಮ್ಮ ಅಣ್ಣಂದಿರು ಏನು ತಪ್ಪು ಮಾಡಿದ್ದಾರೆ? ಅವರ ಕಣ್ಣು ಕೀಳಿಸುವುದಕ್ಕೆ ನೀನೇಕೆ ಪ್ರಯತ್ನಪಟ್ಟೆ?" ಎಂದು ಕೇಳಿದರು. ಆಗ ಸಭೆಯಲ್ಲಿದ್ದವರೆಲ್ಲ ದೊರೆಗಳ ಭ್ರಾತೃಪ್ರೇಮವನ್ನು ನೋಡಿ ಸಂತೋಷಪಟ್ಟರು.

ದೊರೆಗಳು ನರಸರಾಜನನ್ನು ದಂಡಿಸಿ, ತಮ್ಮ ಅಣ್ಣಂದಿರನ್ನು ತೆರಕಣಾಂಬಿಗೆ ಕಳುಹಿಸಿಕೊಟ್ಟರು.


ಪ್ರಶ್ನೆ

ಈ ಪಾಠದಲ್ಲಿ ಚತುರ್ಥೀ ವಿಭಕ್ತಿಗಳನ್ನು ಗುರುತಿಸಿ. ತೃತೀಯಾ ವಿಭಕ್ತಿಗಳನ್ನು ಗುರುತಿಸಿ. ಅವರು, ಜನರು, ದೊರೆಗಳು, ನಾನು—ಇವಕ್ಕೆ ದ್ವಿತೀಯಾ, ತೃತೀಯಾ, ಚತುರ್ಥೀ ವಿಭಕ್ತಿಗಳನ್ನು ಹೇಳಿ, ಒಂದೊಂದು ವಾಕ್ಯವನ್ನು ಮಾಡಿ.

೨೩. ವ್ಯವಸಾಯದ ಸಲಕರಣೆಗಳು

ರೈತರು ಸಾಮಾನ್ಯವಾಗಿ ಹೊಲ, ಗದ್ದೆ ಮತ್ತು ತೋಟಗಳಲ್ಲಿ ಕೆಲಸಮಾಡುತ್ತಾರೆ. ಅವರು ತಮ್ಮ ಕೆಲಸಗಳಿಗೆ ನೇಗಿಲು, ಹಲುಬೆ, ಕುಂಟೆ, ಕೂರಿಗೆ, ಗುದ್ದಲಿ, ಸಲಿಕೆ, ಕುಡುಗೋಲು ಮೊದಲಾದುವನ್ನು ಉಪಯೋಗಿಸುತ್ತಾರೆ. ಇವಕ್ಕೆ ವ್ಯವಸಾಯದ ಸಲಕರಣೆಗಳೆಂದು ಹೆಸರು.

ಬೀಜಗಳನ್ನು ಗಟ್ಟಿಯಾದ ನೆಲದಲ್ಲಿ ಬಿತ್ತಿದರೆ ಪ್ರಯೋಜನವಾಗುವುದಿಲ್ಲ. ಆದುದರಿಂದ ನೆಲವನ್ನು ಸಡಿಲಿಸುವುದಕ್ಕೆ ನೇಗಿಲನ್ನು ಉಪಯೋಗಿಸುತ್ತಾರೆ.



ನೇಗಿಲಿಂದ ಭೂಮಿಯನ್ನು ಉತ್ತಾಗ ದಪ್ಪವಾದ ಹೆಂಟೆಗಳು ಬರುತ್ತವೆ. ಹಳ್ಳತಿಟ್ಟುಗಳನ್ನು ಸಮಮಾಡುವುದಕ್ಕೂ, ಹೆಂಟೆಗಳನ್ನು ಒಡೆದು ಪುಡಿಮಾಡುವುದಕ್ಕೂ ಹಲುಬೆಯನ್ನು ಉಪಯೋಗಿಸುತ್ತಾರೆ. ಇದರಿಂದ ಭೂಮಿ ಹಸನಾಗುತ್ತದೆ. ಇಂಥ ನೆಲದಲ್ಲಿ ಬೀಜಗಳನ್ನು ಕೈಯಿಂದ ಬಿತ್ತುತ್ತಾರೆ. ಕೆಲವು ವೇಳೆ ಕೂರಿಗೆಯಿಂದ ಸಾಲು ಸಾಲಾಗಿ ಬಿತ್ತುತ್ತಾರೆ.

ಒತ್ತೊತ್ತಾಗಿ ಬೆಳೆದಿರುವ ಪೈರಿನಲ್ಲಿ ಕೆಲವನ್ನು ಕೀಳುವುದಕ್ಕೂ ಹೆಪ್ಪುಕಟ್ಟಿದ ನೆಲವನ್ನು ಸಡಿಲಮಾಡುವುದಕ್ಕೂ ಕುಂಟೆಯನ್ನು ಉಪಯೋಗಿಸುತ್ತಾರೆ. ಇದರಿಂದ ಕಿತ್ತುಬಂದ ಕಳೆಗಳನ್ನು ತೆಗೆದು ಹಾಕುತ್ತಾರೆ.

ಪೈರು ಬಲಿತು ತೆನೆಗಳು ಒಣಗಿದಮೇಲೆ ಕುಡುಗೋಲಿನಿಂದ ಕೊಯ್ದು ಕುಪ್ಪೆ ಹಾಕುತ್ತಾರೆ. ಕೆಲವು ದಿನಗಳಮೇಲೆ ಈ ಕುಪ್ಪೆಯನ್ನು ಕಣದಲ್ಲಿ ಹರಡಿ ಎತ್ತುಗಳಿಂದ ತುಳಿಸುತ್ತಾರೆ. ಕೆಲವರು ಗುಂಡುಕಲ್ಲನ್ನು ತೆನೆಗಳಮೇಲೆ ಉರುಳಿಸುತ್ತಾರೆ. ಹೀಗೆ ಮಾಡುವುದರಿಂದ ಕಾಳುಗಳು ತೆನೆಗಳಿಂದ ಬೇರೆಯಾಗುತ್ತವೆ.

ತೋಟಗಳಲ್ಲಿ ಗುಣಿಗಳನ್ನು ಆಳವಾಗಿ ಅಗೆಯಬೇಕಾದರೆ ಪಿಕಾಸಿ, ಗುದ್ದಲಿಗಳನ್ನು ಉಪಯೋಗಿಸುತ್ತಾರೆ. ಅಗೆದ ಮಣ್ಣನ್ನು ಸಲಿಕೆಯಿಂದ ಎತ್ತಿಹಾಕುತ್ತಾರೆ.

ಪ್ರಶ್ನೆ

ಈ ಪಾಠದ ತೃತೀಯಾ, ಚತುರ್ಥೀ ವಿಭಕ್ತಿಗಳನ್ನು ಹೇಳಿ. ಅದು, ಇದು—ಇವುಗಳ ತೃತೀಯಾ, ಚತುರ್ಥೀ ವಿಭಕ್ತಿಗಳು ಯಾವುವು? ನನ್ನಿಂದ, ನನಗೆ, ನಿಮ್ಮಿಂದ, ನಿಮಗೆ, ತಮ್ಮಿಂದ, ತಮಗೆ, ಕೇಳುವುದಕ್ಕೆ, ಮಾಡುವುದಕ್ಕೆ—ಇವು ಯಾವ ವಿಭಕ್ತಿಗಳು?

೨೪. ಜೇನುತುಪ್ಪ



ಜೇನುತುಪ್ಪವನ್ನು ಯಾರು ನೋಡಿದ್ದೀರಿ? ಅದನ್ನು ಸ್ವಲ್ಪ ನಾಲಗೆಯಮೇಲೆ ಹಾಕಿಕೊಂಡರೆ ಸಿಹಿಯಾಗಿ ಇರುವುದಲ್ಲವೆ? ಸಿಹಿಯಾದ ಜೇನುತುಪ್ಪ ಎಲ್ಲರಿಗೂ ಬೇಕು.

ಈ ಜೇನುತುಪ್ಪ ಹೇಗೆ ಆಗುತ್ತದೆ? ಜೇನುತುಪ್ಪ ಜೇನುನೊಣಗಳಿಂದ ಆಗುತ್ತದೆ. ಈ ಮೇಲಿನ ಚಿತ್ರವನ್ನು ನೋಡಿ. ಜೇನುನೊಣಗಳಿರುವ ಜೇನುಗೂಡು ಕಾಣುತ್ತದೆ. ಜೇನುಗೂಡಿನಲ್ಲಿ ಒಂದು ರಾಣಿಜೇನು, ಕೆಲವು ಗಂಡುಜೇನು, ಅನೇಕವಾಗಿ ಕೆಲಸಗಾರಜೇನು, ಇರುತ್ತವೆ. ರಾಣಿಜೇನು ಮೊಟ್ಟೆಗಳನ್ನಿಡುತ್ತದೆ. ಗಂಡುಜೇನು ಸೋಮಾರಿ; ಯಾವ ಕೆಲಸವನ್ನೂ ಮಾಡುವುದಿಲ್ಲ. ಕೆಲಸಗಾರಜೇನು ಜೇನುತುಪ್ಪವನ್ನೂ ಮಯಣವನ್ನೂ ಮಾಡುತ್ತವೆ.

ಹೂವುಗಳನ್ನು ಬಿಡುವ ಎಲ್ಲ ಕಾಲಗಳಲ್ಲಿಯೂ ಜೇನುನೊಣ ಕೆಲಸ ಮಾಡುತ್ತದೆ. ಹೂವುಗಳು ಹೆಚ್ಚಾಗಿ ಬಿಡುವ ವಸಂತಕಾಲದಲ್ಲಿ ಆ ನೊಣಗಳ ಚಟುವಟಿಕೆ ಹೆಚ್ಚು. ಆಗ ನೊಣಗಳು ಹೂವುಗಳನ್ನು ಹುಡುಕಿಕೊಂಡು ಹಾರಿಹೋಗುತ್ತವೆ. ಹೂವುಗಳಮೇಲೆ ಕುಳಿತು ಅವುಗಳಲ್ಲಿರುವ ರಸವನ್ನು ಹೀರಿಕೊಳ್ಳುತ್ತವೆ. ಆ ರಸದಿಂದ ತಮ್ಮ ಮೈಯೊಳಗಿರುವ ಚೀಲ ತುಂಬಿದೊಡನೆ ಗೂಡಿಗೆ ಹಾರಿಬರುತ್ತವೆ. ಚೀಲದಲ್ಲಿ ಹೂವಿನ ರಸ ಜೇನುತುಪ್ಪವಾಗುತ್ತದೆ. ಆ ಜೇನುತುಪ್ಪವನ್ನು ನೊಣಗಳು ಗೂಡಿನಲ್ಲಿ ಕೂಡಹಾಕುತ್ತವೆ. ಹೀಗೆ ಸೇರಿಸಿದ ತುಪ್ಪವನ್ನು ನೊಣಗಳು ನಿಧಾನವಾಗಿ ಕುಡಿಯುತ್ತವೆ. ಆದರೆ ಮನುಷ್ಯರು ತುಪ್ಪವನ್ನು ನೊಣಗಳಿಗೆ ಬಿಡದೆ ತಾವು ಅಪಹರಿಸುವರು.

ಹೆಜ್ಜೇನು ಕೋಲುಜೇನು ಮತ್ತು ತುಡುವೆಜೇನು ಎಂಬ ಮೂರು ಜಾತಿ ಜೇನುನೊಣಗಳು ನಮ್ಮ ದೇಶದಲ್ಲಿ ಮುಖ್ಯ. ಹೆಜ್ಜೇನು ಅಡವಿಗಳಲ್ಲಿ ಗೂಡು ಕಟ್ಟುತ್ತದೆ. ಜೇನುಕುರುಬರು ಆ ಗೂಡುಗಳಿಂದ ಜೇನನ್ನು ತಂದು ಮಾರುತ್ತಾರೆ. ಹೆಜ್ಜೇನು ಒಂದೊಂದುಸಲ ದೊಡ್ಡ ಕಟ್ಟಡಗಳಲ್ಲಿಯೂ ಗೂಡು ಕಟ್ಟುವುದುಂಟು. ಹೆಜ್ಜೇನಿನ ಗೂಡುಗಳಲ್ಲಿ ಹೆಚ್ಚು ತುಪ್ಪ ಸಿಕ್ಕುತ್ತದೆ. ಕೋಲುಜೇನಿನ ತುಪ್ಪವನ್ನು ಔಷಧಕ್ಕೆ ಹೆಚ್ಚಾಗಿ ಉಪಯೋಗಿಸುತ್ತಾರೆ. ತುಡುವೆಜೇನನ್ನು ಮಲೆನಾಡಿನಲ್ಲಿ ಮನೆಗಳಲ್ಲಿ ಸಾಕುತ್ತಾರೆ. ಕೆಲವು ಜೇನುನೊಣಗಳು ಭೂಮಿಯ ಒಳಗಡೆ ಗೂಡು ಕಟ್ಟುವುದುಂಟು.

ಪ್ರಶ್ನೆ

ಇದು ಯಾರ ಮನೆ? ಇದು ನಮ್ಮ ಮನೆ. ಇಲ್ಲಿ ಯಾರ, ನಮ್ಮ— ಇವು ಷಷ್ಠೀ ವಿಭಕ್ತಿ—ಅ ಸೇರುತ್ತದೆ. ಈ ಪಾಠದಲ್ಲಿ ನಾಲಗೆಯ, ಪಕ್ಕದ, ತಮ್ಮ, ನಮ್ಮ, ಭೂಮಿಯ—ಇವೆಲ್ಲಾ ಷಷ್ಠೀ ವಿಭಕ್ತಿ. ನಾಲಗೆ, ಭೂಮಿ ಇವಕ್ಕೆ ವಿಭಕ್ತಿಗಳನ್ನು ಸೇರಿಸಿ ಹೇಳಿ —

ಪ್ರ. ನಾಲಗೆ, ಭೂಮಿ
ದ್ವಿ. ನಾಲಗೆಯನ್ನು, ಭೂಮಿಯನ್ನು
ತೃ. ನಾಲಗೆಯಿಂದ, ಭೂಮಿಯಿಂದ
ಚ. ನಾಲಗೆಗೆ, ಭೂಮಿಗೆ
ಷ. ನಾಲಗೆಯ, ಭೂಮಿಯ

ಚಿತ್ರವನ್ನು, ತುಪ್ಪವನ್ನು, ರಸದಿಂದ, ನೊಣಗಳಿಗೆ, ಗೂಡುಗಳಿಂದ, ಔಷಧಕ್ಕೆ—ಇವು ಯಾವ ವಿಭಕ್ತಿಗಳು?

೨೫. ಕುಚೇಷ್ಟೆ

ಒಂದು ಊರಿನಲ್ಲಿ ತಿಮ್ಮನೆಂಬ ಒಬ್ಬ ಹುಡುಗನಿದ್ದನು. ಇವನು ಯಾವಾಗಲೂ ಕುಚೇಷ್ಟೆಮಾಡುತ್ತಾ, ಇತರರನ್ನು ಹಿಂಸೆಪಡಿಸುತ್ತಾ ಇದ್ದನು. ಇವನ ತಾಯಿ "ಎಲಾ ಅಪ್ಪಾ, ಹೀಗೆ ತುಂಟತನಮಾಡ ಬಾರದು" ಎಂದು ಎಷ್ಟು ಹೇಳಿದರೂ ಕೇಳುತ್ತಿರಲಿಲ್ಲ.

ಒಂದು ದಿವಸ ತಿಮ್ಮನು ಆಡುವುದಕ್ಕೆ ಹೊರಟನು. ಊರ ಬಾಗಿಲಲ್ಲಿ ಒಬ್ಬ ಕುರುಬರ ಹುಡುಗ ಕುರಿಯ ಹಿಂಡನ್ನು ಹೊಡೆದು ಕೊಂಡು ಹೋಗುತ್ತಿದ್ದನು. ತಿಮ್ಮನು ಕುರಿಯ ಮಂದೆಗೆ ಕಲ್ಲುಗಳನ್ನು ಬೀರಿದನು. ಕುರಿಗಳು ದಿಕ್ಕು ದಿಕ್ಕಿಗೆ ಚೆದರಿ ಓಡಿಹೋದುವು. ಇದನ್ನು ಕಂಡು ಕುರುಬರ ಹುಡುಗನಿಗೆ ಕೋಪ ಬಂತು. ಅವನು ತನ್ನ ಮಂದೆಯ ನಾಯನ್ನು ತಿಮ್ಮನಮೇಲೆ 'ಛೂ' ಬಿಟ್ಟನು. ಆಗ ನಾಯಿ ತಗುಲಿ ಕೊಂಡು ಬಂತು. ಇವನು ಹೆದರಿ ಓಡಿಹೋಗುವಾಗ ಮುಗ್ಗರಿಸಿ ಬಿದ್ದನು. ಇವನ ಮಂಡಿ ಮೊಳಕೈ ಎಲ್ಲಾ ತರಿದುಹೋಯಿತು.

ಈ ತುಂಟ ಅಲ್ಲಿಂದ ಮುಂದಕ್ಕೆ ಹೊರಟನು. ಮುಂದೆ ಸ್ವಲ್ಪ ದೂರದಲ್ಲಿ ಒಬ್ಬ ಕುರುಡ "ಅಪ್ಪಾ! ಪುಣ್ಯಾತ್ಮರಾ, ನನಗೆ ಸ್ವಲ್ಪ ದಾರಿ ತೋರಿಸಿ" ಎಂದು ಬೇಡುತ್ತಿದ್ದನು. ಈ ದುರುಳ "ಇದಕ್ಕೇನಪ್ಪಾ, ನಾನು ದಾರಿ ತೋರಿಸಿಕೊಡುತ್ತೇನೆ" ಎಂದು ಅವನ ಕೈಯಲ್ಲಿದ್ದ ಕೋಲನ್ನು ಹಿಡಿದುಕೊಂಡು ಒಂದು ಕೊರಕಲ ಬಳಿಗೆ ಕರೆತಂದುಬಿಟ್ಟನು. ಕುರುಡ ಮುಂದಕ್ಕೆ ಕಾಲಿಟ್ಟು ಕೊರಕಲಲ್ಲಿ ಬಿದ್ದು ಗೋಳಾಡುತ್ತಿದ್ದನು. ದೂರದಲ್ಲಿ ಬರುತ್ತಿದ್ದ ಜನರು ಇದನ್ನು ಕಂಡು ಈ ತುಂಟನನ್ನು ಹಿಡಿದು ಕಪಾಲಕ್ಕೆ ಬೆಚ್ಚಗೆ ಎರಡು ಪೆಟ್ಟು ಕೊಟ್ಟರು.

ತಿಮ್ಮನು ಅಲ್ಲಿಂದ ಮುಂದಕ್ಕೆ ಹೋದಾಗ ದಾರಿಯಲ್ಲಿ ಒಂದು ಕುಂಟುಕತ್ತೆ ಮೇಯುತ್ತಿತ್ತು. ಈ ದುಷ್ಟ ಸದ್ದುಮಾಡದೆ ಅದರ ಹಿಂದಕ್ಕೆ ಹೋಗಿ ಬಾಲ ಹಿಡಿದು ಎಳೆದನು. ಕತ್ತೆ ರೇಗಿ ಇವನನ್ನು ಬಲವಾಗಿ ಒದೆಯಿತು. ಆ ಪೆಟ್ಟು ತಗುಲಿ ಇವನಿಗೆ ಬಹಳ ನೋವಾಯಿತು. ಆಗ ಅಳುತ್ತಾ "ತಾಯಿಯ ಮಾತನ್ನು ಕೇಳದೆ ಹೋದೆನಲ್ಲಾ!" ಎಂದುಕೊಂಡು ಮನೆಗೆ ಹೋದನು.

ಪ್ರಶ್ನೆ

ಈ ಪಾಠದಲ್ಲಿ ಚತುರ್ಥೀ, ಷಷ್ಠೀ ವಿಭಕ್ತಿಗಳನ್ನು ತೋರಿಸಿ. ಅವನು ಎಲ್ಲಿದ್ದಾನೆ? ಮನೆಯಲ್ಲಿ ಇದ್ದಾನೆ, ಹೊಲದಲ್ಲಿ ಇದ್ದಾನೆ. ಈ ವಾಕ್ಯಗಳಲ್ಲಿರುವ ಮನೆಯಲ್ಲಿ, ಹೊಲದಲ್ಲಿ ಇವು ಸಪ್ತಮೀ ವಿಭಕ್ತಿ—ಅಲ್ಲಿ ಸೇರಿರುತ್ತದೆ. ಈ ಪಾಠದಲ್ಲಿ, ಊರಿನಲ್ಲಿ, ಬಾಗಿಲಲ್ಲಿ, ದೂರದಲ್ಲಿ, ಕೈಯಲ್ಲಿ, ಕೊರಕಲಲ್ಲಿ, ದಾರಿಯಲ್ಲಿ— ಇವೆಲ್ಲಾ ಸಪ್ತಮೀ ವಿಭಕ್ತಿ.

೨೬. ರೇಷ್ಮೆ ಹುಳು

ರೇಷ್ಮೆ ಹುಳು ದೊಡ್ಡ ಅವರೆ ಹುಳುವಿನ ಹಾಗೆ ಇರುತ್ತದೆ. ಇದರಲ್ಲಿ ಎರಡು ಜಾತಿಗಳುಂಟು. ಒಂದು ಜಾತಿ ಹುಳು ಹಿಪ್ಪಲಿ ನೇರಿಳೆ ಸೊಪ್ಪನ್ನು ತಿನ್ನುತ್ತದೆ. ಇನ್ನೊಂದು ಜಾತಿ ಹುಳು ಹರಳೆಲೆಯನ್ನು ತಿನ್ನುತ್ತದೆ. ನಮ್ಮ ದೇಶದಲ್ಲಿ ಮೊದಲನೆಯ ಜಾತಿ ಹುಳುವನ್ನು ಹೆಚ್ಚಾಗಿ ಸಾಕುತ್ತಾರೆ.

ತಾಯಿಹುಳು ಹಿಪ್ಪಲಿ, ನೇರಿಳೆ ಎಲೆಯ ಮೇಲೆ ಸುಮಾರು ೨೦೦–೩೦೦ ಮೊಟ್ಟೆಗಳನ್ನು ಇಡುತ್ತದೆ. ಈ ಮೊಟ್ಟೆಗಳು ಗಸಗಸೆಯ ಹಾಗೆ ಸಣ್ಣಗೆ ಇರುತ್ತವೆ. ಮೊಟ್ಟೆಯನ್ನು ಒಡೆದುಕೊಂಡು ಸಣ್ಣ ಕರಿಯ ಹುಳು ಹೊರಕ್ಕೆ ಬರುತ್ತದೆ. ಇದು ಹಿಪ್ಪಲಿ ನೇರಿಳೆ ಸೊಪ್ಪನ್ನು ತಿನ್ನುತ್ತಾ ಬೆಳೆಯುತ್ತದೆ. ಸುಮಾರು ಒಂದು ತಿಂಗಳಲ್ಲಿ ಎರಡಂಗುಲ ಉದ್ದದ ಹೊಂಬಣ್ಣದ ಹುಳು ಆಗುತ್ತದೆ.

ಚೆನ್ನಾಗಿ ಬೆಳೆದಮೇಲೆ ಹುಳು ಸೊಪ್ಪು ತಿನ್ನುವುದಿಲ್ಲ. ಆಗ ಅದು ತನ್ನ ಮೈಯಿಂದ ಎಳೆಯನ್ನು ತೆಗೆದು ಗೂಡು ಕಟ್ಟುತ್ತದೆ. ಈ ಗೂಡಿನೊಳಗೆ ಕೆಲವು ದಿವಸಗಳವರೆಗೆ ಮಲಗಿರುತ್ತದೆ. ಗೂಡು ಬೇವಿನ ಹಣ್ಣಿನ ಹಾಗೆ ಇರುತ್ತದೆ. ಆದರೆ ಅದಕ್ಕಿಂತಲೂ ದೊಡ್ಡದು.

ರೇಷ್ಮೆ ಈ ಗೂಡುಗಳಿಂದ ದೊರೆಯುತ್ತದೆ. ಗೂಡುಗಳನ್ನು ಕುದಿಯುವ ನೀರಿನಲ್ಲಿ ಹಾಕಿ ರೇಷ್ಮೆ ಎಳೆಯನ್ನು ಬಿಡಿಸಿಕೊಳ್ಳುತ್ತಾರೆ. ಈ ಎಳೆಯೆ ಪಟ್ಟೆ ನೂಲು. ಗೂಡುಗಳಲ್ಲಿರುವ ಹುಳುಗಳೆಲ್ಲ ಕುದಿಯುವ ನೀರಿನಲ್ಲಿ ಸತ್ತುಹೋಗುತ್ತವೆ.

ಗೂಡನ್ನು ಕುದಿಯುವ ನೀರಿನಲ್ಲಿ ಹಾಕದೆ ಹಾಗೆಯೆ ಬಿಡಬಹುದು. ಆಗ ಒಳಗಿರುವ ಹುಳುವಿಗೆ ರೆಕ್ಕೆಗಳು ಹುಟ್ಟುತ್ತವೆ. ಅದು ಚಿಟ್ಟೆಯು

ರೂಪವನ್ನು ಹೊಂದಿ, ಗೂಡನ್ನು ಕೊರೆದುಕೊಂಡು ಹೊರಕ್ಕೆ ಬರುತ್ತದೆ. ಚಿಟ್ಟೆ ಹೀಗೆ ಹೊರಕ್ಕೆ ಬಂದರೆ ಗೂಡಿನ ಎಳೆ ಕತ್ತರಿಸಿ ಹೋಗುತ್ತದೆ. ಇದರಿಂದ ಒಳ್ಳೆಯ ರೇಷ್ಮೆ ದೊರೆಯುವುದಿಲ್ಲ.

ಪಟ್ಟೆಗಾರರು ರೇಷ್ಮೆಯಿಂದ ವಿಧವಿಧವಾದ ಬಟ್ಟೆಗಳನ್ನು ನೇಯುತ್ತಾರೆ. ಬಟ್ಟೆಗಳಲ್ಲೆಲ್ಲ ರೇಷ್ಮೆ ಬಟ್ಟೆ ಬಹು ನಯ. ಅದರ ಬಾಳಿಕೆಯೂ ಹೆಚ್ಚು. ಆದುದರಿಂದ ರೇಷ್ಮೆ ಬಟ್ಟೆಗಳಿಗೆ ಬೆಲೆ ಹೆಚ್ಚು. ರೇಷ್ಮೆಯೊಡನೆ ಜರತಾರಿ ಸೇರಿಸಿ ಪೀತಾಂಬರ, ಸೀರೆ, ಮಗುಟ, ರುಮಾಲು ಮೊದಲಾದುವನ್ನು ಮಾಡುತ್ತಾರೆ.

ಪ್ರಶ್ನೆ

ಈ ಪಾಠದ ನಾಮಪದಗಳ ಬೇರೆ ಬೇರೆ ವಿಭಕ್ತಿಗಳನ್ನು ಹಿಂಗಡಿಸಿ. ಇದುವರೆಗೆ ಕಲಿತ ಆರು ವಿಭಕ್ತಿಗಳನ್ನು ಹೇಗೆ ಗುರುತುಹಿಡಿಯುತ್ತೀರಿ. ಕೊನೆಯಲ್ಲಿ ಏನಿರುತ್ತದೆ?

ಪ್ರ.—ಉ. (ಇದ್ದರೂ ಇರಬಹುದು—ಸೂರ್ಯ, ಸೂರ್ಯನು ಎಂಬಂತೆ. ಸಾಧಾರಣವಾಗಿ ಇರುವುದಿಲ್ಲ—ಹೊಲ, ಮನೆ, ಕುರಿ, ಆಳು ಎಂಬಂತೆ.)

ದ್ವಿ.—ಅನ್ನು. ಹೊಲವನ್ನು, ಮನೆಯನ್ನು, ಕುರಿಯನ್ನು, ಆಳನ್ನು.

ತೃ.—ಇಂದ. ಹೊಲದಿಂದ, ಮನೆಯಿಂದ, ಕುರಿಯಿಂದ, ಆಳಿಂದ.

ಚ.—ಕ್ಕೆ, ಗೆ, ಇಗೆ. ಹೊಲಕ್ಕೆ, ಮನೆಗೆ, ಕುರಿಗೆ, ಆಳಿಗೆ.

ಷ.—ಅ. ಹೊಲದ, ಮನೆಯ, ಕುರಿಯ, ಆಳಿನ.

ಸ.—ಅಲ್ಲಿ. ಹೊಲದಲ್ಲಿ, ಮನೆಯಲ್ಲಿ, ಕುರಿಯಲ್ಲಿ, ಆಳಿನಲ್ಲಿ.

ಹುಳು, ಜಾತಿ, ಮೊಟ್ಟೆ, ಬಣ್ಣ—ಇವುಗಳ ವಿಭಕ್ತಿಗಳನ್ನು ಏಕವಚನ, ಬಹುವಚನಗಳಲ್ಲಿ ಹೇಳಿ.

೧೭. ಗಂಗಾ ನದಿ

ಜನರು ಕಾಶಿಗೆ ಯಾತ್ರೆ ಹೋಗುವುದನ್ನು ನೀವು ಕೇಳಿದ್ದೀರಿ. ಕಾಶಿ ಗಂಗಾ ನದಿಯ ದಡದಲ್ಲಿದೆ. ಗಂಗಾ ನದಿಯಲ್ಲಿ ಸ್ನಾನಮಾಡಿ ಕಾಶಿಯ ವಿಶ್ವೇಶ್ವರಸ್ವಾಮಿಯನ್ನು ಪೂಜೆ ಮಾಡಿದರೆ ಬಹಳ ಪುಣ್ಯ ಬರುವುದೆಂದು ಹಿಂದುಗಳು ನಂಬುತ್ತಾರೆ.

ಚಿತ್ರದಲ್ಲಿ ನೋಡಿ. ಎಷ್ಟು ಜನರು ನದಿಯ ಸ್ನಾನಘಟ್ಟದಲ್ಲಿ ಇದ್ದಾರೆ. ಎಷ್ಟು ಜನರು ಸ್ನಾನಮಾಡಿ ಮೆಟ್ಟಲುಗಳನ್ನು ಹತ್ತುತ್ತಿ

ಇದ್ದಾರೆ. ಎಷ್ಟು ಜನರು ಮೆಟ್ಟಲುಗಳನ್ನು ಇಳಿದು ಸ್ನಾನಕ್ಕೆ ಹೋಗುತ್ತಿದ್ದಾರೆ. ನೀರಿನಲ್ಲಿ ನಿಂತು ಸ್ನಾನಮಾಡುತ್ತ ಇರುವವರು ಎಷ್ಟು



ಮಂದಿ! ಕಾಶಿಯಲ್ಲಿ ಹೀಗೆ ಅನೇಕ ಸ್ನಾನಘಟ್ಟಗಳಿವೆ. ಇವುಗಳಲ್ಲಿ ಹರಿಶ್ಚಂದ್ರ ಘಾಟಿಯೂ ಹನುಮಾನ್ ಘಾಟಿಯೂ ಪ್ರಸಿದ್ಧವಾದುವು.

ಕಾಶಿಯಾತ್ರೆಗೆ ಅನೇಕರು ಹೋಗುವುದರಿಂದ ಆ ಯಾತ್ರಿಕರು ಇಳಿದುಕೊಳ್ಳುವುದಕ್ಕೆ ಪುಣ್ಯಾತ್ಮರು ಸತ್ರಗಳನ್ನು ಅಲ್ಲಿ ಕಟ್ಟಿಸಿದ್ದಾರೆ. ಅನೇಕ ರಾಜರು ಈ ಸತ್ರಗಳಲ್ಲಿ ಅನ್ನದಾನ ಮಾಡಿಸುತ್ತಾರೆ.

ಗಂಗಾ ನದಿ ಹಿಮಾಲಯ ಪರ್ವತದಲ್ಲಿ ಹುಟ್ಟುತ್ತದೆ. ಅದು ಹರಿದ್ವಾರದವರೆಗೂ ಬಹು ರಭಸವಾಗಿ ಹರಿಯುತ್ತದೆ. ಆಮೇಲೆ ಮೈದಾನ ಸಿಕ್ಕುವುದರಿಂದ ನಿಧಾನವಾಗಿ ಹರಿಯುತ್ತದೆ. ಗಂಗಾ ನದಿ ಕಲ್ಕತ್ತೆಯ ಹತ್ತಿರ ಸಮುದ್ರವನ್ನು ಸೇರುತ್ತದೆ.

ಗಂಗಾ ನದಿ ಹಿಂದೂಸ್ಥಾನದಲ್ಲಿ ಒಂದು ದೊಡ್ಡ ನದಿ. ಅದು ಕಾವೇರಿ, ಕೃಷ್ಣಾ, ಗೋದಾವರಿ ನದಿಗಳಿಗಿಂತ ಬಲು ದೊಡ್ಡದು. ಗಂಗೆ ಬೇಸಗೆಯಲ್ಲಿಯೂ ತುಂಬಿ ಹರಿಯುತ್ತದೆ. ಹಿಮಾಲಯ ಪರ್ವತದ ಮಂಜುಗಡ್ಡೆಗಳು ಬಿಸಿಲಿಗೆ ಕರಗಿ ಹರಿಯುವುದೇ ಇದಕ್ಕೆ ಕಾರಣ.


ಗಂಗಾ ನದಿ ಬಹಳ ಅಗಲವಾಗಿಯೂ ಆಳವಾಗಿಯೂ ಇದೆ. ಇದರಿಂದ ಹೆಚ್ಚಾಗಿ ಕಾಲುವೆಗಳನ್ನು ತೆಗೆದಿದ್ದಾರೆ. ಈ ನೀರಿನಿಂದ ಸುತ್ತಲ ಮೈದಾನ

ದಲ್ಲಿ ಬೇಕಾದ ಬೆಳಸನ್ನು ಮಾಡುತ್ತಾರೆ. ಆದುದರಿಂದ ಗಂಗಾ ನದಿಯ ಬಯಲಲ್ಲಿ ಜನರು ಹೆಚ್ಚಾಗಿ ವಾಸಮಾಡುತ್ತಾರೆ. ಗಂಗಾ ನದಿ ದೋಣಿಗಳ ಮತ್ತು ಹಡಗುಗಳ ಸಂಚಾರಕ್ಕೂ ಅನುಕೂಲವಾಗಿದೆ. ಹೀಗೆ ವ್ಯವಸಾಯಕ್ಕೂ ವ್ಯಾಪಾರಕ್ಕೂ ಗಂಗಾ ನದಿ ಬಹಳ ಉಪಯೋಗ ವಾಗಿದೆ.

ಪ್ರಶ್ನೆ

ಈ ಪಾಠದಲ್ಲಿ ಗುಣವಾಚಕಗಳನ್ನು ತೋರಿಸಿ. ಬಹಳ ಪುಣ್ಯ, ಬಲು ದೊಡ್ಡದು, ದೊಡ್ಡ ನದಿ—ಇಲ್ಲಿ ಗುಣವಾಚಕಗಳು ಯಾವುವು? ಕಾಶಿಗೆ, ನದಿಯು, ಸ್ವಾಮಿಯನ್ನು, ಹಿಂದುಗಳು, ಘಟ್ಟದಲ್ಲಿ, ಸ್ನಾನಕ್ಕೆ, ಕಾಶಿಯಲ್ಲಿ, ಹೋಗು ವುದರಿಂದ, ಇಳಿದುಕೊಳ್ಳುವುದಕ್ಕೆ, ಸತ್ರಗಳನ್ನು, ಸತ್ರಗಳಲ್ಲಿ, ಕಲ್ಕತ್ತೆಯ, ಬೇಸಗೆಯಲ್ಲಿ, ಬಿಸಿಲಿಗೆ, ಇದರಿಂದ, ಇವುಗಳಲ್ಲಿ—ಇವು ಯಾವ ವಿಭಕ್ತಿ? ಸೇರುತ್ತದೆ, ಇದ್ದಾರೆ, ಕಾಲುವೆಗಳು, ಹಡಗುಗಳು, ಬಿಸಿಲು—ಇವು ಯಾವ ವಚನ?

೨೮. ಹಳೆಯಬೀಡು



ಹಳೆಯಬೀಡು ಹಾಸನ ಡಿಸ್ಟ್ರಿಕ್ಟಿನಲ್ಲಿದೆ. ಅದು ಈಗ ಒಂದು ಹಳ್ಳಿ. ಆರು ನೂರು ವರ್ಷಗಳ ಹಿಂದೆ ಅದು ದೊಡ್ಡ ಪಟ್ಟಣವಾಗಿತ್ತು. ಆಗ ಅದಕ್ಕೆ ದೋರಸಮುದ್ರ ಎಂಬ ಹೆಸರಿತ್ತು; ಅದನ್ನು ದ್ವಾರಾವತಿ ಎಂದೂ ಕರೆಯುತ್ತಿದ್ದರು. ಅದು ಹೊಯ್ಸಳ ರಾಜ್ಯಕ್ಕೆ ರಾಜಧಾನಿಯಾಗಿತ್ತು.

ಹೊಯ್ಸಳರು ಅಚ್ಚಕನ್ನಡಿಗರು. ಅವರು ಮೊಟ್ಟಮೊದಲು ಕಡೂರು ಡಿಸ್ಟ್ರಿಕ್ಟಿನಲ್ಲಿ ಚಿಕ್ಕ ರಾಜ್ಯವನ್ನು ಕಟ್ಟಿದರು. ಆಮೇಲೆ ವಿಷ್ಣುವರ್ಧನ, ವೀರಬಲ್ಲಾಳ ಮುಂತಾದ ಶೂರರಾದ ರಾಜರು ತಲೆಯೆತ್ತಿ ರಾಜ್ಯವನ್ನು ಬಹುದೂರ ವಿಸ್ತರಿಸಿದರು. ಹೊಯ್ಸಳರ ರಾಜ್ಯ ಆಗ ಉತ್ತರದಲ್ಲಿ ಕೃಷ್ಣಾ ನದಿಯಿಂದ ಹಿಡಿದು ದಕ್ಷಿಣದಲ್ಲಿ ತಿರುಚನಾಪಳ್ಳಿಯವರೆಗೂ ಹಬ್ಬಿತ್ತು. ಇಷ್ಟು ದೊಡ್ಡ ರಾಜ್ಯಕ್ಕೆ ದೋರಸಮುದ್ರ ರಾಜಧಾನಿಯಾಗಿತ್ತು.

ಹೊಯ್ಸಳ ರಾಜರಲ್ಲಿ ಕಡೆಯವರು ಆಳುತ್ತಿದ್ದಾಗ ಮುಸಲ್ಮಾನರು ದಂಡೆತ್ತಿ ಬಂದರು. ಅವರು ದೋರಸಮುದ್ರವನ್ನು ಕೊಳ್ಳೆಹೊಡೆದು ಹಾಳುಮಾಡಿದರು. ಆಗ ಹೊಯ್ಸಳ ದೊರೆಗಳು ಬೇಲೂರನ್ನು ರಾಜಧಾನಿ ಯನ್ನಾಗಿ ಮಾಡಿಕೊಂಡರು. ಅಂದಿನಿಂದ ದೋರಸಮುದ್ರಕ್ಕೆ ಹಳೆಯ ಬೀಡೆಂದು ಹೆಸರಾಯಿತು. ಹೊಯ್ಸಳರು ಅನೇಕ ದೇವಸ್ಥಾನಗಳನ್ನು ಕಟ್ಟಿಸಿದರು. ಅವುಗಳಲ್ಲಿ ಕೆಲವು ಈಗಲೂ ಉಳಿದಿವೆ. ಬೇಲೂರಿನ ಚೆನ್ನಕೇಶವ ದೇವಾಲಯ ಇಂತಹುದು ಒಂದು. ಅಲ್ಲಿ ಪೂಜೆ ಈಗಲೂ ನಡೆಯುತ್ತಿದೆ. ಹಳೆಯಬೀಡಿನಲ್ಲಿ ಹೊಯ್ಸಳೇಶ್ವರ ಮತ್ತು ಕೇದಾರೇಶ್ವರ ದೇವಸ್ಥಾನಗಳು ಈಗಲೂ ಇವೆ. ಆದರೆ ಇವುಗಳಲ್ಲಿ ಪೂಜೆಯಿಲ್ಲ. ಈ ದೇವಸ್ಥಾನಗಳಲ್ಲಿ ಕಲ್ಲಿನಲ್ಲಿ ಅನೇಕ ವಿಗ್ರಹಗಳನ್ನು ಬಹಳ ಚೆನ್ನಾಗಿ ಕೆತ್ತಿದ್ದಾರೆ. ಇಂಥ ಅಂದವಾದ ವಿಗ್ರಹಗಳೂ ಜಾಣತನದ ಕೈಕೆಲಸಗಳೂ ಇನ್ನು ಯಾವ ದೇಶ ದಲ್ಲಿಯೂ ಇಲ್ಲ. ಈ ದೇವಸ್ಥಾನಗಳ ಸೊಗಸನ್ನು ನೋಡುವುದಕ್ಕೆ ಅನೇಕರು ಹಳೆಯಬೀಡಿಗೆ ಹೋಗುತ್ತಾರೆ. ಹಳೆಯಬೀಡಿನಲ್ಲಿ ಈ ದೇವಸ್ಥಾನ ಗಳಲ್ಲದೆ ಎರಡು ಜೈನ ಬಸದಿಗಳೂ ಇವೆ. ಇವುಗಳ ಕಂಬಗಳು ಬಹಳ ನುಣುಪಾಗಿಯೂ ಹೊಳಪಾಗಿಯೂ ಇವೆ. ಅವುಗಳೆದುರಿಗೆ ನಿಂತರೆ ಕನ್ನಡಿಯಲ್ಲಿ ಕಾಣುವಂತೆ ನಮ್ಮ ಮುಖಗಳು ಕಾಣುತ್ತವೆ.

ಪ್ರಶ್ನೆ

ಮೈಸೂರು ಚರಿತ್ರೆಯಲ್ಲಿ ಹಳೆಯಬೀಡು ಏತಕ್ಕೆ ಪ್ರಸಿದ್ಧಿ? ಜೈನರ ದೇವ ಸ್ಥಾನಕ್ಕೆ ಏನೆಂದು ಹೆಸರು? ರಾಜಧಾನಿಯನ್ನಾಗಿ ಮಾಡಿಕೊಂಡರು, ರಾಜ್ಯವನ್ನು ಕಟ್ಟಿದರು, ದೋರಸಮುದ್ರವನ್ನು ಹಾಳುಮಾಡಿದರು—ಇಲ್ಲಿ ಕ್ರಿಯೆ ಯಾವುದು, ಕರ್ಮ ಯಾವುದು? ಇತ್ತು, ಆಯಿತು, ಹಬ್ಬಿತ್ತು, ಬಂದರು, ಕಟ್ಟಿಸಿದರು— ಈ ಕ್ರಿಯಾಪದಗಳು ಯಾವ ಕಾಲ? ಇವಕ್ಕೆ ವರ್ತಮಾನಕಾಲದ ರೂಪಗಳು ಯಾವುವು? ನಡೆಯುತ್ತಿದೆ, ಹೋಗುತ್ತಾರೆ, ಇವೆ, ಕಾಣುತ್ತವೆ--ಇವು ಯಾವ ಕಾಲ? ಇವಕ್ಕೆ ಭೂತಕಾಲವನ್ನು ಹೇಳಿ.

೨೯. ನಿಜ ಹೇಳುವುದು

ಒಬ್ಬ ಬಡವನು ಸೌದೆಯನ್ನು ಮಾರಿ ಜೀವಿಸುತ್ತಿದ್ದನು. ಅವನು ನಿತ್ಯವೂ ಕಾಡಿಗೆ ಹೋಗಿ ಮರವನ್ನು ಕಡಿದು ಸೌದೆ ಹೊರೆ ತರುತ್ತಿದ್ದನು. ಒಂದು ದಿನ ಕೊಳದ ಪಕ್ಕದ ಮರವನ್ನು ಕಡಿಯುತ್ತಿದ್ದಾಗ ಅವನ ಕೊಡಲಿ ಜಾರಿ ನೀರಿನಲ್ಲಿ ಬಿದ್ದುಹೋಯಿತು. ಆ ಕೊಳ ಆಳವಾಗಿತ್ತು. ಅವನಿಗೆ ಈಜು ಬರುತ್ತಿರಲಿಲ್ಲ.

ಆಗ ಸೌದೆ ಕಡಿಯುವವನು "ಅಯ್ಯೋ! ನನ್ನ ಕೊಡಲಿ ನೀರಿನಲ್ಲಿ ಮುಳುಗಿಹೋಯಿತು. ನಾನು ಬಡವನು, ನನ್ನ ಜೀವನಕ್ಕೆ ಏನುಮಾಡಲಿ?" ಎಂದು ಅಳುತ್ತಾ ನಿಂತುಕೊಂಡನು. ಆಗ ದೇವರು ಅವನನ್ನು ಪರೀಕ್ಷಿಸಬೇಕೆಂದು ಗೊಲ್ಲನ ವೇಷಹಾಕಿಕೊಂಡು ಅಲ್ಲಿಗೆ ಬಂದನು. "ಏಕಪ್ಪ ಅಳುತ್ತೀಯೆ?" ಎಂದು ದೇವರು ಕೇಳಿದನು. ಆಗ ಬಡವನು ನಡೆದ ಸಮಾಚಾರ ಹೇಳಿದನು.

ಗೊಲ್ಲನು "ನೀನು ಚಿಂತಿಸಬೇಡ. ನಾನು ನೀರಿನಲ್ಲಿ ಮುಳುಗಿ ನಿನ್ನ ಕೊಡಲಿ ತಂದುಕೊಡುತ್ತೇನೆ" ಎಂದನು. ಕೂಡಲೆ ನೀರಿನಲ್ಲಿ ಮುಳುಗಿ ಚಿನ್ನದ ಕೊಡಲಿಯನ್ನು ಎತ್ತಿಹಿಡಿದು "ಇದೇ ಅಲ್ಲವೆ ನಿನ್ನ ಕೊಡಲಿ?" ಎಂದು ಕೇಳಿದನು. ಅದಕ್ಕೆ ಸತ್ಯವಂತನಾದ ಬಡವನು "ಇದು ನನ್ನದಲ್ಲ" ಎಂದು ಹೇಳಿದನು. ಗೊಲ್ಲನು ಪುನಃ ನೀರಿನಲ್ಲಿ ಮುಳುಗಿ ಬೆಳ್ಳಿಯ ಕೊಡಲಿಯನ್ನು ತೋರಿಸಿದನು. "ಈ ಕೊಡಲಿ ನಿನ್ನದಲ್ಲವೆ?" ಎಂದು ಪುನಃ ಕೇಳಿದನು. ಆಗ ಪ್ರಾಮಾಣಿಕನಾದ ಬಡವನು "ಇದು ಕೂಡ ನನ್ನದಲ್ಲ. ಬಡವನಿಗೆ ಚಿನ್ನ ಬೆಳ್ಳಿ ಎಲ್ಲಿಂದ ಬರಬೇಕು. ನನ್ನದು ಕಬ್ಬಿಣದ ಕೊಡಲಿ" ಎಂದನು.


ದೇವರು ಬಹಳ ಸಂತೋಷಪಟ್ಟು ಮೂರನೆಯ ಸಲ ನೀರಿನಲ್ಲಿ ಮುಳುಗಿ ಬಡವನ ಕೊಡಲಿಯನ್ನೇ ತಂದುಕೊಟ್ಟನು. ಆಗ ಸೌದೆ ಕಡಿಯುವವನು "ಅಹುದು. ಇದೇ ನನ್ನ ಕೊಡಲಿ" ಎಂದನು. ದೇವರು "ನೀನು ಬಡವನಾದರೂ ಸತ್ಯವಂತನು. ನನಗೆ ಬಹಳ ಸಂತೋಷವಾಗಿದೆ. ಈ ಚಿನ್ನದ ಕೊಡಲಿಯನ್ನೂ ಬೆಳ್ಳಿಯ ಕೊಡಲಿಯನ್ನೂ ತೆಗೆದುಕೊ. ನೀನು ಸುಖವಾಗಿ ಬಹುಕಾಲ ಬದುಕು" ಎಂದು ಹೇಳಿ ಮಾಯವಾದನು.

ನಿಜ ಹೇಳಿದರೆ ದೇವರು ಮೆಚ್ಚುವನು.

ಪ್ರಶ್ನೆ

ಈ ಪಾಠದ ಕ್ರಿಯಾಪದಗಳ ವಚನ, ಕಾಲಗಳನ್ನು ವಿಂಗಡಿಸಿ, ಕರ್ಮಪದ ಬೇಕಾದ ಕ್ರಿಯೆಗಳು ಯಾವುವು? ಬೇಡದ ಕ್ರಿಯೆಗಳು ಯಾವುವು? ಕೊಡಲಿ ತಂದುಕೊಡುತ್ತೇನೆ, ಎಂಬಂತೆ ದ್ವಿ. ವಿಭಕ್ತಿ ಸೇರದೆ ಕರ್ಮಪದವನ್ನು ಹೇಳುವುದೂ ಕನ್ನಡದ ರೂಢಿ. ಹೀಗೇ ಮನೆ ಕಟ್ಟಿದ, ಹೂವು ಕೊಯ್ದು, ಹಾಲು ಕುಡಿದ.

೩೦. ಗಿಡಗಳ ಬೆಳವಣಿಗೆ



ಒಣಗಿ ಬಿದ್ದಿರುವ ಆ ಬೀಜವನ್ನು ನೋಡಿ. ಅದು ತಿಂಗಳು ಹುರುಳಿಯ ಬೀಜ. ಆ ಬೀಜದಲ್ಲಿ ಒಂದು ಸಣ್ಣ ಗಿಡ ಅಡಗಿಕೊಂಡಿರುವುದು ನಿಮಗೆ ಗೊತ್ತೆ? ಆ ಬೀಜವನ್ನು ನೆಲದೊಳಗೆ ಹಾಕಿ, ನೀರು ಹೊಯ್ದು ಕಾಪಾಡಿದರೆ, ಒಳಗಿರುವ ಸಸಿ ಮೊಳಕೆ ಇಡುತ್ತದೆ.

ಬೀಜ ಬಿತ್ತುವ ಮೊದಲು ನೆಲವನ್ನು ಅಗೆದು ಹದಮಾಡಬೇಕು. ಆಮೇಲೆ ಬೀಜವನ್ನು ಮಣ್ಣಿನೊಳಗಿಟ್ಟು ನೀರನ್ನು ಸ್ವಲ್ಪ ಹೊಯ್ಯಬೇಕು. ಎರಡು ದಿನ ಆಗಾಗ ನೀರು ಹೊಯ್ದು ನೋಡಿಕೊಳ್ಳೋಣ. ಈಗ ನೋಡಿ. ಒಂದು ಮೊಳಕೆ ಬಗ್ಗಿದ ಬಿಲ್ಲಿನಂತೆ ಎದ್ದಿರುತ್ತದೆ. ಮೂರನೆಯ ದಿನ ಅದು ನೆಟ್ಟಗಾಗುತ್ತದೆ. ಬೀಜ ಸೀಳಿ ಎಲೆಗಳು ಹೊರಡುತ್ತವೆ. ಆಹಾ! ಈ ಸಸಿ ಎಷ್ಟು ಮುದ್ದಾಗಿದೆ! ಸಣ್ಣ ಕರು ಹುಟ್ಟಿದಾಗ ತಾಯಿಯ ಹಾಲು

ಕುಡಿಯುತ್ತದಷ್ಟೆ. ಹಾಗೆಯೆ ಈ ಸಣ್ಣ ಸಸಿ ಬೀಜದಿಂದ ಆಹಾರ ಪಡೆಯುತ್ತದೆ. ಬೀಜದಲ್ಲಿರುವ ಆಹಾರ ಮುಗಿಯುವ ಹೊತ್ತಿಗೆ ಸಸಿ ದೊಡ್ಡದಾಗಿರುತ್ತದೆ. ಆಗ ಬೀಜದ ದಳಗಳು ಒಣಗಿ ಉದುರಿಹೋಗುತ್ತವೆ.

ಸಸಿಗೆ ಬೇರು ಬಲಿಯಿತು, ಎಲೆ ಬೆಳೆಯಿತು. ಇನ್ನು ತನ್ನ ಊಟ ತಾನು ಸಂಪಾದಿಸಿಕೊಳ್ಳುತ್ತದೆ. ಕರು ದೊಡ್ಡದಾದರೆ ಹೀಗೆತಾನೆ ಮಾಡುವುದು? ಸಸಿಯ ಬೇರು ನೆಲದೊಳಗಿದೆ. ತಾಳು, ರೆಂಬೆ ಮತ್ತು ಎಲೆ ನೆಲದ ಮೇಲುಗಡೆ ಇದೆ.

ಬೇರಿನಿಂದ ಸಸಿಗೆ ಪ್ರಯೋಜನವುಂಟು. ಸಸಿ ಬೇರಿನ ಸಹಾಯದಿಂದ ನೆಲದಮೇಲೆ ನಿಂತಿರುತ್ತದೆ. ಭೂಮಿಯಲ್ಲಿ ಸಸಿಗೆ ಬೇಕಾದ ಆಹಾರವಿದೆ. ನಾವು ನೀರು ಹೊಯ್ದಾಗ ಆ ಆಹಾರ ಕರಗುತ್ತದೆ. ಹೀಗೆ ಕರಗಿದ ಆಹಾರ ಬೇರಿನ ಮೂಲಕ ಸಸಿಗೆ ಒದಗುತ್ತದೆ.

ಸಸಿಗೆ ಬೇಕಾದ ಊಟ ಗಾಳಿಯಲ್ಲೂ ಇದೆ. ಸಸಿಯ ಹಸುರೆಲೆಗಳು ಸೂರ್ಯನ ಸಹಾಯದಿಂದ ಆ ಆಹಾರವನ್ನು ಸೆಳೆದುಕೊಳ್ಳುತ್ತವೆ.

ಹೀಗೆ ಭೂಮಿಯಿಂದಲೂ ಗಾಳಿಯಿಂದಲೂ ಆಹಾರ ಪಡೆದು ಸಸಿ ದೊಡ್ಡದಾಗುತ್ತದೆ. ಆಗ ತಾಳು ಬಲಿಯುತ್ತದೆ. ರೆಂಬೆಗಳು ಒಡೆಯುತ್ತವೆ. ಎಲೆಗಳು ಮೂಡುತ್ತವೆ. ಹೂವು ಕಾಯಿಗಳು ಕಾಣಿಸಿಕೊಳ್ಳುತ್ತವೆ. ಗಿಡ ನೋಡುವುದಕ್ಕೆ ಸೊಂಪಾಗಿರುತ್ತದೆ. "ಬೀಜದಲ್ಲಿದ್ದಾಗ ನಾನು ನಿಮಗೆ ಕಾಣಿಸಲಿಲ್ಲ. ಈಗ ನೋಡಿ, ನಾನು ಹೇಗೆ ಕಳಕಳಿಸುತ್ತಿದೇನೆ" ಎಂದು ಆ ಗಿಡ ಹೇಳುತ್ತಿದೆಯಲ್ಲವೆ?

ಪ್ರಶ್ನೆ

ಈ ಬರೆಯುವ ಚಿಹ್ನೆಗಳು ಈ ಪಾಠದಲ್ಲಿ ಎಲ್ಲೆಲ್ಲಿ ಬಂದಿವೆ? " ", ?, ! ಇವುಗಳ ಅರ್ಥವೇನು? ಸಸಿ ಮೊಳಕೆಯೊಡೆಯುತ್ತದೆ, ಎಲೆಗಳು ಹೊರಡುತ್ತವೆ— ಈ ವಾಕ್ಯಗಳಲ್ಲಿ ನಾಮಪದ, ಕ್ರಿಯಾಪದ ಯಾವ ವಚನ? ಹೀಗೆ ಒಂದು ವಾಕ್ಯದಲ್ಲಿ ನಾಮಪದ ಏಕವಚನವಾದರೆ, ಕ್ರಿಯಾಪದವೂ ಏಕವಚನವಾಗುತ್ತದೆ. ನಾಮಪದ ಬಹುವಚನವಾದರೆ, ಕ್ರಿಯಾಪದವೂ ಬಹುವಚನವಾಗುತ್ತದೆ. ಇದನ್ನು ಬೇರೆ ವಾಕ್ಯಗಳಲ್ಲಿ ಕಂಡುಹಿಡಿಯಿರಿ. ವಚನಗಳು ಹೊಂದಿರುವಂತೆ ನೀವೇ ನಾಲ್ಕು ವಾಕ್ಯಗಳನ್ನು ಹೇಳಿ.

೩೧. ಕಂಠೀರವ ನರಸರಾಜ ಒಡೆಯರು



೧

ಕಂಠೀರವ ನರಸರಾಜ ಒಡೆಯರು ಬೆಟ್ಟದ ಚಾಮರಾಜ ಒಡೆಯರ ಮಕ್ಕಳು. ಚಾಮರಾಜರು ರಾಜ್ಯಭಾರವನ್ನು ಬಿಟ್ಟು, ತೆರಕಣಾಂಬಿಯಲ್ಲಿ ಸಾಮಾನ್ಯರಂತೆ ವಾಸಮಾಡುತ್ತ ಇದ್ದರು. ನರಸರಾಜರು ಓದು ಬರಹಗಳನ್ನು ಕಲಿತು, ಗರಡಿಯ ಸಾಮು, ಬೇಟೆ ಮತ್ತು ಕತ್ತಿಯ ವರಿಸೆಗಳಲ್ಲಿ ಪ್ರಸಿದ್ಧರಾಗಿದ್ದರು. ಅವರ ಹತ್ತಿರ 'ವಿಜಯನಾರಸಿಂಹ' ಎಂಬ ಹೆಸರಾದ ಕತ್ತಿಯಿತ್ತು. ಅದನ್ನು ಅವರು ಯಾವಾಗಲೂ ಬಿಟ್ಟು ಇರುತ್ತಿರಲಿಲ್ಲ.

ತಿರುಚನಾಪಳ್ಳಿಯ ದೊರೆಯ ಬಳಿ ಒಬ್ಬ ಜಟ್ಟಿ ಇದ್ದನು. ಅವನು ಬಹಳ ಬಲಶಾಲಿ. ಅವನು ಬಹಳ ಹೆಮ್ಮೆಗಾರ. ಅದನ್ನು ನರಸರಾಜರು ಕೇಳಿ ಯಾರಿಗೂ ತಿಳಿಯದಂತೆ ಅಲ್ಲಿಗೆ ಹೋದರು. ಅವನನ್ನು ಕಾಳಗದಲ್ಲಿ ಕೊಂದು ಬಹು ಶೂರರೆನಿಸಿಕೊಂಡರು.

ಹೀಗಿರುವಾಗ ಮೈಸೂರು ದೊರೆಗಳಾಗಿದ್ದ ಇಮ್ಮಡಿ ರಾಜ ಒಡೆಯರು ಸತ್ತುಹೋದರು. ಅವರಿಗೆ ಮಕ್ಕಳು ಇರಲಿಲ್ಲ. ಆದುದರಿಂದ ನರಸರಾಜ ಒಡೆಯರಿಗೆ ಪಟ್ಟವಾಯಿತು. ದೊರೆಗಳಾದಮೇಲೆ ನರಸರಾಜ ಒಡೆಯರು ಇನ್ನೂ ಪ್ರಸಿದ್ಧರಾದರು. ದುಷ್ಟನಾಗಿದ್ದ ದಳವಾಯಿ ವಿಕ್ರಮರಾಯನನ್ನು ಅವರು ಉಪಾಯದಿಂದ ಕೊಲ್ಲಿಸಿದರು. ಜಂಬದಿಂದ ಮೆರೆಯುತ್ತಿದ್ದ ಅನೇಕ ಜನ ಪಾಳೆಯಗಾರರಿಗೆ ಬುದ್ಧಿ ಕಲಿಸಿದರು. ತಮ್ಮ ರಾಜ್ಯವನ್ನು ಬಹುವಾಗಿ ಹೆಚ್ಚಿಸಿದರು.

೨

ತಿರುಚನಾಪಳ್ಳಿಯ ದೊರೆಗೆ ತನ್ನ ಜಟ್ಟಿಯನ್ನು ನರಸರಾಜರೇ ಕೊಂದರೆಂದು ಆಮೇಲೆ ತಿಳಿಯಿತು. ಅವರು ದೊರೆಗಳಾಗಿ ರಾಜ್ಯವನ್ನು ಹೆಚ್ಚಿಸುತ್ತ ಇದ್ದಾರೆಂದು ತಿಳಿಯಿತು. ಅವನು ಹೆದರಿ ನರಸರಾಜರನ್ನು ಉಪಾಯದಿಂದ ಕೊಲ್ಲಬೇಕೆಂದು ಆಲೋಚಿಸಿದನು. ಅವನ ಮಾತಿನಂತೆ ಇಪ್ಪತ್ತೈದು ಜನ ಕಳ್ಳರು ವೇಷಹಾಕಿಕೊಂಡು ಶ್ರೀರಂಗಪಟ್ಟಣಕ್ಕೆ ಬಂದರು. ಅರಮನೆಯೊಳಕ್ಕೆ ಗುಟ್ಟಾಗಿ ಸೇರಿಕೊಂಡರು. ನರಸರಾಜ ಒಡೆಯರು ಮಲಗುವ ಮನೆಗೆ ಸಮೀಪದಲ್ಲಿ, ಕಂಬಗಳ ಮರೆಯಲ್ಲಿ ಕಳ್ಳರು ಅಡಗಿಕೊಂಡರು. ದೊರೆಗಳಿಗೆ ಕಳ್ಳರ ಸುಳಿವು ಕಂಬಗಳ ಹೊರಗೆ ಬಿದ್ದಿದ್ದ ನೆರಳುಗಳಿಂದ ತಿಳಿದುಹೋಯಿತು.

ದೊರೆಗಳು ಕೂಡಲೆ ಕತ್ತಿಯನ್ನು ತೆಗೆದುಕೊಂಡುಬಂದರು. ಕಳ್ಳರೆಲ್ಲ ಒಟ್ಟಾಗಿ ಅವರಮೇಲೆ ಬಿದ್ದರು. ದೊರೆಗಳು ಹಿಮ್ಮೆಟ್ಟದೆ ಅವರಲ್ಲಿ ಕೆಲವರನ್ನು ಕೊಂದು ಉಳಿದವರನ್ನು ಕಾವಲುಗಾರರ ವಶಕ್ಕೆ ಕೊಟ್ಟರು. ಬೆಳಗಾದಮೇಲೆ ಆ ಕಳ್ಳರನ್ನು ವಿಚಾರಿಸಿದರು. ಅವರು ಇದ್ದ ಸಂಗತಿ ಹೇಳಿದರು. ನರಸರಾಜ ಒಡೆಯರು ಅವರನ್ನು ಮನ್ನಿಸಿ "ನಿಮ್ಮ ದೊರೆಗೆ ಇಲ್ಲಿ ನಡೆದುದನ್ನು ಹೇಳಿ" ಎಂದು ಕಳುಹಿಸಿಬಿಟ್ಟರು.

ಮೈಸೂರು ದೊರೆಗಳ ಶಕ್ತಿಯನ್ನು ತಿಳಿಯದೆ ವಿಜಾಪುರದಿಂದ ರಣದುಲ್ಲಾಖಾನ್ ಎಂಬವನು ಯುದ್ಧಕ್ಕೆ ಬಂದನು. ದೊರೆಗಳು ಅವನನ್ನು ಸೋಲಿಸಿದರು. ಅವನಲ್ಲಿದ್ದ ಆನೆ, ಕುದುರೆ, ಒಂಟೆ, ಹಣಕಾಸು, ಬಟ್ಟೆಗಳನ್ನೆಲ್ಲ ಕಿತ್ತುಕೊಂಡರು. ಆ ಖಾನನು ದೊರೆಗಳೊಡನೆ ಕೌಲುಮಾಡಿಕೊಂಡು ಹಿಂದಿರುಗಿದನು. ಅನಂತರ ನರಸರಾಜ ಒಡೆಯರು ಜಯಭೇರಿ ಹೊಡಸಿಕೊಂಡು ಶ್ರೀರಂಗಪಟ್ಟಣಕ್ಕೆ ಬಂದರು. ಜನರೆಲ್ಲರೂ ದೊರೆಗಳನ್ನು "ರಣಧೀರ ಕಂಠೀರವ ನರಸರಾಜ ಒಡೆಯರ್, ಯದುಕುಲ ಭೀಮ" ಎಂದು ಹೊಗಳಿ, ರಾಜಭಕ್ತಿಯನ್ನು ತೋರಿಸಿದರು.

ನರಸರಾಜ ಒಡೆಯರು ರಾಜ್ಯವನ್ನು ಬಹಳ ಚೆನ್ನಾಗಿ ಆಳಿ ಬಲಪಡಿಸಿದರು. ಅನೇಕವಾಗಿ ಕೆರೆ ಕಟ್ಟೆ ಕಾಲುವೆಗಳನ್ನು ಮಾಡಿಸಿದರು. ಟಂಕಸಾಲೆಯನ್ನು ಸ್ಥಾಪಿಸಿ ಕಂಠೀರಾಯ ವರಹಗಳನ್ನು ಹೊರಡಿಸಿದರು. ಜನರು ಈ ದೊರೆಗಳ ಪರಾಕ್ರಮವನ್ನೂ ಉಪಕಾರವನ್ನೂ ಇಂದಿಗೂ ಮರೆತಿಲ್ಲ, ಎಂದಿಗೂ ಮರೆಯುವುದಿಲ್ಲ.

ಪ್ರಶ್ನೆ

ಏಕವಚನ ನಾಮಪದಕ್ಕೆ ಏಕವಚನ ಕ್ರಿಯಾಪದವೂ, ಬಹುವಚನ ನಾಮ ಪದಕ್ಕೆ ಬಹುವಚನ ಕ್ರಿಯಾಪದವೂ ಇರುವ ವಾಕ್ಯಗಳನ್ನು ತೋರಿಸಿ. ಈ ವಾಕ್ಯಗಳು ಸರಿಯೆ? ರಾಜರು ಇದ್ದನು. ಒಬ್ಬ ಜಟ್ಟಿ ಇದ್ದರು. ಅವರು ಕೊಲ್ಲಿಸಿದನು. ಅವನು ಆಲೋಚಿಸಿದರು. ಇವನ್ನು ತಿದ್ದಿ ಸರಿಮಾಡಿ.

೩೨. ಮುದುಕಿಯ ಜಂಬ

ಸೋಮನಹಳ್ಳಿಯಲ್ಲಿ ಒಬ್ಬ ಮುದುಕಿ ಇದ್ದಳು. ಅವಳ ಹತ್ತಿರ ಒಂದು ಅಗ್ಗಿಷ್ಟಿಕೆ ಒಂದು ಕೋಳಿ ಇದ್ದುವು. ಕೋಳಿ ಪ್ರತಿದಿನವೂ ಬೆಳಗಿನ ಜಾವದಲ್ಲಿ ಕು-ಕೂ-ಕೂ ಎಂದು ಕೂಗುವುದು. ಮುದುಕಿ ಎದ್ದು ಅಗ್ಗಿಷ್ಟಿಕೆಯ ಬೆಂಕಿ ಸರಿಮಾಡಿ ತನ್ನ ಕೆಲಸ ಮಾಡುವಳು.

ಆ ಹಳ್ಳಿಯ ಜನರು ಕೋಳಿ ಕೂಗಿದಾಗ ತಾವೂ ಏಳುವರು. ಮುದುಕಿಯ ಮನೆಗೆ ಬಂದು ಬೆಂಕಿಯನ್ನು ತೆಗೆದುಕೊಂಡು ಹೋಗುವರು. ಆ ಬೆಂಕಿಯಿಂದ ಒಲೆ ಹೊತ್ತಿಸಿ ಅಡಿಗೆ ಮಾಡಿಕೊಳ್ಳುವರು. ಹೀಗೆ ನಡೆಯುತ್ತಿದ್ದಾಗ ಮುದುಕಿಗೆ ಜಂಬ ಬಂತು. ತನ್ನ ಕೋಳಿ ಕೂಗುವುದರಿಂದಲೆ ಬೆಳಗಾಗುತ್ತದೆ, ತನ್ನ ಅಗ್ಗಿಷ್ಟಿಕೆಯ ಬೆಂಕಿಯಿಂದಲೆ ಹಳ್ಳಿಯವರು ಊಟಮಾಡಿ ಬದುಕಿದ್ದಾರೆ, ಎಂದು ಹೆಮ್ಮೆಪಟ್ಟಳು.

ಮಾರನೆಯ ದಿನ ಆ ಮುದುಕಿ ಕೋಳಿಯನ್ನೂ ಅಗ್ಗಿಷ್ಟಿಕೆಯನ್ನೂ ಎತ್ತಿಕೊಂಡಳು. ಯಾರಿಗೂ ತಿಳಿಯದಂತೆ ಹತ್ತಿರದ ಕಾಡಿಗೆ ಹೊರಟು ಹೋದಳು. ಅಲ್ಲಿ ಯಾರಿಗೂ ಕಾಣಬಾರದೆಂದು ಬಚ್ಚಿಟ್ಟುಕೊಂಡಳು.

ಬೆಳಗಾಯಿತು. ಹಳ್ಳಿಯವರು ಎದ್ದು ಮುದುಕಿಯ ಮನೆಗೆ ಹೋಗಿ ನೋಡಿದರು. ಅಲ್ಲಿ ಅವಳು ಇರಲಿಲ್ಲ. ಎಲ್ಲಿಗೋ ಹೋಗಿರುವಳೆಂದು ತಿಳಿದು ನೆರೆಯ ಹಳ್ಳಿಯಿಂದ ಬೆಂಕಿ ತಂದುಕೊಂಡರು. ತಮ್ಮ ತಮ್ಮ ಊಟಗಳನ್ನು ಮುಗಿಸಿಕೊಂಡು ಹಾಯಾಗಿದ್ದರು.

ಮುದುಕಿ ಸಾಯಂಕಾಲದವರೆಗೂ ಕಾಡಿನಲ್ಲಿ ಹಸಿದುಕೊಂಡಿದ್ದಳು. "ಹಳ್ಳಿಯಲ್ಲಿ ಹಗಲಾಗಲೇ ಇಲ್ಲ, ಹಳ್ಳಿಯವರು ಊಟಮಾಡಲೇ ಇಲ್ಲ" ಎಂದು ಅವಳು ತಿಳಿದಿದ್ದಳು. ಆಗ ಆ ದಾರಿಯಲ್ಲಿ ಸೋಮನಹಳ್ಳಿಯ ರಂಗಣ್ಣ ಹೋಗುತ್ತಿದ್ದನು. ಮುದುಕಿ ಅವನನ್ನು ಕರೆದು "ರಂಗಣ್ಣ!

ನಿಮ್ಮ ಹಳ್ಳಿಯಲ್ಲಿ ಬೆಳಗಾಯಿತೆ? ಈ ಹೊತ್ತು, ನೀವೆಲ್ಲ ಹಸಿವಿಂದ ಇದ್ದೀರಾ?'' ಎಂದು ಕೇಳಿದಳು. ರಂಗಣ್ಣ ನಕ್ಕು ''ಅಯ್ಯೋ ಹುಚ್ಚು ಮುದುಕಿ! ನಿನ್ನ ಕೋಳಿ ಇಲ್ಲದಿದ್ದರೆ ಬೆಳಗಾಗುವುದಿಲ್ಲವೆ? ನಿನ್ನ ಅಗ್ಗಿಷ್ಟಿಕೆ ಇಲ್ಲದಿದ್ದರೆ ಅಡಿಗೆಯಾಗುವುದಿಲ್ಲವೆ? ಇಲ್ಲೇಕೆ ಹಸಿವಿಂದ ಸಾಯು ತ್ತೀಯೆ? ಮನೆಗೆ ಬಾ'' ಎಂದನು. ಮುದುಕಿ ನಾಚಿಕೊಂಡು ಹಳ್ಳಿಗೆ ಹಿಂದಿರುಗಿದಳು.

ಪ್ರಶ್ನೆ

ಈ ಪಾಠದ ಲೇಖನ ಚಿಹ್ನೆಗಳನ್ನು ತೋರಿಸಿ. ಮುದುಕಿ ಇದ್ದಳು. ಅವರು ಏಳುವರು. ಅವಳು ಹೆಮ್ಮೆಪಟ್ಟಳು. ಅವನು ಬಂದನು. ರಂಗಣ್ಣನು ನಕ್ಕನು. ಹಳ್ಳಿಯವರು ನೋಡಿದರು. ಈ ವಾಕ್ಯಗಳಲ್ಲಿ ನಾಮಪದ ಸರ್ವನಾಮ ಕ್ರಿಯಾಪದಗಳಲ್ಲಿ ಹೇಗೆ ವಚನ ಲಿಂಗಗಳು ಹೊಂದಿಕೊಂಡಿವೆ ನೋಡಿ. ಲಿಂಗ ಎಂದರೆ ಗಂಡಸು, ಹೆಂಗಸು, ನಪುಂಸಕ ಎಂಬ ಗುರುತು. ಅವನು, ರಂಗಣ್ಣನು ಬಂದನು (ಪುಲ್ಲಿಂಗ). ಅವಳು, ಮುದುಕಿ ಬಂದಳು (ಸ್ತ್ರೀಲಿಂಗ). ಅದು, ಕೋಳಿ ಬಂತು (ನಪುಂಸಕ ಲಿಂಗ). ಅವರು ಬಂದರು (ಪುಲ್ಲಿಂಗ ಸ್ತ್ರೀಲಿಂಗ ಬಹು ವಚನ). ಅವು ಬಂದುವು (ನಪುಂಸಕಲಿಂಗ ಬಹುವಚನ).

೩೩. ಮೇಲುಕೋಟೆ

ಮೇಲುಕೋಟೆ ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿದೆ. ಇದು ಯದುಗಿರಿ ಎಂಬ ಬೆಟ್ಟದಮೇಲಿದೆ. ಸುಮಾರು ಎಂಟುನೂರು ವರ್ಷಗಳ ಹಿಂದೆ ರಾಮಾನುಜಾಚಾರ್ಯರು ಚೋಳದೇಶವನ್ನು ಬಿಟ್ಟು ಇಲ್ಲಿಗೆ ಬಂದರು. ಈ ಊರಿನಲ್ಲಿ ಹದಿನಾಲ್ಕು ವರ್ಷಗಳಕಾಲ ವಾಸವಾಗಿದ್ದು ತಮ್ಮ ಮತ ವನ್ನು ಬೋಧಿಸಿದರು. ಇವರ ಮತಕ್ಕೆ ಶ್ರೀವೈಷ್ಣವ ಮತವೆಂದು ಹೆಸರು.

ರಾಮಾನುಜಾಚಾರ್ಯರು ಇದ್ದ ಪುಣ್ಯಸ್ಥಳವಾದುದರಿಂದ ಮೇಲು ಕೋಟೆಗೆ ಅನೇಕರು ಯಾತ್ರೆ ಹೋಗುತ್ತಾರೆ. ಈ ಊರಿನಲ್ಲಿ ಚೆಲುವ ಪಿಳ್ಳೆರಾಯನ ಗುಡಿ, ನರಸಿಂಹಸ್ವಾಮಿ ದೇವಸ್ಥಾನ ಇವೆ. ಚೆಲುವ ಪಿಳ್ಳೆರಾಯ ಎಂಬುದು ಶ್ರೀಕೃಷ್ಣನ ಹೆಸರು. ಈ ವಿಗ್ರಹವನ್ನು ರಾಮಾನುಜಾಚಾರ್ಯರು ದೆಹಲಿಯಿಂದ ತಂದು ಇಲ್ಲಿ ಇಟ್ಟರಂತೆ. ಮೇಲುಕೋಟೆಯಲ್ಲಿ ವಯಿರಮುಡಿ ಉತ್ಸವ ಬಹಳ ಚೆನ್ನಾಗಿ ನಡೆಯು ತ್ತದೆ. ಆಗ ದೇವರಿಗೆ ವಜ್ರದ ಕಿರೀಟವನ್ನು ಇಟ್ಟು ಮೆರವಣಿಗೆ ಮಾಡು ತ್ತಾರೆ. ಈ ಉತ್ಸವ ನೋಡುವುದಕ್ಕೆ ಸಾವಿರಾರು ಜನರು ಬರುತ್ತಾರೆ.

ನರಸಿಂಹಸ್ವಾಮಿಗೆ ಮೈಸೂರಿನ ದೊರೆಗಳು ಬಹಳ ಆಭರಣಗಳನ್ನು ಕೊಟ್ಟಿದ್ದಾರೆ. ಹಿಂದೆ ರಾಜ ಒಡೆಯರು ಕೊಟ್ಟ ಕಿರೀಟಕ್ಕೆ ರಾಜಮುಡಿ ಎಂದು ಹೆಸರು. ಆಗಾಗ ದೇವರಿಗೆ ಇದನ್ನು ಇಟ್ಟು ಅಲಂಕಾರ ಮಾಡುತ್ತಾರೆ.

ರಾಮಾನುಜಾಚಾರ್ಯರು ಹೊಯ್ಸಳ ದೊರೆಯಾದ ಬಿಟ್ಟಿದೇವನನ್ನು ವೈಷ್ಣವನನ್ನಾಗಿ ಮಾಡಿದರೆಂದು ಜನರು ಹೇಳುತ್ತಾರೆ. ಆಗ ಆ ದೊರೆ ವಿಷ್ಣುವರ್ಧನ ಎಂದು ಹೆಸರಿಟ್ಟುಕೊಂಡನಂತೆ. ವಿಷ್ಣುವರ್ಧನನು ದೇವಸ್ಥಾನಗಳಿಗೂ ಮೇಲುಕೋಟೆಯ ಬ್ರಾಹ್ಮಣರಿಗೂ ಬೇಕಾದಷ್ಟು ಭೂಮಿಯನ್ನು ಉಂಬಳಿಯಾಗಿ ಕೊಟ್ಟನು.


ರಾಮಾನುಜಾಚಾರ್ಯರು ಮೇಲುಕೋಟೆಯ ಸಮೀಪದಲ್ಲಿರುವ ತೊಣ್ಣೂರಿನಲ್ಲಿ ಒಂದು ಕೆರೆ ಕಟ್ಟಿಸಿದರು. ಅದಕ್ಕೆ ತಿರುಮಲ ಸಾಗರ ಎಂದು ಹೆಸರಿಟ್ಟರು. ಸುಮಾರು ಇನ್ನೂರು ವರ್ಷಗಳ ಹಿಂದೆ ಅಲ್ಲಿಗೆ ಹೋದ ಹೈದರಾಬಾದಿನ ನೈಜಾಮನು ಅದಕ್ಕೆ ಮೋತಿ ತಲಾವ್ ಎಂದು ಹೆಸರು ಕೊಟ್ಟನು. ಈಗ ಕೆರೆಗೆ ಮೋತಿ ತಲಾವ್ ಎಂದು ಹೆಸರು ನಿಂತಿದೆ. ಮೋತಿ ತಲಾವ್ ಎಂದರೆ ಮುತ್ತಿನ ಕೆರೆ ಎಂದು ಅರ್ಥ. ಕೆರೆಯ ನೀರು ಬಹಳ ಚೆನ್ನಾಗಿರುವುದರಿಂದ ಹೀಗೆ ಕರೆದಿರಬೇಕು.

ಮೇಲುಕೋಟೆಯ ಬೆಟ್ಟದಲ್ಲಿ ಬಹು ನುಣುಪಾದ ಬಿಳಿಯ ಮಣ್ಣು ಸಿಕ್ಕುತ್ತದೆ. ಇದನ್ನು ರಾಮಾನುಜಾಚಾರ್ಯರು ಮೊದಲು ಕಂಡುಹಿಡಿದರಂತೆ. ಇದೇ ಮೇಲುಕೋಟೆಯ ನಾಮ. ಇದನ್ನು ಶ್ರೀವೈಷ್ಣವರು ತರಿಸಿಕೊಂಡು ಹಚ್ಚಿಕೊಳ್ಳುತ್ತಾರೆ.

ಪ್ರಶ್ನೆ

ನಾಮಪದ, ಸರ್ವನಾಮ, ಕ್ರಿಯಾಪದಗಳು ಹೊಂದಿಕೊಂಡಿರುವುದಕ್ಕೆ ನಾಲ್ಕು ಉದಾಹರಣೆಗಳನ್ನು ಕೊಡಿ. ಇವು ಯಾವ ಲಿಂಗ?—ಮೇಲುಕೋಟೆ, ಬೆಟ್ಟ, ನರಸಿಂಹಸ್ವಾಮಿ, ಉತ್ಸವ, ರಾಜ ಒಡೆಯರು, ಜನರು, ಭೂಮಿ, ಕೆರೆ, ಲಕ್ಷ್ಮಿ, ಮಗಳು. ಇವಕ್ಕೆ ತಕ್ಕ ಕ್ರಿಯಾಪದಗಳನ್ನು ಜೋಡಿಸಿ ವಾಕ್ಯಗಳನ್ನು ಮಾಡಿ. ಈ ವಾಕ್ಯಗಳಲ್ಲಿ ಏನು ತಪ್ಪು? ತಿದ್ದಿ ಬರೆಯಿರಿ—ಅವನು ಬಂದಳು. ಅವಳು ಹೋದನು. ಅವರು ಬಂದನು. ಅದು ಬಂದನು. ಅವು ನಿಂತಳು. ನಾನು ನಾಳೆ ಬಂದೆನು. ನಾನು ನೆನ್ನೆ ಬರುತ್ತೇನೆ. ಲಿಂಗ, ವಚನ, ಕಾಲ— ಇವು ಹೇಗೆ ಹೊಂದಿಕೊಂಡಿರಬೇಕೆಂದು ನಿಮಗೆ ಈಗ ತಿಳಿಯಿತೆ?

೩೪. ನವರಾತ್ರಿಯ ಹಬ್ಬ



ಹಬ್ಬಗಳಲ್ಲಿ ನವರಾತ್ರಿ ಎಂಬುದು ಹಿಂದುಗಳಿಗೆ ಮುಖ್ಯವಾದ ದೊಡ್ಡ ಹಬ್ಬ. ಇದಕ್ಕೆ ದಸರ ಎಂದೂ ಹೆಸರು.

ನವರಾತ್ರಿ ಆಶ್ವಯುಜ ಶುದ್ಧ ಪಾಡ್ಯಮಿಯಿಂದ ದಶಮಿಯವರೆಗೆ ನಡೆಯುತ್ತದೆ. ಈ ಹತ್ತು ದಿವಸವೂ ಮನೆಗಳಲ್ಲಿಯೂ ಗುಡಿಗಳಲ್ಲಿಯೂ ದೇವರಿಗೆ ಅಭಿಷೇಕ, ಸಹಸ್ರನಾಮ ಪೂಜೆ ಮುಂತಾದುವು ನಡೆಯುತ್ತವೆ; ರಾಮಾಯಣವನ್ನೂ ಸಪ್ತಶತಿಯನ್ನೂ ಪಾರಾಯಣಮಾಡಿ ಮುಗಿಸುವರು.

ನವರಾತ್ರಿಯಲ್ಲಿ ಮೂಲನಕ್ಷತ್ರದ ದಿವಸ ಪುಸ್ತಕಗಳನ್ನಿಟ್ಟು ಸರಸ್ವತೀ ಪೂಜೆ ಮಾಡುತ್ತಾರೆ. ಅಷ್ಟಮಿಯ ದಿವಸ ದುರ್ಗಾ ಪೂಜೆ ಮಾಡುತ್ತಾರೆ. ನವಮಿಯ ದಿನ ಆನೆ, ಕುದುರೆ, ದನ, ಹಸುಗಳಿಗೆ ಮೈತೊಳೆದು ಶೃಂಗಾರ ಮಾಡುತ್ತಾರೆ. ಆಯುಧಗಳನ್ನು ಒಂದು ಕಡೆ ಇಟ್ಟು ಪೂಜಿಸುತ್ತಾರೆ. ಇದೇ ಮಹಾನವಮಿ. ಮಾರನೆಯ ದಿನ ವಿಜಯ ದಶಮಿ. ಈ ದಿವಸ ದೇವರ ಉತ್ಸವ ಊರ ಹೊರಗಿರುವ ಬನ್ನಿಯ ಮಂಟಪಕ್ಕೆ ಹೋಗಿಬರುತ್ತದೆ.

ಈ ಹಬ್ಬದಲ್ಲಿ ನಮ್ಮ ಮಹಾರಾಜರು ಕೈಗೆ ಕಂಕಣ ಕಟ್ಟಿಕೊಂಡು ಸಿಂಹಾಸನದಮೇಲೆ ಕುಳಿತುಕೊಳ್ಳುತ್ತಾರೆ. ಈ ಕಾಲದಲ್ಲಿ ಜಟ್ಟಿ ಕಾಳಗ, ಬಾಣ ಬಿರುಸು ಮೊದಲಾದ ಅನೇಕ ವಿನೋದಗಳು ನಡೆಯುತ್ತವೆ. ವಿಜಯ ದಶಮಿಯ ದಿನ ಕಂಕಣ ವಿಸರ್ಜನೆ ಆಗುವುದು. ಆ ದಿನ ಸಾಯಂಕಾಲ

ಮಹಾರಾಜರು ಆನೆ, ಕುದುರೆ, ದಂಡು ಮೊದಲಾದುವುಗಳೊಡನೆ ಜಂಬೂಸವಾರಿ ಹೊರಡುವರು.

ಹಿಂದೆ ದೊರೆಗಳು ಶತ್ರುಗಳನ್ನು ಜಯಿಸುವುದಕ್ಕೋಸ್ಕರ ಈ ದಿವಸ ಹೊರಡುವ ಪದ್ಧತಿಯಿತ್ತು. ಆದ್ದರಿಂದ ಈ ದಿವಸಕ್ಕೆ ವಿಜಯದಶಮಿ ಎಂದು ಹೆಸರು ಬಂದಿದೆ.

ಈ ಹಬ್ಬದಲ್ಲಿ ಹೆಣ್ಣುಮಕ್ಕಳು ತಮ್ಮ ಮನೆಗಳಲ್ಲಿ ಗೊಂಬೆಗಳನ್ನು ಅಲಂಕಾರಮಾಡಿ ಕೂಡಿಸುತ್ತಾರೆ. ಮಠದ ಹುಡುಗರು ಚೌಪದಗಳನ್ನು ಹೇಳುತ್ತಾರೆ. ಕನ್ನಡ ನಾಡಿನಲ್ಲೆಲ್ಲಾ ನಾಡಹಬ್ಬ ನಡೆಯುತ್ತದೆ.

ನವರಾತ್ರಿಯ ಹಬ್ಬ ಮೈಸೂರಲ್ಲಿ ಬಹಳ ಚೆನ್ನಾಗಿ ನಡೆಯುತ್ತದೆ. ಅದನ್ನು ನೋಡುವುದಕ್ಕೆ ದೇಶದ ಎಲ್ಲ ಕಡೆಗಳಿಂದಲೂ ಸಾವಿರಾರು ಜನರು ಬರುತ್ತಾರೆ.

ಪ್ರಶ್ನೆ

ನಾಮಪದ ಅಥವಾ ಸರ್ವನಾಮ ಮತ್ತು ಕ್ರಿಯಾಪದಗಳು ಲಿಂಗ, ವಚನ, ಕಾಲ ಇವುಗಳಲ್ಲಿ ಹೊಂದಿಕೊಂಡಿರಬೇಕೆಂದು ತಿಳಿದಿರಿ. ಇನ್ನೊಂದು ವಿಶೇಷ: ಪ್ರಥಮ ಪುರುಷ, ಮಧ್ಯಮ ಪುರುಷ, ಉತ್ತಮ ಪುರುಷ — ಈ ಮೂರು ಪುರುಷಗಳಲ್ಲಿಯೂ ಅವು ಹೊಂದಿಕೆಯಾಗಿರಬೇಕು. ಪುರುಷ ಎಂದರೆ ಮನುಷ್ಯ.

ಪ್ರ. ಪು.	ಅವನು, ಅವಳು	— ಅವರು	ಮ. ಪು.	ನೀನು — ನೀವು
	ಅದು	— ಅವು	ಉ. ಪು.	ನಾನು — ನಾವು
	ತಾನು	— ತಾವು		

ಇವಕ್ಕೆ ಹೊಂದಿಕೆಯಾಗಿ — ಭೂತಕಾಲ. ಅವನು ಬಂದನು. ಅವಳು ಬಂದಳು. ಅದು ಬಂದಿತು. ತಾನು ಬಂದನು, ಬಂದಳು, ಬಂದಿತು. ಅವರು ಬಂದರು. ಅವು ಬಂದುವು. ತಾವು ಬಂದರು. ನೀನು ಬಂದೆ. ನೀವು ಬಂದಿರಿ. ನಾನು ಬಂದೆನು (ಬಂದೆ). ನಾವು ಬಂದೆವು. ವರ್ತಮಾನಕಾಲ — ಅವನು, ತಾನು — ಬರುತ್ತಾನೆ. ಅವಳು, ತಾನು — ಬರುತ್ತಾಳೆ. ಅದು, ತಾನು — ಬರುತ್ತದೆ. ಅವರು, ತಾವು — ಬರುತ್ತಾರೆ. ಅವು, ತಾವು — ಬರುತ್ತವೆ. ನೀನು ಬರುತ್ತೀಯೆ, ನೀವು ಬರುತ್ತೀರಿ. ನಾನು ಬರುತ್ತೇನೆ, ನಾವು ಬರುತ್ತೇವೆ.

೩೫. ಗಡಿಯಾರ



ತಂದೆ — ರಾಮು! ಏಳು ಗಂಟೆಯಾಯಿತು. ಪಾಠಶಾಲೆಗೆ ಹೋಗುವುದಿಲ್ಲವೆ?

ರಾ. — ಅಪ್ಪ! ಎಷ್ಟು ಗಂಟೆಯಾಯಿತೆಂಬುದು ನನಗೆ ತಿಳಿಯುವುದೇ ಇಲ್ಲವಲ್ಲ.

ತಂ. — ನೋಡು. ಈ ಗಡಿಯಾರ ಗಂಟೆಯನ್ನು ತೋರಿಸುತ್ತದೆ. ಇದರ ಮುಖದಲ್ಲಿ ಒಂದು ಸಣ್ಣ ಮುಳ್ಳು, ಇನ್ನೊಂದು ದೊಡ್ಡ ಮುಳ್ಳು ಇವೆ. ಸಣ್ಣ ಮುಳ್ಳು ಗಂಟೆಯನ್ನು ತೋರಿಸುತ್ತದೆ. ದೊಡ್ಡ ಮುಳ್ಳು ನಿಮಿಷಗಳನ್ನು ತೋರಿಸುತ್ತದೆ.

ರಾ. — ಗುಂಡು ಬಿಲ್ಲೆಯಮೇಲೆ ಗುರುತಿಸಿರುವುದೇನು?

ತಂ. — ಅದರಮೇಲೆ ಒಂದು, ಎರಡು ಮುಂತಾಗಿ ಹನ್ನೆರಡರವರೆಗೆ ಅಂಕಗಳನ್ನು ಗುರುತಿಸಿದೆ. ಒಂದು ಅಂಕದಿಂದ ಇನ್ನೊಂದು ಅಂಕದವರೆಗಿರುವ ಸ್ಥಳವನ್ನು ಐದು ಸಮಭಾಗಗಳಾಗಿ ಮಾಡಿದೆ. ಗುಂಡು ಬಿಲ್ಲೆಯಮೇಲೆ ಸಣ್ಣ ಗೆರೆಗಳು ಎಷ್ಟಿವೆ?

ರಾ. — ಅರುವತ್ತು ಇವೆ.

ತಂ. — ಅಹುದು. ದೊಡ್ಡ ಮುಳ್ಳು ಒಂದು ಸಣ್ಣ ಗೆರೆಯಿಂದ ಇನ್ನೊಂದು ಸಣ್ಣ ಗೆರೆಗೆ ಜರುಗುವ ಕಾಲಕ್ಕೆ ಒಂದು ನಿಮಿಷ. ಈಗ

ದೊಡ್ಡ ಮುಳ್ಳು ೧೨ ಎಂಬ ಸ್ಥಳದಿಂದ ಒಂದು ಸುತ್ತು ಬಂದರೆ ಎಷ್ಟು ನಿಮಿಷಗಳಾಗುತ್ತವೆ?

ರಾ. — ಅರುವತ್ತು ನಿಮಿಷಗಳಾಗುತ್ತವೆ.

ತಂ. — ಅಹುದು. ಇದಕ್ಕೆ ಒಂದು ಗಂಟೆ ಎಂದು ಹೆಸರು. ಆಗ ಚಿಕ್ಕ ಮುಳ್ಳು ಮುಂದಿನ ಅಂಕಕ್ಕೆ ಸರಿದಿರುತ್ತದೆ.

ರಾ. — ಗಂಟೆಯನ್ನು ಹೇಗೆ ನೋಡುವುದು?

ತಂ. — ಚಿಕ್ಕ ಮುಳ್ಳು ದಾಟಿರುವ ಸಂಖ್ಯೆ ಗಂಟೆಯನ್ನು ತೋರಿಸುತ್ತದೆ. ದೊಡ್ಡ ಮುಳ್ಳು ೧೨ ಎಂಬ ಅಂಕದಿಂದ ಎಷ್ಟು ಸಣ್ಣ ಗೆರೆಗಳನ್ನು ದಾಟಿರುವುದೋ ನೋಡಬೇಕು. ಆ ಸಂಖ್ಯೆ ನಿಮಿಷಗಳನ್ನು ತಿಳಿಸುತ್ತದೆ.

ರಾ. — ತಿಳಿಯಿತು. ಈಗ ಏಳು ಗಂಟೆ, ಹದಿಮೂರು ನಿಮಿಷ.

ತಂ. —ಅಹುದು. ದೊಡ್ಡ ಮುಳ್ಳು ಸರಿಯುತ್ತ ಬಂದಹಾಗೆಲ್ಲ ಗಂಟೆ ಹೆಚ್ಚುತ್ತದೆ. ಹದಿನೈದು ನಿಮಿಷಗಳಿಗೆ ಬಂದರೆ ಏಳೂಕಾಲು ಗಂಟೆ. ಮೂವತ್ತು ನಿಮಿಷಗಳಿಗೆ ಬಂದರೆ ಏಳೂವರೆ ಗಂಟೆ. ನಲವತ್ತೈದು ನಿಮಿಷಗಳಿಗೆ ಬಂದರೆ ಏಳೂಮುಕ್ಕಾಲು ಗಂಟೆ. ದೊಡ್ಡ ಮುಳ್ಳು ಸುತ್ತಿಕೊಂಡು ಪುನಃ ೧೨ರ ಮೇಲೆ ನಿಂತಾಗ ಚಿಕ್ಕ ಮುಳ್ಳು ಎಲ್ಲಿರುತ್ತದೆ?

ರಾ. — ಎಂಟರ ಮೇಲಿರುತ್ತದೆ. ಆಗ ಎಂಟು ಗಂಟೆ.

ತಂ. — ಅಹುದು. ಹೀಗೆ ಚಿಕ್ಕ ಮುಳ್ಳು ಒಂದುಸಲ ಸುತ್ತಿ ಪುನಃ ಏಳರಮೇಲೆ ನಿಂತಾಗ ರಾತ್ರಿ ಏಳು ಗಂಟೆ. ರಾತ್ರಿಯೆಲ್ಲ ಸುತ್ತಿ ಪುನಃ ಏಳರಮೇಲೆ ನಿಂತಾಗ ಹಗಲು ಏಳು ಗಂಟೆ. ಹೀಗೆ ಒಂದು ದಿವಸಕ್ಕೆ ಚಿಕ್ಕ ಮುಳ್ಳು ಇಪ್ಪತ್ತುನಾಲ್ಕು ಗಂಟೆಗಳನ್ನು ತೋರಿಸುತ್ತದೆ.

ರಾ. — ಕೆಳಗಡೆ ಒಂದು ಬಹಳ ಚಿಕ್ಕ ಮುಳ್ಳು ಬೇಗ ಬೇಗ ಸುತ್ತುತ್ತ ಇದೆಯಲ್ಲ? ಇದು ಏನು?

ತಂ. — ಇದು ಕ್ಷಣಗಳನ್ನು ತಿಳಿಸುತ್ತದೆ. ಇಂಗ್ಲೀಷಿನಲ್ಲಿ ಕ್ಷಣವನ್ನು ಸೆಕಂಡ್ ಎಂದು ಹೇಳುತ್ತಾರೆ. ಈ ಚಿಕ್ಕ ಮುಳ್ಳು ಒಂದುಬಾರಿ ಸುತ್ತುವ ಹೊತ್ತಿಗೆ ಅರುವತ್ತು ಸೆಕಂಡುಗಳಾಗುತ್ತವೆ. ಆಗ ಗಡಿಯಾರದ ದೊಡ್ಡ ಮುಳ್ಳು ಒಂದು ನಿಮಿಷ ಮುಂದುವರಿಯುತ್ತದೆ. ಅರುವತ್ತು ಸೆಕಂಡುಗಳಿಗೆ ಒಂದು ನಿಮಿಷ. ಅರುವತ್ತು ನಿಮಿಷಗಳಿಗೆ ಒಂದು ಗಂಟೆ.

ರಾ. — ಈ ಗಡಿಯಾರ 'ಟಿಕ್ ಟಿಕ್' ಎಂದು ಏತಕ್ಕೆ ಅನ್ನುತ್ತದೆ?

ತಂ.—ಗಡಿಯಾರದ ಹಿಂಭಾಗವನ್ನು ತೆರೆದಿದ್ದೇನೆ, ನೋಡು. ಒಂದು ಚಕ್ರ ಇತ್ತ ಅತ್ತ ತಿರುಗುತ್ತಿದೆ. ಹೀಗೆ ಇದು ತಿರುಗುವಾಗ ಒಳಗಿರುವ ಮುಳ್ಳಿನ ಚಕ್ರವೊಂದು ಟಿಕ್ ಟಿಕ್ ಎಂದು ಸದ್ದು ಮಾಡುತ್ತ ಮುಂದಕ್ಕೆ ಹೋಗುತ್ತದೆ. ಆದರಿಂದ ಇತರ ಚಕ್ರಗಳು ನಡೆಯುತ್ತವೆ. ಗಡಿಯಾರ ಸರಿಯಾಗಿ ನಡೆಯಬೇಕಾದರೆ ಆಗಾಗ ಅದರ ಕೀಲು ತಿರುಗಿಸಿ ಶಕ್ತಿ ತುಂಬಬೇಕು.

ರಾ.—ನನಗೆ ಗಡಿಯಾರದ ವಿಚಾರವೆಲ್ಲ ಈಗ ತಿಳಿಯಿತು. ಇನ್ನು ಮೇಲೆ ನಾನೆ ಗಂಟೆ ನೋಡಿಕೊಂಡು ಸರಿಯಾದ ಹೊತ್ತಿಗೆ ಪಾಠಶಾಲೆಗೆ ಹೋಗುತ್ತೇನೆ.

ಪ್ರಶ್ನೆ

ಗಡಿಯಾರದಲ್ಲಿ ಎಷ್ಟು ಮುಳ್ಳುಗಳಿರುತ್ತವೆ? ಅವು ಏನೇನು ತೋರಿಸುತ್ತವೆ. ಗಡಿಯಾರದಿಂದ ಗಂಟೆಯನ್ನು ಹೇಗೆ ಗೊತ್ತುಮಾಡುತ್ತೀರಿ? ಒಂದು ಗಂಟೆಗೆ ಎಷ್ಟು ನಿಮಿಷ? ಒಂದು ನಿಮಿಷಕ್ಕೆ ಎಷ್ಟು ಸೆಕಂಡು? ಗಡಿಯಾರಕ್ಕೆ ಜೀವವಿಲ್ಲವಲ್ಲಾ, ಅದು ಹೇಗೆ ನಡೆಯುತ್ತದೆ? ರಾಮು, ಅಪ್ಪಾ, ಇವು ಯಾವ ವಿಭಕ್ತಿ? (ಸಂಬೋಧನಾ ವಿಭಕ್ತಿ — ಒಬ್ಬರನ್ನು ಕೂಗುವಾಗ ಹೇಳುವುದು.) ಏಳು — ನೋಡು, ಈ ಕ್ರಿಯಾಪದಗಳು ವಿಧಿರೂಪದಲ್ಲಿವೆ. ವಿಧಿರೂಪವೆಂದರೆ ಹೀಗೆ ಮಾಡು ಎಂದು ಹೇಳುವ ರೂಪ. ಹೀಗೆ ಇಲ್ಲಿ ಬಾ, ಅದನ್ನು ತಾ, ಒಳಗೆ ನಡೆ, ಮರವನ್ನು ಸುತ್ತು — ಇಲ್ಲಿ ಕ್ರಿಯೆಗಳೆಲ್ಲಾ ವಿಧಿಕ್ರಿಯೆಗಳು. ನೀವೇ ಕೆಲವು ವಿಧಿಕ್ರಿಯೆಗಳಿಗೆ ಉದಾಹರಣೆಗಳನ್ನು ಕೊಡಿ (ಈ ಕೊಡಿ ಎನ್ನುವುದೂ ವಿಧಿರೂಪವೇ).

೩೬. ನೀರ ಸರಬರಾಯಿ

ನೀರಿಲ್ಲದಿದ್ದರೆ ಯಾವ ಪ್ರಾಣಿಯೂ ಬಹುಕಾಲ ಬದುಕಲಾರದು. ಸಸ್ಯಾದಿಗಳೂ ಬದುಕಲಾರವು. ಎಲ್ಲಕ್ಕೂ ನೀರು ಆವಶ್ಯಕ. ಮನುಷ್ಯನಿಗೆ ಕುಡಿಯುವುದಕ್ಕೂ, ಅಡಿಗೆಗೂ, ಸ್ನಾನಕ್ಕೂ, ಬಟ್ಟೆ ಒಗೆಯುವುದಕ್ಕೂ ನೀರು ಅಗತ್ಯವಾಗಿ ಬೇಕು.

ನೀರು ಎಲ್ಲಿ ಸುಲಭವಾಗಿ ಸಿಕ್ಕುವುದೋ ಅಲ್ಲಿ ಜನರು ವಾಸಮಾಡುತ್ತಾರೆ. ತಮಗೂ ತಮ್ಮ ಪೈರುಗಳಿಗೂ ದನಕರುಗಳಿಗೂ ಬೇಕಾದ ನೀರನ್ನು ಜನರು ಕೆಲವು ಉಪಾಯಗಳಿಂದ ಪಡೆದುಕೊಳ್ಳುತ್ತಾರೆ.

ಅನುಕೂಲವಾದ ಕಡೆ ಕಟ್ಟೆಯನ್ನು ಕಟ್ಟಿ, ಹರಿಯುವ ನೀರನ್ನು ನಿಲ್ಲಿಸಿ, ಕೆರೆ ಮಾಡಿಕೊಳ್ಳುತ್ತಾರೆ. ಸಮೀಪದ ನದಿಗಳಿಂದ ಕಾಲುವೆಗಳನ್ನು ತೆಗೆದು ನೀರನ್ನು ಹಾಯಿಸಿಕೊಳ್ಳುವುದೂ ಉಂಟು. ಸಾಮಾನ್ಯವಾಗಿ ಪ್ರತಿ ಗ್ರಾಮದಲ್ಲಿಯೂ ಕೊಳಗಳೂ ಬಾವಿಗಳೂ ಇದ್ದೇ ಇರುತ್ತವೆ. ಬಾವಿಗಳು ಚಿಕ್ಕವಾಗಿದ್ದರೆ ನೀರನ್ನು ಸೇದಿಕೊಳ್ಳುವರು. ವ್ಯವಸಾಯಕ್ಕೆ ದೊಡ್ಡ ದೊಡ್ಡ ಬಾವಿಗಳಿದ್ದರೆ ಏತದಿಂದಾಗಲಿ ಕಪಿಲೆಯಿಂದಾಗಲಿ ನೀರನ್ನು ಎತ್ತಿ ಪೈರಿಗೆ ಹಾಯಿಸುವರು.

ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನೀರಿಗೆ ಬೇರೆ ಏರ್ಪಾಡನ್ನು ಮಾಡುತ್ತಾರೆ. ಕೆರೆ ಪಟ್ಟಣವಾಸಿಗಳಿಗೆ ದೂರವಾಗಬಹುದು. ಬಾವಿ ತೋಡಿದರೆ ಸಿಹಿನೀರು ಬೀಳದೆ ಇರಬಹುದು. ಬೇಸಗೆಯಲ್ಲಿ ಬಾವಿಗಳು ಬತ್ತಿ ನೀರಿಗೆ ತೊಂದರೆಯಾಗಬಹುದು. ಆದ್ದರಿಂದ ದೂರದಲ್ಲಿರುವ ದೊಡ್ಡ ಕೆರೆಯ ನೀರನ್ನು ಶೋಧಿಸಿ ನಲ್ಲಿಗಳ ಮೂಲಕ ಸರ್ಕಾರದವರು ಒದಗಿಸುತ್ತಾರೆ. ಕೆರೆಗಳಿಗೆ ಪ್ರತಿಯಾಗಿ ನದಿಗಳಿಂದಲೂ ಹೀಗೆ ನೀರನ್ನು ಶೋಧಿಸಿ ಒದಗಿಸುವುದುಂಟು. ಇದಕ್ಕಾಗಿ ಪಟ್ಟಣವಾಸಿಗಳು ನೀರಿನ ತೆರಿಗೆಯನ್ನು ಕೊಡುತ್ತಾರೆ.

ಪ್ರಶ್ನೆ

ನೀರು ನಮಗೆ ಏಕೆ ಅಗತ್ಯವಾಗಿ ಬೇಕು? ನೀರು ನಮಗೆ ಯಾವ ಯಾವ ರೀತಿಯಲ್ಲಿ ಸಿಕ್ಕುತ್ತದೆ? ನೀರಿನ ತೆರಿಗೆಯನ್ನು ನಾವು ಏಕೆ ಕೊಡಬೇಕು? ಬದುಕಲಾರದು, ಬದುಕಲಾರವು, ಬದುಕುತ್ತೇವೆ, ಬದುಕಿದೆವು — ಈ ಕ್ರಿಯಾಪದಗಳೆಲ್ಲಾ ಬದುಕು ಎಂಬ ಮೂಲ ಕ್ರಿಯೆಯಿಂದ ಬಂದಿವೆ. ಈ ಮೂಲ ಕ್ರಿಯೆಗೆ ಧಾತು ಎಂದು ಹೆಸರು. ಮಾಡುತ್ತಾರೆ, ಮಾಡಿದರು, ಮಾಡಲಾರರು, ಮಾಡಬೇಕು, ಮಾಡದೆ ಇರಬೇಕು — ಇಲ್ಲಿ ಧಾತು ಯಾವುದು? — ಮಾಡು. ಹೀಗೇ ಇರು, ಬರು, ನೋಡು, ಹೇಳು, ಕೇಳು, ಹೋಗು, ಮಲಗು, ನಿಲ್ಲು — ಇವೆಲ್ಲಾ ಧಾತುಗಳು. ಹಿಂದಿನ ಪಾಠಗಳಲ್ಲಿರುವ ಧಾತುಗಳನ್ನು ಹುಡುಕಿ.

೩೭. ಗೊಬ್ಬರ

ಸಸ್ಯಗಳು ತಮ್ಮ ಆಹಾರವನ್ನು ಭೂಮಿಯಿಂದ ತೆಗೆದುಕೊಳ್ಳುತ್ತವೆ. ಹೀಗೆ ತೆಗೆದುಕೊಳ್ಳುತ್ತಾ ಹೋದರೆ ಭೂಮಿಯಲ್ಲಿರುವ ಆಹಾರ ವಸ್ತು ಕಡಮೆಯಾಗುತ್ತದೆ. ಕಡಮೆಯಾದ ವಸ್ತುವನ್ನು ಆಗಾಗ ನಾವು ಭೂಮಿಗೆ ಒದಗಿಸಬೇಕು. ಇಲ್ಲದಿದ್ದರೆ ಸಸ್ಯಕ್ಕೆ ಆಹಾರ ಸಾಲದೆ ಅದರ ಬೆಳವಣಿಗೆ ಕಡಮೆಯಾಗುತ್ತದೆ. ಆದ್ದರಿಂದ ಗೊಬ್ಬರವನ್ನು ಆಗಾಗ ಭೂಮಿಗೆ ಸೇರಿಸಬೇಕು. ಸಸ್ಯಕ್ಕೆ ಬೇಕಾದ ಆಹಾರವೇ ಗೊಬ್ಬರ. ಒಳ್ಳೆಯ ಗೊಬ್ಬರ ಹಾಕಿದರೆ ಪೈರು ಹುಲುಸಾಗಿ ಬೆಳೆದು ಚೆನ್ನಾಗಿ ಕಾಳು ಕಟ್ಟುತ್ತದೆ.

ಗೊಬ್ಬರದಲ್ಲಿ ಪ್ರಾಣಿಯ ಗೊಬ್ಬರ, ಸಸ್ಯದ ಗೊಬ್ಬರ, ಖನಿಜದ ಗೊಬ್ಬರ ಎಂದು ಮೂರು ವಿಧ. ದನ, ಎಮ್ಮೆ, ಕುರಿ, ಮೇಕೆ ಇವುಗಳ ಸಗಣಿಯೂ ಗಂಜಳವೂ ಗುಂಡಿಗಳಲ್ಲಿ ಸೇರಿ ಕೊಳೆತರೆ ಒಳ್ಳೆಯ ಗೊಬ್ಬರ ಆಗುತ್ತದೆ. ಪ್ರಾಣಿಗಳ ಮೂಳೆ ಮತ್ತು ಸತ್ತ ಮೀನು ಗೊಬ್ಬರಕ್ಕೆ ಬರುತ್ತವೆ. ಇವೆಲ್ಲ ಪ್ರಾಣಿಯ ಗೊಬ್ಬರ.

ಸಸ್ಯಗಳಿಂದಲೂ ಗೊಬ್ಬರ ಸುಲಭವಾಗಿ ದೊರೆಯುತ್ತದೆ. ಮರದ ಎಲೆಗಳನ್ನೂ, ಹೂವುಗಳನ್ನೂ, ಸಣ್ಣ ಸಣ್ಣ ರೆಂಬೆಗಳನ್ನೂ ಕೊಳೆಯಿಸಿದರೆ ಗೊಬ್ಬರವಾಗುತ್ತದೆ. ಹೊಂಗೆಯ ಮರವನ್ನು ಅನೇಕರು ಗೊಬ್ಬರಕ್ಕಾಗಿಯೆ ಬೆಳೆಯುತ್ತಾರೆ. ಗದ್ದೆಗಳಲ್ಲಿ ಹುರುಳಿ, ಹೆಸರು, ಸೆಣಬು ಮೊದಲಾದ ಪೈರು ಗಿಡಗಳನ್ನು ಬೆಳೆಯಿಸಿ, ನೆಲದಲ್ಲಿ ಉತ್ತು, ಮಣ್ಣಿನೊಡನೆ ಸೇರಿಸುತ್ತಾರೆ. ಎಣ್ಣೆಯ ಬೀಜಗಳಿಂದ ಎಣ್ಣೆಯನ್ನು ತೆಗೆದಮೇಲೆ ಉಳಿಯುವ ಹಿಂಡಿ ಉತ್ತಮವಾದ ಗೊಬ್ಬರ.

ಭೂಮಿಯಲ್ಲಿ ಸಿಕ್ಕುವ ಸುಣ್ಣಕಲ್ಲು, ಗೋಡು ಮೊದಲಾದುವು ಖನಿಜದ ಗೊಬ್ಬರ. ಇವುಗಳನ್ನೂ ರೈತರು ಉಪಯೋಗಿಸುತ್ತಾರೆ.

ಭೂಮಿಯ ಸಾರವನ್ನು ಪರೀಕ್ಷೆಮಾಡಿ ತಕ್ಕ ಗೊಬ್ಬರವನ್ನು ಉಪಯೋಗಿಸಬೇಕು. ಈ ವಿಷಯದಲ್ಲಿ ರೈತರಿಗೆ ಬೇಕಾದ ಸಹಾಯವನ್ನು ವ್ಯವಸಾಯದ ಇಲಾಖೆಯವರು ಮಾಡುತ್ತಾರೆ.

ರೈತರು ಗೊಬ್ಬರದ ಗುಂಡಿಗಳನ್ನು ಮನೆಗಳಿಗೆ ದೂರವಾಗಿ

ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಗ್ರಾಮದ ಆರೋಗ್ಯ ಕೆಡುತ್ತದೆ. ಗೊಬ್ಬರವನ್ನು ಹೊಲ ಗದ್ದೆಗಳಲ್ಲಿ ಬಹಳ ಕಾಲ ಗಾಳಿಗೆ ಬಿಟ್ಟಿರಬಾರದು. ಅದನ್ನು ಬೇಗ ಹರವಿ ಚೆನ್ನಾಗಿ ಉತ್ತುಬಿಡಬೇಕು. ಆಗ ಗೊಬ್ಬರದ ಸಾರ ಗಾಳಿಗೆ ಹೋಗದೆ ಭೂಮಿಯಲ್ಲೇ ಸೇರಿಬಿಡುತ್ತದೆ.

ಪ್ರಶ್ನೆ

ಗೊಬ್ಬರ ಎಷ್ಟು ವಿಧ? ಸಸ್ಯಕ್ಕೆ ಗೊಬ್ಬರ ಏಕೆ ಬೇಕು? ಗೊಬ್ಬರದಿಂದ ಆರೋಗ್ಯ ಕೆಡುವುದುಂಟೆ? ಹಾಗಾಗದೆ ಇರುವುದಕ್ಕೆ ಏನು ಮಾಡಬೇಕು? ಸಾಲದೆ, ಬೆಳೆದು, ಕಟ್ಟುತ್ತದೆ—ಇಲ್ಲಿ ಧಾತುಗಳು ಯಾವುವು? ಬೆಳೆಯುತ್ತಾರೆ, ಸೇರಿಸುತ್ತಾರೆ, ಕೆಡುತ್ತದೆ—ಇಲ್ಲಿ ಬೆಳೆ, ಮಾಡು—ಈ ಧಾತುಗಳಿಗೆ ನೀವು ಓದಿರುವ ಬೇರೆ ಬೇರೆ ರೂಪಗಳನ್ನೂ ಅವುಗಳ ಅರ್ಥವನ್ನೂ ಹೇಳಿ.

೩೮. ಧೈರ್ಯಶಾಲಿಯಾದ ಹುಡುಗ

ಒಂದು ಊರಿಗೆ ಅರ್ಧ ಮೈಲಿ ದೂರದಲ್ಲಿ ಒಂದು ಪಾಠಶಾಲೆ ಇತ್ತು. ರಾಮಚಂದ್ರನೂ ಅವನ ತಂಗಿಯೂ ಓದುವುದಕ್ಕೆ ಅಲ್ಲಿಗೆ ಹೋಗಿದ್ದರು. ಸಾಯಂಕಾಲ ಶಾಲೆಯಾದಮೇಲೆ ಅವರು ಮನೆಗೆ ಬರುತ್ತಿದ್ದರು. ದಾರಿಯಲ್ಲಿ ಜನರು ಓಡಾಡುತ್ತಿದ್ದರು. ದೂರದಲ್ಲಿ ಗುಂಪಾಗಿ ಕೆಲವರು ದೊಣ್ಣೆಗಳನ್ನೆತ್ತಿಕೊಂಡು ಓಡಿಬರುತ್ತಿದ್ದರು. ಅವರ ಮುಂದೆ ಒಂದು ಹುಚ್ಚುನಾಯಿ ಓಡಿಬರುತ್ತಿತ್ತು. ಜನರೆಲ್ಲ ಹೆದರಿ ಓಡಿಹೋಗುತ್ತಾ "ಹುಚ್ಚುನಾಯಿ ಬರುತ್ತದೆ, ದೂರ ಹೋಗಿ ದೂರ ಹೋಗಿ" ಎಂದು ಕೂಗುತ್ತಿದ್ದರು.

ರಾಮಚಂದ್ರ ಮತ್ತು ಅವನ ತಂಗಿ ಇಬ್ಬರೇ ಬೀದಿಯ ಮಧ್ಯದಲ್ಲಿ ಉಳಿದುಹೋದರು. ಹುಚ್ಚುನಾಯಿ ಬಗುಳುತ್ತಾ ಆ ಹುಡುಗಿಯ ಹತ್ತಿರಕ್ಕೆ ಬಂತು. ಅವಳು "ಅಣ್ಣಾ ಹುಚ್ಚುನಾಯಿ ಕಚ್ಚುತ್ತದೆ" ಎಂದು ಗಟ್ಟಿಯಾಗಿ ಅತ್ತಳು.

ರಾಮಚಂದ್ರ ಚಿಕ್ಕ ಹುಡುಗ. ಆದರೂ ಜಾಣ ಮತ್ತು ಧೈರ್ಯಶಾಲಿ. ಹುಚ್ಚುನಾಯಿಯನ್ನು ನೋಡಿ ಅವನು ಹೆದರಲಿಲ್ಲ. ಓಡಿಹೋಗಲೂ ಇಲ್ಲ. ತಂಗಿಯ ಮುಂದೆ ನಿಂತು ನಾಯಿಗೆ ಎದುರಾದನು. ಅಂಗಿಯನ್ನು ಬಿಚ್ಚಿ ಎಡದ ತೋಳಿಗೆ ಸುತ್ತಿಕೊಂಡನು. ನಾಯಿ ಹತ್ತಿರಕ್ಕೆ ಬರುತ್ತಲೆ ಅದರ ಬಾಯಿಗೆ ಅಂಗಿ ಸುತ್ತಿದ್ದ ತೋಳನ್ನು ಹಿಡಿದನು. ನಾಯಿ

ಕಚ್ಚುವುದಕ್ಕೆ ಪ್ರಯತ್ನಿಸಿತು. ನಾಯಿಯ ಹಲ್ಲು ಅಂಗಿಯ ಸುತ್ತಿನ ನಾಟಲಿಲ್ಲ. ಅಷ್ಟರಲ್ಲಿ ಜನರು ಓಡಿಬಂದರು. ದೊಣ್ಣೆಯನ್ನು ಎತ್ತಿ ಒಬ್ಬನು ನಾಯಿಗೆ ಹೊಡೆದನು. ಅದು ಸತ್ತುಹೋಯಿತು.

ರಾಮಚಂದ್ರನೂ ಅವನ ತಂಗಿಯೂ ಮನೆಯನ್ನು ಸೇರಿದರು. ಹೊಸ್ತಿಲನ್ನು ದಾಟುವಾಗಲೆ "ಅಮ್ಮಾ! ಹುಚ್ಚುನಾಯಿ ನನ್ನನ್ನು ಕಚ್ಚಿಬಿಡುತ್ತಿತ್ತು. ಅಣ್ಣ ಧೈರ್ಯದಿಂದ ಉಪಾಯಮಾಡಿ ತಪ್ಪಿಸಿದನು. ಅಲ್ಲಿ ನೋಡು, ಆ ನಾಯಿಯನ್ನು ಹೊಡೆದುಹಾಕಿದ್ದಾರೆ" ಎಂದು ಹುಡುಗಿ ಹೇಳಿದಳು. ರಾಮಚಂದ್ರ ನಡೆದುದನ್ನೆಲ್ಲ ವಿವರಿಸಿದನು. ತಾಯಿ ಕೇಳಿ ಸಂತೋಷಪಟ್ಟಳು. ಮಕ್ಕಳನ್ನು ತಬ್ಬಿಕೊಂಡು "ಧೈರ್ಯವಿದ್ದರೆ ಯಾವ ಅಪಾಯವನ್ನಾದರೂ ದಾಟಬಹುದು. ರಾಮಚಂದ್ರ! ನೀನು ಬಹಳ ಧೈರ್ಯಶಾಲಿ. ದೇವರು ನಿನಗೆ ಆಯುಸ್ಸು ಕೊಟ್ಟು ಚೆನ್ನಾಗಿಟ್ಟಿರಲಪ್ಪ" ಎಂದಳು.

ಪ್ರಶ್ನೆ


"ಧೈರ್ಯದಿಂದ ಯಾವ ಅಪಾಯವನ್ನಾದರೂ ದಾಟಬಹುದು" ಎಂಬುದನ್ನು ಈ ಕಥೆಯಲ್ಲಿ ಹೇಗೆ ತೋರಿಸಿದೆ? "...." ಈ ಗುರುತು ಈ ಪಾಠದಲ್ಲಿ ಎಷ್ಟು ಕಡೆ, ಮತ್ತು ಏಕೆ ಉಪಯೋಗಿಸಿದೆ? ಅಣ್ಣಾ! ಅಮ್ಮಾ! ರಾಮಚಂದ್ರ!—ಇವು ಯಾವ ವಿಭಕ್ತಿ? ಇಲ್ಲಿ! ಈ ಗುರುತು ಏಕೆ ಹಾಕಿದೆ? ದೂರ ಹೋಗಿ, ಅಲ್ಲಿ ನೋಡು, ಚೆನ್ನಾಗಿಟ್ಟಿರಲಿ—ಇವು ಕ್ರಿಯಾಪದದ ಯಾವ ರೂಪ? ಧಾತುಗಳು ಯಾವುವು?

೨೯. ಶ್ರವಣಬೆಳುಗೊಳ

ಶ್ರವಣಬೆಳುಗೊಳ ಬಹಳ ಹಿಂದಿನ ಕಾಲದ ಊರು. ಅದು ಹಾಸನ ಡಿಸ್ಟ್ರಿಕ್ಟಿನಲ್ಲಿ ಚೆನ್ನರಾಯಪಟ್ಟಣದ ತಾಲ್ಲೂಕಿನಲ್ಲಿದೆ. ಈ ಊರು ಜೈನರಿಗೆ ಯಾತ್ರಾಸ್ಥಳ.

ಊರು ಇಂದ್ರಬೆಟ್ಟ ಮತ್ತು ಚಂದ್ರಬೆಟ್ಟಗಳ ನಡುವೆ ಇದೆ. ಇಂದ್ರಬೆಟ್ಟದಮೇಲೆ ಒಂದು ತೆಂಗಿನ ಮರದಷ್ಟು ಎತ್ತರವಾದ ವಿಗ್ರಹ ನಿಂತಿದೆ. ಇದೇ ಗೊಮ್ಮಟೇಶ್ವರ. ಇದನ್ನು ಜೈನರು ಪೂಜಿಸುತ್ತಾರೆ. ಈ ವಿಗ್ರಹವನ್ನು ಒಂದೇ ಕಲ್ಲಿನಲ್ಲಿ ಕೆತ್ತಿದೆ. ಮೊಣಕಾಲುಗಳವರೆಗೂ ಹುತ್ತ ಬೆಳೆದಿರುವಂತೆ ಶಿಲ್ಪಿ ತೋರಿಸಿದ್ದಾನೆ. ಕಲ್ಲಿನಲ್ಲೆ ಬಳ್ಳಿಗಳನ್ನು ಬಿಡಿಸಿ ಅವು ತೊಡೆ ತೋಳುಗಳನ್ನು ಸುತ್ತಿಕೊಂಡಿರುವ ಹಾಗೆ ಅವನು ಕೆತ್ತಿದ್ದಾನೆ.

ಈ ದೇವರು ತಪಸ್ಸುಮಾಡುತ್ತ ನಿಂತಿರುವಂತೆ ಕಾಣುತ್ತದೆ. ಈ ವಿಗ್ರಹವನ್ನು ಕೆತ್ತಿ ಸಾವಿರ ವರ್ಷಗಳ ಮೇಲಾದುವು. ಚಾಮುಂಡರಾಯನೆಂಬ ಮಂತ್ರಿ ಇದನ್ನು ಮಾಡಿಸಿದನೆಂದೂ ಅರಿಷ್ಟನೇಮಿ ಎಂಬವನು



ಕಲ್ಲಿನಲ್ಲಿ ಕೆತ್ತಿದನೆಂದೂ ಜನರು ಹೇಳುತ್ತಾರೆ. ಈ ವಿಗ್ರಹ ಬಹಳ ಎತ್ತರವಾಗಿ ಇರುವುದರಿಂದ ಬಹು ದೂರದವರೆಗೂ ಕಾಣುತ್ತದೆ.

ಗೊಮ್ಮಟೇಶ್ವರನಿಗೆ ಹನ್ನೆರಡು ವರ್ಷಕ್ಕೆ ಒಂದುಬಾರಿ ದೊಡ್ಡ ಅಭಿಷೇಕವಾಗುತ್ತದೆ. ಇದಕ್ಕೆ ಮಹಾಮಸ್ತಕಾಭಿಷೇಕ ಎಂದು ಹೆಸರು. ಇದನ್ನು ನೋಡುವುದಕ್ಕೆ ಹಿಂದೂದೇಶದ ನಾನಾ ಭಾಗಗಳಿಂದ ಜೈನರು ಶ್ರವಣಬೆಳುಗೊಳಕ್ಕೆ ಬರುತ್ತಾರೆ.

ಬೆಟ್ಟದ ಬುಡದಲ್ಲಿ ಒಂದು ಸೊಗಸಾದ ಕೊಳವಿದೆ. ಇದಕ್ಕೆ ಬೆಳುಗೊಳ ಎಂದು ಹೆಸರು. ಈ ಹೆಸರಿಂದಲೆ ಊರನ್ನು ಕರೆಯುತ್ತಾರೆ. ಜೈನರಿಗೆ ಪವಿತ್ರವಾದ ಕೊಳವಾದ್ದರಿಂದ ಶ್ರವಣಬೆಳುಗೊಳ ಎಂದು ಹೆಸರಾಯಿತು.

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಉತ್ತರ ದೇಶದಿಂದ ಭದ್ರಬಾಹು ಎಂಬ ಜೈನರ ಗುರು ಹೊರಟು ಇಲ್ಲಿಗೆ ಬಂದನು. ಆತನ ಜೊತೆಯಲ್ಲಿ ಚಂದ್ರಗುಪ್ತನೆಂಬ ಚಕ್ರವರ್ತಿ ಬಂದಿದ್ದನು. ಇವನ ಹೆಸರಿನಲ್ಲಿ ಚಂದ್ರಗುಪ್ತ ಬಸದಿ ಎಂದೂ ಗುರುವಿನ ಹೆಸರಿನಲ್ಲಿ ಭದ್ರಬಾಹು ಗುಹೆ ಎಂದೂ ಬೆಟ್ಟದಮೇಲಿವೆ.

ಶ್ರವಣಬೆಳುಗೊಳದಲ್ಲಿ ಜೈನರ ಗುರುಗಳಿದ್ದಾರೆ. ಹಿಂದಿನ ಕಾಲದಿಂದಲೂ ಅಲ್ಲಿ ಅನೇಕ ಜೈನ ಪಂಡಿತರು ವಾಸಮಾಡುತ್ತ ಇದ್ದಾರೆ. ಬೆಟ್ಟದಮೇಲೆ ಸೊಗಸಾದ ಬಸದಿಗಳಿವೆ. ಎಲ್ಲರೂ ನೋಡತಕ್ಕ ಸುಂದರ ವಿಗ್ರಹಗಳಿವೆ.

ಪ್ರಶ್ನೆ

ಶ್ರವಣಬೆಳುಗೊಳ ಎಂಬ ಹೆಸರು ಏಕೆ ಬಂತು? ಗೊಮ್ಮಟೇಶ್ವರನ ವಿಗ್ರಹ ಹೇಗಿದೆ? ಮಸ್ತಕಾಭಿಷೇಕ ಎಂದರೇನು? ಭದ್ರಬಾಹು, ಚಂದ್ರಗುಪ್ತ ಇವರು ಯಾರು? ಯಾತ್ರಾಸ್ಥಳವೆಂದರೇನು? ಜೈನರಿಗೆ—ಇದು ಯಾವ ವಿಭಕ್ತಿ? ಇದಕ್ಕೆ ಏಕವಚನವೇನು? ಪೂಜಿಸುತ್ತಾರೆ—ಇದು ಯಾವ ಕಾಲದ ಕ್ರಿಯಾಪದ? ಧಾತು ಯಾವುದು? ಇದಕ್ಕೆ ಭೂತಕಾಲ ಏನು? ವಿಧಿರೂಪವೇನು? ಇದು ಸಕರ್ಮಕವೆ? ಅಕರ್ಮಕವೆ? ಎಂದರೆ ಇದಕ್ಕೆ ಕರ್ಮಪದ ಬೇಕೆ, ಬೇಡವೆ? ಕಾಣು, ಕರೆ, ಕೆತ್ತು, ನಿಲ್ಲು, ಹೇಳು—ಈ ಧಾತುಗಳು ಅಕರ್ಮಕವೆ, ಸಕರ್ಮಕವೆ?

೪೦. ಕೆಂಪಯ್ಯ ಗೌಡ

ಸುಮಾರು ನಾನೂರು ವರ್ಷಗಳ ಹಿಂದೆ, ಪ್ರಸಿದ್ಧನಾದ ಕೆಂಪಯ್ಯ ಗೌಡನು ಬೆಂಗಳೂರು ಪ್ರಾಂತವನ್ನು ಆಳುತ್ತಿದ್ದನು. ಆತನು ಕೆಂಪನಂಜೇ ಗೌಡನ ಮಗನು. ಆಗಿನ ಕಾಲದಲ್ಲಿ ವಿಜಯನಗರದ ಅರಸುಗಳು ಪ್ರಬಲರಾಗಿದ್ದರು. ಆದುದರಿಂದ ಕೆಂಪಯ್ಯ ಗೌಡನು ಅವರಿಗೆ ಅಧೀನನಾಗಿ ಆಳುತ್ತಿದ್ದನು.

ಕೆಂಪಯ್ಯ ಗೌಡನು ಒಂದು ದಿನ ತನ್ನ ನಾಡಿನಲ್ಲಿ ಸಂಚಾರ ಹೊರಟನು. ಆತನು ಈಗಿನ ಬೆಂಗಳೂರಿಗೆ ಸಮೀಪದಲ್ಲಿ ನಿಂತನು. ಈ ಸ್ಥಳದಲ್ಲಿ ಒಂದು ಊರನ್ನು ಕಟ್ಟಿದರೆ ಅದು ದೊಡ್ಡ ಪಟ್ಟಣವಾಗುವುದೆಂದು ಅವನಿಗೆ ತೋರಿತು. ಆಗ ಜೋಯಿಸರು ಹೇಳಿದ ಹೊತ್ತಿಗೆ ಸರಿಯಾಗಿ ತಾನೆ ಏರನ್ನು ಕಟ್ಟಿಕೊಂಡು ಹೊರಟನು. ಹೊಸ ಊರಿನ ಕೋಟೆ, ಪೇಟೆ ಮತ್ತು ಬೀದಿಗಳ ಗುರುತನ್ನು ಮಾಡಿದನು. ಹೀಗೆ ಕಟ್ಟಿದ ಊರೇ ಈಗಿನ ಬೆಂಗಳೂರಾಗಿ ಬೆಳೆದಿದೆ. ಊರು ಎಷ್ಟು ದೂರ ಬೆಳೆಯಬಹುದು ಎಂಬುದನ್ನು ತೋರಿಸುವುದಕ್ಕೆ ನಾಲ್ಕು ದಿಕ್ಕಿಗೂ ನಾಲ್ಕು ವೈಯಾಳಿ ಶಿಖರಗಳನ್ನು ಕಟ್ಟಿಸಿದನು. ಆ ಶಿಖರಗಳು ಈಗಲೂ ಬೆಂಗಳೂರಲ್ಲಿ ಇವೆ. ಕೆಂಪಯ್ಯ ಗೌಡನು ಬಹಳ ದಯಾಳು. ಬೆಂಗಳೂರಿನಲ್ಲಿ ಮಣ್ಣಿನ

ಕೋಟೆಯನ್ನು ಆತನು ಕಟ್ಟಿಸುತ್ತಿದ್ದಾಗ ಹೆಬ್ಬಾಗಿಲು ನಿಲ್ಲದೆ ಬಿದ್ದು ಹೋಗುತ್ತಿತ್ತು. ಆಗ ಜನರು ಬಸಿರಿಯನ್ನು ಬಲಿ ಕೊಟ್ಟರೆ ಅದು ನಿಲ್ಲುವುದೆಂದು ಹೇಳಿದರು. "ನಾನು ಈ ಕೆಟ್ಟ ಕೆಲಸ ಮಾಡುವುದಿಲ್ಲ. ಹೆಬ್ಬಾಗಿಲೇ ಬೇಡ" ಎಂದು ಕೆಂಪಯ್ಯ ಗೌಡನು ಹೇಳಿಬಿಟ್ಟನು. ಅನೇಕರು ಆತನಿಗೆ ಹೇಳಿದರು. ಆದರೂ ಸ್ತ್ರೀ ಹತ್ಯಕ್ಕೆ ಆತನು ಒಪ್ಪಲಿಲ್ಲ.


ಈ ಸಂಗತಿ ಕೆಂಪಯ್ಯ ಗೌಡನ ಸೊಸೆಗೆ ತಿಳಿಯಿತು. ಆಕೆ ಆಗ ಬಸಿರಿಯಾಗಿದ್ದಳು. ಕೋಟೆಗೆ ಬಾಗಿಲು ಇಲ್ಲದಿದ್ದರೆ ಊರಿಗೆ ಅಪಾಯವೆಂದು ಆಕೆಗೆ ತಿಳಿದಿತ್ತು. ಆಕೆ ಯಾರಿಗೂ ಹೇಳದೆ ಮಧ್ಯ ರಾತ್ರಿಯಲ್ಲಿ ಹೋಗಿ ಕತ್ತಿಯಿಂದ ಇರಿದುಕೊಂಡು ಬಲಿಯಾದಳು. ಮರುದಿನ ಬೆಳಗ್ಗೆ ಕೆಂಪಯ್ಯ ಗೌಡನಿಗೆ ಸಮಾಚಾರ ತಿಳಿಯಿತು. ಆತ ಬಹಳ ವ್ಯಸನಪಟ್ಟನು. ಸೊಸೆಯ ಜ್ಞಾಪಕ ಇರುವಂತೆ ಕಲ್ಲು ಪ್ರತಿಮೆ ಮಾಡಿಸಿದನು. ಅದು ಈಗಲೂ ಬೆಂಗಳೂರಿಗೆ ಪೂರ್ವ ದಿಕ್ಕಿನಲ್ಲಿ ಕೋರಮಂಗಲದಲ್ಲಿ ಇದೆ.

ವಿಜಯನಗರದ ದೊರೆಯಾದ ಅಚ್ಯುತರಾಯನು ಕೆಂಪಯ್ಯ ಗೌಡನ ಗುಣಗಳನ್ನೂ ಆಳಿಕೆಯನ್ನೂ ಮೆಚ್ಚಿದನು. ಅವನ ಕೈಕೆಳಗೆ ಜನರು ಸುಖವಾಗಿರುತ್ತಾರೆಂದು ಬೆಂಗಳೂರಿನ ಸುತ್ತಲ ಸೀಮೆಯನ್ನೆಲ್ಲ ಬಿಟ್ಟು ಕೊಟ್ಟನು. ಹೀಗೆ ಹೆಚ್ಚಾಗಿ ಸೇರಿದ ಸೀಮೆಯಿಂದ ಕೆಂಪಯ್ಯ ಗೌಡನಿಗೆ ಬಹಳ ಆದಾಯ ಬರುತ್ತಿತ್ತು. ಆತನು ಆ ಹಣದಿಂದ ಅನೇಕ ಧರ್ಮ ಕಾರ್ಯಗಳನ್ನು ಮಾಡಿದನು. ಬೆಂಗಳೂರಲ್ಲಿರುವ ಕೆಂಪಾಂಬುಧಿ ಕೆರೆ, ದೊಡ್ಡ ಬಸವಣ್ಣನ ದೇವಸ್ಥಾನ, ಗವಿ ಗಂಗಾಧರೇಶನ ಗುಡಿ—ಇವುಗಳನ್ನು ಆತನೆ ಮಾಡಿಸಿದ್ದು. ಆದುದರಿಂದ ಜನರು ಕೆಂಪಯ್ಯ ಗೌಡನನ್ನು ಈಗಲೂ ಜ್ಞಾಪಕದಲ್ಲಿ ಇಟ್ಟುಕೊಂಡಿದ್ದಾರೆ.

ಪ್ರಶ್ನೆ

ಕೆಂಪಯ್ಯ ಗೌಡನ ಚರಿತ್ರೆಯನ್ನು ತಿಳಿಸಿ. ಆತನ ಗುಣಗಳನ್ನು ಹೇಳಿ. ಆತನ ಸೊಸೆ ಏನುಮಾಡಿದಳು? ಕೆಂಪಯ್ಯಗೌಡನು ಯಾವ ಯಾವ ಧರ್ಮಕಾರ್ಯಗಳನ್ನು ಮಾಡಿಸಿದನು? ವೈಯಾಳಿಶಿಖರ, ಆದಾಯ, ಸ್ತ್ರೀ ಹತ್ಯ—ಎಂದರೇನು? ಮಾಡಿಸಿದ್ದು—ಇದು ನಾಮಪದವೆ, ಕ್ರಿಯಾಪದವೆ ಯೋಚನೆಮಾಡಿ ಹೇಳಿ. ಹೀಗೇ ಬೆಳೆವಳಿಗೆ, ಆಳಿಕೆ, ಹಾಡುಗಾರಿಕೆ ಮುಂತಾದ ಶಬ್ದಗಳು ಕ್ರಿಯಾರ್ಥದ ಧಾತುವಿನಿಂದ ಹುಟ್ಟಿದ ನಾಮಪದಗಳು. ಮಾಡು, ಬೆಳೆ, ಆಳು, ಹಾಡು— ಈ ಧಾತುಗಳು ಸ್ಪಷ್ಟವಾಗಿ ಕಾಣುತ್ತವೆ.

೪೧. ಬೆಂಗಳೂರು



ಮೈಸೂರು ಸಂಸ್ಥಾನವು ಸುಮಾರು ಐವತ್ತು ವರ್ಷಗಳ ಕಾಲ ಕಮಿಷನರುಗಳೆಂಬ ಇಂಗ್ಲೀಷ್ ಅಧಿಕಾರಿಗಳ ಕೈಯಲ್ಲಿತ್ತು. ಅವರು ಬೆಂಗಳೂರಿನಲ್ಲಿ ಸರ್ಕಾರದ ಮುಖ್ಯವಾದ ಕಚೇರಿಗಳನ್ನು ಕಟ್ಟಿದರು. ಆದುದರಿಂದ ಬೆಂಗಳೂರು ಮೈಸೂರು ಸರ್ಕಾರದ ಮುಖ್ಯ ಸ್ಥಳವಾಯಿತು. ಬೆಂಗಳೂರಿನ ಹವ ತಂಪಾಗಿದೆ. ಆದುದರಿಂದ ಇದು ಬ್ರಿಟಿಷ್ ರೆಸಿಡೆಂಟರೂ ಅವರ ಸೈನ್ಯವೂ ಇರುವ ಸ್ಥಳವಾಯಿತು.

ಈಗ ಬೆಂಗಳೂರು ಮೈಸೂರು ಸಂಸ್ಥಾನದಲ್ಲೆಲ್ಲ ದೊಡ್ಡ ಪಟ್ಟಣವಾಗಿದೆ. ಇದರಲ್ಲಿ ದಂಡು ಮತ್ತು ಸಿಟಿ ಎಂಬ ಎರಡು ಭಾಗಗಳಿವೆ. 'ಸಿಟಿ' (ಪಟ್ಟಣ) ನಮ್ಮ ಸರ್ಕಾರಕ್ಕೆ ಸೇರಿದೆ. ದಂಡು ಬ್ರಿಟಿಷರಿಗೆ ಸೇರಿದೆ. ಸಿಟಿ ಎಂಬ ಭಾಗದಲ್ಲಿ ಸರ್ಕಾರದ ಮುಖ್ಯ ಕಚೇರಿಯಾದ ಅಠಾರಾ ಕಚೇರಿಯೂ ಇತರ ಕಚೇರಿಗಳೂ ಇವೆ.

ಬೆಂಗಳೂರಿನಲ್ಲಿ ನೋಡತಕ್ಕ ಸ್ಥಳಗಳು ಹಲವಿವೆ. ಶ್ರೀಮನ್ಮಹಾರಾಜರ ಅರಮನೆ, ಟೀಪುಸುಲ್ತಾನನ ಅರಮನೆ, ಹಿಂದಿನ ಕಾಲದ ಕೋಟೆಯ ಭಾಗಗಳು, ಲಾಲ್‌ಬಾಗ್ ಎಂಬ ತೋಟ, ಮ್ಯೂಸಿಯಂ ಎಂಬ ವಸ್ತು ಸಂಗ್ರಹಶಾಲೆ, ಕಾಲೇಜುಗಳು, ಆಸ್ಪತ್ರೆಗಳು, ಮುಂತಾಗಿ ಹಲವು ಇವೆ.

ಸಿಟಿ ಎಂಬ ಭಾಗವನ್ನು ಹಲವು ಪೇಟೆಗಳನ್ನಾಗಿ ವಿಂಗಡಿಸಿದ್ದಾರೆ. ತರಗಿನಪೇಟೆ, ಚಿಕ್ಕಪೇಟೆ ಮತ್ತು ದೊಡ್ಡಪೇಟೆಗಳಲ್ಲಿ ಅಂಗಡಿಗಳು ಹೆಚ್ಚು.

ಊರು ಹೆಚ್ಚಾಗಿ ಬೆಳೆಯುತ್ತಿರುವುದರಿಂದ ಚಾಮರಾಜಪೇಟೆ, ಬಸವನ ಗುಡಿ, ವಿಶ್ವೇಶ್ವರಪುರ, ಶಂಕರಪುರ, ಶೇಷಾದ್ರಿಪುರ, ಮಲ್ಲೇಶ್ವರ ಎಂದು ಮುಂತಾಗಿ ಬಡಾವಣೆಗಳನ್ನು ಕಟ್ಟಿದ್ದಾರೆ.

ಬೆಂಗಳೂರಿಗೆ ಕೊಳಾಯಿಗಳ ಮೂಲಕ ಶೋಧಿಸಿದ ನೀರನ್ನು ಒದಗಿಸುತ್ತಿದಾರೆ. ಈಗ ಈ ನೀರು ತಿಪ್ಪಗೊಂಡನ ಹಳ್ಳಿಯಲ್ಲಿ ಹೊಸದಾಗಿ ಕಟ್ಟಿರುವ ಕೆರೆಯಿಂದ ದೊರೆಯುತ್ತಿದೆ. ಬೀದಿಗಳನ್ನೂ ಮನೆಗಳನ್ನೂ ಬೆಳಗುವುದಕ್ಕೆ ವಿದ್ಯುದ್ದೀಪಗಳನ್ನು ಒದಗಿಸಿದ್ದಾರೆ. ಇದಕ್ಕೆ ಬೇಕಾದ ವಿದ್ಯುಚ್ಛಕ್ತಿಯನ್ನು ತಂತಿಗಳ ಮೂಲಕ ಶಿವನಸಮುದ್ರ ದಿಂದ ತಂದಿದ್ದಾರೆ.

ಬೆಂಗಳೂರು ಒಳ್ಳೆಯ ವ್ಯಾಪಾರಸ್ಥಳ. ಇದು ಒಳ್ಳೆಯ ಕೈಗಾರಿಕೆಯ ಸ್ಥಳವೂ ಆಗಿದೆ. ಸಾಬೂನಿನ ಕಾರ್ಖಾನೆಗಳು, ಹತ್ತಿಯ ಮತ್ತು ಉಣ್ಣೆಬಟ್ಟೆಗಳ ಕಾರ್ಖಾನೆಗಳು, ಪಾತ್ರೆಗಳ ಕಾರ್ಖಾನೆಗಳು ಎಂದು ಮುಂತಾಗಿ ಹಲವು ಬೆಂಗಳೂರಲ್ಲಿ ಇವೆ. ಬೆಂಗಳೂರಿಂದ ಎಲ್ಲ ಕಡೆಗಳಿಗೂ ರೈಲು ಗಾಡಿಗಳೂ, ಬಸ್ಸುಗಳೂ ಹೊರಡುತ್ತವೆ.

ತಿಳಿವಳಿಕೆ ವಿಚಾರ

ನಾವು ಕನ್ನಡ ಮಾತಾಡುವಾಗ ಕನ್ನಡ ಮಾತುಗಳನ್ನು ಬಳಸುತ್ತೇವೆ. ಪೂರ್ವಕಾಲದಿಂದಲೂ ಅನೇಕ ಸಂಸ್ಕೃತ ಶಬ್ದಗಳೂ ಕನ್ನಡಕ್ಕೆ ಸೇರಿಹೋಗಿವೆ. ಅವನ್ನು ಉಪಯೋಗಿಸುತ್ತೇವೆ. ಮುಸಲ್ಮಾನರು ನಮ್ಮಲ್ಲಿ ಬೆರತು ಆಳಿಕೆ ಮಾಡಿದಾಗಿನಿಂದ ಹಿಂದೂಸ್ತಾನಿ ಮಾತುಗಳು ಬೆರೆದಿವೆ. ಈಗ ಇಂಗ್ಲಿಷರ ರಾಜ್ಯಭಾರದಲ್ಲಿ ಎಷ್ಟೋ ಇಂಗ್ಲೀಷ್ ಮಾತುಗಳೂ ಸೇರುತ್ತಿವೆ. ಈ ಪಾಠದಲ್ಲಿ ಐವತ್ತು, ಕಟ್ಟಿದರು, ನೋಡತಕ್ಕ, ಹಲವು, ಗುಡಿ, ನೀರು, ಮನೆ, ತೋಟ— ಇವು ಕನ್ನಡ ಮಾತುಗಳು. ಸಂಸ್ಥಾನ, ಮುಖ್ಯಸ್ಥಳ, ಪಟ್ಟಣ, ಪುರ, ವಿದ್ಯುದ್ದೀಪ, ವ್ಯಾಪಾರ, ಪಾತ್ರೆ—ಇವು ಸಂಸ್ಕೃತ ಶಬ್ದಗಳು. ಕಚೇರಿ, ಸರ್ಕಾರ, ಅಠಾರಾ, ಬಡಾವಣೆ, ಕಾರ್ಖಾನೆ, ಗಾಡಿ—ಇವು ಹಿಂದೂಸ್ತಾನಿ ಮಾತುಗಳು. ಕಮಿಷನರ್, ಸಿಟಿ, ಕಾಲೇಜು, ಆಸ್ಪತ್ರೆ (ಹಾಸ್ಪಿಟಲ್), ಬಸ್ಸು—ಇವು ಇಂಗ್ಲೀಷ್ ಮಾತುಗಳು.

೪೨. ದೀವಳಿಗೆ ಹಬ್ಬ

ನವರಾತ್ರಿಯಂತೆ ದೀವಳಿಗೆಯೂ ಹಿಂದುಗಳಿಗೆ ಮುಖ್ಯವಾದ ಹಬ್ಬ. ಆಶ್ವಯುಜ ಬಹುಳ ಗಳನೆಯ ದಿವಸ ಶ್ರೀ ಕೃಷ್ಣನು ನರಕನೆಂಬ ರಾಕ್ಷಸನನ್ನು ಕೊಂದನು. ಸಾಯುವಾಗ ಆ ರಾಕ್ಷಸನು "ಇಂದಿನಿಂದ ಮೂರು ದಿವಸ, ಜನರು ಹಬ್ಬಮಾಡಿಕೊಂಡು ಸಂತೋಷವಾಗಿರಲಿ. ಹಾಗೆ ಅಪ್ಪಣೆಮಾಡಬೇಕು" ಎಂದು ಶ್ರೀ ಕೃಷ್ಣನನ್ನು ಬೇಡಿಕೊಂಡನು. ಶ್ರೀ ಕೃಷ್ಣನು ಹಾಗೆಯೆ ಅಪ್ಪಣೆಮಾಡಿದನು. ಎಲ್ಲರೂ ಚತುರ್ದಶಿಯಿಂದ ಮೂರು ದಿವಸ ಹಬ್ಬಮಾಡುತ್ತಾರೆ. ಕಾರ್ತಿಕ ಶುದ್ಧ ಪಾಡ್ಯಮಿ ಈ ಹಬ್ಬದ ಕಡೆಯ ದಿನ. ಇದೇ ಬಲಿಪಾಡ್ಯಮಿ.

ಚತುರ್ದಶಿಯ ದಿವಸ ಹೊತ್ತು ಹುಟ್ಟುವುದಕ್ಕಿಂತ ಮುಂಚೆ ಎಲ್ಲರೂ ಅಭ್ಯಂಜನ ಮಾಡುತ್ತಾರೆ. ದೇವಸ್ಥಾನಗಳಿಗೆ ಹೋಗಿ ದೇವರ ದರ್ಶನಮಾಡುತ್ತಾರೆ. ನೆಂಟರಿಷ್ಟರ ಮನೆಗಳಿಗೆ ಹೋಗಿ ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಾರೆ.

ಈ ಮೂರು ದಿವಸ ಎಲ್ಲ ಕಡೆಗಳಲ್ಲೂ ಸಾಲು ಸಾಲಾಗಿ ದೀಪಗಳನ್ನು ಹತ್ತಿಸುತ್ತಾರೆ. ಆದುದರಿಂದಲೆ ಈ ಹಬ್ಬಕ್ಕೆ ದೀಪಾವಳಿ ಅಥವಾ ದೀವಳಿಗೆ ಎಂದು ಹೆಸರು. ದೇವಸ್ಥಾನಗಳೂ, ಮನೆಗಳೂ, ಅಂಗಡಿಗಳೂ, ಬೀದಿಗಳೂ ಆಗ ದೀಪದ ಸಾಲುಗಳಿಂದ ಚೆಲುವಾಗಿ ಕಾಣುತ್ತವೆ. ಮೈಸೂರಿನಲ್ಲಿ ಅರಮನೆಯ ವಿದ್ಯುದ್ದೀಪಗಳ ಸೊಗಸನ್ನು ಹೇಳತೀರದು.

ಈ ಕಾಲದಲ್ಲಿ ಕೆರೆ ಕಟ್ಟೆಗಳು ತುಂಬಿ ತೀಯಾಗಿರುತ್ತವೆ. ಹೊಲ ಗದ್ದೆಗಳಲ್ಲಿ ಪೈರುಪಚ್ಚೆಗಳು ಹುಲುಸಾಗಿ ಬೆಳೆದು ನಿಂತಿರುತ್ತವೆ. ಜನರೆಲ್ಲರೂ ಸಂತೋಷವಾಗಿರುತ್ತಾರೆ. ಬಲಿಚಕ್ರವರ್ತಿ ಪಾಡ್ಯದ ದಿನ ಬಂದು, ಪೈರು ಪಚ್ಚೆಗಳನ್ನು ನೋಡಿ ಸಂತೋಷಪಡುತ್ತಾನೆ, ಎಂದು ಪುರಾಣದಲ್ಲಿ ಹೇಳಿದೆ. ಬಲಿಪಾಡ್ಯಮಿಯ ಸಾಯಂಕಾಲ ಬಲಿಪೂಜೆ ನಡೆಯುತ್ತದೆ.

ದೀವಳಿಗೆಯ ಹಬ್ಬಕ್ಕೆ ಹೊಸದಾಗಿ ಮದುವೆಯಾದ ಅಳಿಯನನ್ನು ಕರೆಸುತ್ತಾರೆ. ಮಗಳನ್ನೂ ಅಳಿಯನನ್ನೂ ಹಸೆಯಮೇಲೆ ಕೂಡಿಸಿ ಆರತಿ ಎತ್ತುತ್ತಾರೆ. ಮೈದುನರು ಭಾವನೊಡನೆ ಹಾಸ್ಯಮಾಡುತ್ತಾರೆ. ಹುಡುಗರೆಲ್ಲ ಪಟಾಕಿ, ಬಾಣ ಬಿರುಸು, ಮತಾಪುಗಳನ್ನು ಹಚ್ಚಿ ನಲಿದಾಡುತ್ತಾರೆ.

ಟಿಪ್ಪಣಿ

ಈ ಪಾಠದಿಂದ ಮುಂದಕ್ಕೆ ಉಪಾಧ್ಯಾಯರು ಉಚಿತವಾದ ಪ್ರಶ್ನೆಗಳನ್ನು ತಾವೇ ನೋಡಿ, ಇದುವರೆಗೆ ಹೇಳಿದ ವಿಷಯಗಳು ಮನದಟ್ಟಾಗುವಂತೆ ಕೇಳಬೇಕು. ೧-೨ನೆಯ ಪುಸ್ತಕಗಳನ್ನು ಮುಗಿಸುವುದರೊಳಗೆ ವಿದ್ಯಾರ್ಥಿಗಳಿಗೆ ವ್ಯಾಕರಣದ ಮತ್ತು ಪಾಠಗಳ ವಿಷಯ ಇಷ್ಟುಮಟ್ಟಿಗೆ ತಿಳಿದಿರುವಂತೆ ನೋಡಿ ಕೊಳ್ಳಬೇಕು.

೪೩. ಬಣ್ಣದ ಸಾಮಾನುಗಳು

ತಂದೆ—ಕಮಲು! ಇಲ್ಲಿ ನೋಡು ನಿನಗೆ ಬಣ್ಣದ ಸಾಮಾನು ಗಳನ್ನು ತಂದಿದ್ದೇನೆ.

ಕಮಲು—ಈ ಸಾಮಾನು ಎಷ್ಟು ಚೆನ್ನಾಗಿದೆ! ಈ ತೊಟ್ಟಿಲು, ಚೆಂಬು, ಬೀಸುವ ಕಲ್ಲು, ಬಾವಿ ಇವೆಲ್ಲ ಎಷ್ಟು ಚೆನ್ನಾಗಿವೆ! ಇವುಗಳನ್ನು ಎಲ್ಲಿಂದ ತಂದೆಯಪ್ಪ?

ತಂ.—ಚೆನ್ನಪಟ್ಟಣದಿಂದ ತಂದೆನಮ್ಮ. ಮೈಸೂರಿಂದ ರೈಲಿನಲ್ಲಿ ಬರುವಾಗ ಚೆನ್ನಪಟ್ಟಣದ ಸ್ಟೇಷನ್ನಿನಲ್ಲಿ ಇವುಗಳನ್ನು ನಿನಗಾಗಿ ಕೊಂಡುಕೊಂಡೆ.

ಕ.—ನೀನು ಬಹಳ ಒಳ್ಳೆಯವನಪ್ಪ! ಈ ಸಾಮಾನನ್ನು ಹೇಗೆ ಮಾಡುತ್ತಾರೆ. ಸೊಗಸಾದ ಈ ಕೆಂಪು, ಹಸುರು, ಹಳದಿ, ನೀಲಿ ಬಣ್ಣಗಳು ಹೇಗೆ ಬರುತ್ತವೆ?

ತಂ.—ಚೆನ್ನಪಟ್ಟಣದ ಸುತ್ತಲೂ ಹಾಲೆಮರ ವಿಶೇಷವಾಗಿ ಬೆಳೆಯುತ್ತದೆ. ಆ ಮರ ಬಲು ನಯ. ಅದರಿಂದ ಈ ಬಣ್ಣದ ಸಾಮಾನು ಗಳನ್ನೆಲ್ಲ ಮಾಡುತ್ತಾರೆ.

ಕ.—ದೊಡ್ಡ ಮರದಿಂದ ಈ ಚಿಕ್ಕ ಸಾಮಾನನ್ನು ಹೇಗೆ ಮಾಡುತ್ತಾರೆ?

ತಂ.—ಆ ಮರವನ್ನು ಚಿಕ್ಕ ತುಂಡುಗಳಾಗಿ ಕತ್ತರಿಸಿಕೊಳ್ಳುತ್ತಾರೆ. ಆಮೇಲೆ ಆ ತುಂಡುಗಳನ್ನು ಕಡೆದು ಬೇಕಾದ ಆಕಾರಕ್ಕೆ ತಿರುಗಿಸಿ ಕೊಳ್ಳುತ್ತಾರೆ. ಹೀಗೆ ಆಕಾರಕ್ಕೆ ಬಂದ ಸಾಮಾನು ತಿರುಗುತ್ತಿರುವಾಗ ಬಣ್ಣದ ಅರಗಿನ ಕಡ್ಡಿಯನ್ನು ಅದರಮೇಲೆ ಒತ್ತಿ ಹಿಡಿಯುತ್ತಾರೆ. ಆಗ

ಸಾಮಾನಿಗೆ ಬಣ್ಣ ಕಟ್ಟುತ್ತದೆ. ಆಮೇಲೆ ಒಣಗಿದ ಕೇದಗೆ ಗರಿಯನ್ನು ಒತ್ತಿಹಿಡಿದು ಸಾಮಾನನ್ನು ತಿರುಗಿಸಿದರೆ ಬಣ್ಣ ಸಮನಾಗಿ ಹರಡಿ ಕೊಳ್ಳುತ್ತದೆ. ಕೆಂಪು, ಹಳದಿ ಮತ್ತು ನೀಲಿ ಬಣ್ಣಗಳಿದ್ದರೆ, ಇವುಗಳ ಬೆರಕೆಯಿಂದ ಬೇಕಾದ ಬಣ್ಣ ಮಾಡಿಕೊಳ್ಳಬಹುದು.

ಕ.—ಈ ಕಿತ್ತಿಳೆ ಹಣ್ಣಿನ ಬಣ್ಣ ಹೇಗಾಗುತ್ತದೆ?

ತಂ.—ಕೆಂಪು ಮತ್ತು ಹಳದಿ ಬಣ್ಣಗಳನ್ನು ಬೆರಸಿದರೆ ಇದು ದೊರೆಯುತ್ತದೆ.

ಕ.—ಈ ನೇರಿಳೆ ಹಣ್ಣಿನ ಬಣ್ಣ ಹೇಗಾಗುತ್ತದೆ?

ತಂ.—ಕೆಂಪು ಮತ್ತು ನೀಲಿ ಬಣ್ಣಗಳನ್ನು ಬೆರಸಿದರೆ ಇದು ಆಗುತ್ತದೆ. ಹೀಗೆಯೆ ಬಣ್ಣಗಳನ್ನು ಬೆರಸಿ ಬೇಕಾದುದನ್ನು ಮಾಡಿ ಕೊಳ್ಳಬಹುದು.

ಕ.—ಈ ಸಾಮಾನನ್ನು ಅಮ್ಮನಿಗೆ ತೋರಿಸುತ್ತೇನೆ. ನವರಾತ್ರಿ ಹಬ್ಬದಲ್ಲಿ ಬೊಂಬೆಗಳ ಜೊತೆಯಲ್ಲಿ ಅಲಂಕಾರವಾಗಿ ಇಡುತ್ತೇನೆ. ಹಬ್ಬ ಬರುವವರೆಗೂ ಬೀರುವಿನಲ್ಲಿ ಜೋಪಾನವಾಗಿ ಇಟ್ಟಿರುತ್ತೇನೆ.

ತಂ.—ನೀನು ಜಾಣೆ. ಹಾಗೆಯೆ ಮಾಡಮ್ಮ.

೩೩. ಪಂಚತಂತ್ರದ ಕಥೆ

ಪೂರ್ವಕಾಲದಲ್ಲಿ ಪಾಟಲೀಪುರವೆಂಬ ಹೆಸರುವಾಸಿಯಾದ ಪಟ್ಟಣ ವಿತ್ತು. ಆ ಪಟ್ಟಣದಲ್ಲಿ ಸುದರ್ಶನನೆಂಬ ದೊರೆ ಆಳುತ್ತಿದ್ದನು. ಆತನು ಬಹು ಬುದ್ಧಿವಂತ ಮತ್ತು ಧೈರ್ಯಶಾಲಿ. ಆತನಿಗೆ ದೊಡ್ಡ ರಾಜ್ಯವಿತ್ತು, ಬೇಕಾದಷ್ಟು ಐಶ್ವರ್ಯವಿತ್ತು. ಆದರೆ ಆತನ ಮಕ್ಕಳು ಕೆಟ್ಟನಡತೆ ಯವರಾಗಿ ಇದ್ದರು. ಅವರು ತಾಯಿತಂದೆಗಳ ಮಾತನ್ನು ಕೇಳುತ್ತಿರಲಿಲ್ಲ; ಯಾವ ಪಾಠಗಳನ್ನೂ ಕಲಿಯುತ್ತಿರಲಿಲ್ಲ. ಆದುದರಿಂದ ರಾಜನಿಗೆ ಬಹಳ ವ್ಯಸನವಾಗಿತ್ತು.

ಒಂದು ದಿನ ರಾಜನು ಸಭೆಯಲ್ಲಿ ಕುಳಿತಿದ್ದನು. ಮಕ್ಕಳ ಚಿಂತೆ ಯಿಂದ ಕೊರಗುತ್ತ, "ನನ್ನ ಮಕ್ಕಳನ್ನು ತಿದ್ದಿ ಒಳ್ಳೆಯವರನ್ನಾಗಿಯೂ ಬುದ್ಧಿವಂತರನ್ನಾಗಿಯೂ ಮಾಡುವವರು ಈ ಸಭೆಯಲ್ಲಿ ಯಾರೂ

ಇಲ್ಲವೇ?" ಎಂದು ಕೇಳಿದನು. ಆಗ ವಿಷ್ಣುಶರ್ಮನೆಂಬ ಬ್ರಾಹ್ಮಣನು ಎದ್ದು ನಿಂತು "ಮಹಾಸ್ವಾಮಿ ನೀವು ಏಕೆ ಹೀಗೆ ವ್ಯಸನಪಡುತ್ತೀರಿ? ನಿಮ್ಮ ಕುಮಾರರನ್ನು ಆರು ತಿಂಗಳು ಕಾಲ ನನ್ನ ವಶದಲ್ಲಿ ಬಿಡಿ. ನಾನು ಅವರನ್ನು ಬುದ್ಧಿವಂತರನ್ನಾಗಿಯೂ ಗುಣವಂತರನ್ನಾಗಿಯೂ ಮಾಡುತ್ತೇನೆ" ಎಂದು ಹೇಳಿದನು.

ಆ ಮಾತುಗಳನ್ನು ಕೇಳಿ ದೊರೆಗೆ ಬಹಳ ಸಂತೋಷವಾಯಿತು. ತನ್ನ ಮಕ್ಕಳನ್ನು ಆತನ ವಶದಲ್ಲಿ ಬಿಟ್ಟನು. ವಿಷ್ಣುಶರ್ಮನು ರಾಜಪುತ್ರರಿಗೆ ಪಾಠಗಳನ್ನು ಕಲಿಸಲಿಲ್ಲ. ಅವರನ್ನು ಸುತ್ತಲೂ ಕೂಡಿಸಿಕೊಂಡು ಕಥೆಗಳನ್ನು ಹೇಳಿದನು. ಹುಡುಗರಿಗೆ ಕಥೆ ಎಂದರೆ ಯಾವಾಗಲೂ ಬಹಳ ಇಷ್ಟ. ಆ ರಾಜಕುಮಾರರು ಸಂತೋಷದಿಂದ ಕಥೆಗಳನ್ನು ಕೇಳುತ್ತ ಕುಳಿತರು. ಕಥೆಗಳ ಮೂಲಕ ಅನೇಕ ವಿಷಯಗಳನ್ನು ದೊರೆಯ ಮಕ್ಕಳು ತಿಳಿದರು. ಆರು ತಿಂಗಳ ಕಾಲದಲ್ಲಿ ಬುದ್ಧಿವಂತರೂ ಒಳ್ಳೆಯ ನಡತೆಯವರೂ ಆದರು.

ತನ್ನ ಮಕ್ಕಳಲ್ಲಿ ಆದ ಮಾರ್ಪಾಟನ್ನು ನೋಡಿ ದೊರೆಗೆ ಬಹಳ ಸಂತೋಷವಾಯಿತು. ದೊರೆ ಆ ಬ್ರಾಹ್ಮಣನಿಗೆ ಬಹಳ ಮರ್ಯಾದೆಮಾಡಿದನು. ವಿಷ್ಣುಶರ್ಮನು ಹೇಳಿದ ಕಥೆಗಳು ಪಂಚತಂತ್ರವೆಂಬ ಪುಸ್ತಕದಲ್ಲಿ ಬರೆದಿವೆ. ರಾಜರಿಗೆ ಬೇಕಾದ ನೀತಿಗಳನ್ನು ಅವು ತಿಳಿಸುವುವು. ಒಳ್ಳೆಯ ಸ್ನೇಹಿತರನ್ನು ಸಂಪಾದಿಸುವುದು, ಕೆಟ್ಟವರನ್ನು ಬಿಡುವುದು, ಶತ್ರುಗಳನ್ನು ಜಯಿಸುವುದು—ಇವೇ ಮುಂತಾದುವನ್ನು ಆ ಕಥೆಗಳು ತಿಳಿಸುತ್ತವೆ.

೪೫. ಸಸ್ಯವರ್ಗ

ಈ ದಿವಸ ತೋಟದಲ್ಲಿ ಸಂಚಾರಮಾಡೋಣ. ತೋಟದಲ್ಲಿ ನಾನಾ ಜಾತಿಯ ಮರಗಳೂ, ಗಿಡಗಳೂ, ಬಳ್ಳಿಗಳೂ, ಪೊದೆಗಳೂ ಇವೆ. ಇವೆಲ್ಲ ಸಸ್ಯಗಳೆಂದು ಹೆಸರು ಪಡೆದಿವೆ.

ಈ ಮಾವಿನ ಮರ ಎಷ್ಟು ದೊಡ್ಡದಾಗಿ ಬೆಳೆದಿದೆ! ಸಾಮಾನ್ಯವಾಗಿ ಮರಗಳು ಹೀಗೆ ದೊಡ್ಡದಾಗಿಯೂ ಎತ್ತರವಾಗಿಯೂ ಬೆಳೆಯುತ್ತವೆ. ಅವು ಬಹುಕಾಲವೂ ಬದುಕುತ್ತವೆ. ಆಲದ ಮರ, ಬೇವಿನ ಮರ, ಹುಣಿಸೆಯ ಮರ, ಇವೆಲ್ಲ ಹೀಗೆ ಬೆಳೆಯುತ್ತವೆ. ಇವುಗಳ ತಾಳು ದೊಡ್ಡದು. ಮೇಲೆ

ದಪ್ಪವಾದ ಮತ್ತು ಗಟ್ಟಿಯಾದ ತೊಗಟೆಯಿರುತ್ತದೆ. ಕೊಂಬೆಗಳು ನೆಲವನ್ನು ಬಿಟ್ಟು ಎತ್ತರದಲ್ಲಿ ಹರಡಿರುತ್ತವೆ. ಬೇರುಗಳು ಕವಲು ಕವಲಾಗಿ ನೆಲದಲ್ಲಿ ಆಳವಾಗಿಯೂ ಅಗಲವಾಗಿಯೂ ಹರಡಿರುತ್ತವೆ.

ಗಿಡಗಳು ಎತ್ತರವಾಗಿ ಬೆಳೆಯುವುದಿಲ್ಲ. ಮರಗಳಂತೆ ಬಹುಕಾಲ ಜೀವಿಸುವುದೂ ಇಲ್ಲ. ಅವು ಹತ್ತು ಹದಿನೈದು ಅಡಿ ಎತ್ತರ ಮಾತ್ರ ಇರುತ್ತವೆ. ಕೆಲವು ವರ್ಷಗಳು ಮಾತ್ರ ಬಾಳುತ್ತವೆ. ಪಾರಿಜಾತದ ಗಿಡ, ದಾಳಿಂಬೆ ಗಿಡ, ಜಡೆಹತ್ತಿಯ ಗಿಡ ಮುಂತಾದುವು ಈ ಜಾತಿಗೆ ಸೇರಿವೆ.

ಕೆಲವು ಗಿಡಗಳು ಪೊದೆಗಳಾಗಿ ಬೆಳೆಯುವುದುಂಟು. ನಿಂಬೆಯ ಗಿಡ, ಗುಲಾಬಿಯ ಗಿಡ, ಲಂಟಾಣ, ಮುಂತಾದುವು ಈ ಗುಂಪಿಗೆ ಸೇರಿವೆ. ಇವುಗಳಲ್ಲಿ ಕೊಂಬೆಗಳು ತಾಳಿನ ಬುಡದಿಂದಲೆ ಒಡೆಯುತ್ತವೆ; ಸ್ವಲ್ಪ ಎತ್ತರದಲ್ಲಿಯೆ ಸುತ್ತಲೂ ಹರಡುತ್ತವೆ, ಪೊದೆಗಳು ಸಾಮಾನ್ಯವಾಗಿ ಹದಿನೈದು ಅಡಿಗಳವರೆಗೂ ಬೆಳೆಯುವುದುಂಟು.

ಕೆಲವು ಸಸಿಗಳು ಬಳ್ಳಿಗಳಾಗಿ ಹರಡುತ್ತವೆ. ಕುಂಬಳ, ಪಡಲ, ಚಪ್ಪರದವರೆ ಮುಂತಾದುವು ಈ ಪಂಗಡಕ್ಕೆ ಸೇರಿವೆ. ಇವು ನೆಲದ ಮೇಲೆ ನಿಲ್ಲಲಾರವು. ಮರಗಿಡಗಳ ಮೇಲಾಗಲಿ ಚಪ್ಪರಗಳ ಮೇಲಾಗಲಿ ಹಬ್ಬುತ್ತವೆ. ಇವುಗಳ ತೊಗಟೆ ದಪ್ಪವಾಗಿರುವುದಿಲ್ಲ; ತಾಳು ಮೃದು. ಹುಲ್ಲಿನ ಜಾತಿಗೆ ಸೇರಿದ ಕೆಲವು ಸಸ್ಯಗಳು ಇವೆ. ರಾಗಿ, ಬತ್ತ, ಜೋಳ ಮುಂತಾದುವು ಈ ಬಗೆಗೆ ಸೇರಿದುವು. ಇವುಗಳ ಬೇರು ತೊಡಕು ತೊಡಕಾಗಿ ಇರುತ್ತದೆ. ತಾಳು ಗಿಣ್ಣುಗಿಣ್ಣಾಗಿ ಇರುತ್ತದೆ. ಫಲ ಕೊಟ್ಟ ಮೇಲೆ ಈ ಸಸ್ಯಗಳು ಸಾಯುತ್ತವೆ.

ಮರ, ಗಿಡ, ಪೊದೆ, ಬಳ್ಳಿ ಮತ್ತು ಹುಲ್ಲು ಸಸ್ಯವರ್ಗದ ಭೇದಗಳು. ಮನುಷ್ಯನ ಆಹಾರ ಬಹುಮಟ್ಟಿಗೆ ಸಸ್ಯಗಳಿಂದ ದೊರೆಯುತ್ತದೆ.

೪೬. ಬಕಪಕ್ಷಿಯೂ ಏಡಿಯೂ

ಒಂದು ಕೊಳದಲ್ಲಿ ಒಂದು ಬಕಪಕ್ಷಿ ಇತ್ತು. ಅದು ಮುದಿಯಾಗಿ ಇದ್ದುದರಿಂದ ಅದಕ್ಕೆ ಮೀನುಗಳನ್ನು ಹುಡುಕಿಹುಡುಕಿ ಹಿಡಿಯುವಷ್ಟು ಬಲವಿರಲಿಲ್ಲ. ಆಗ ಅದು ಒಂದು ಆಲೋಚನೆ ಮಾಡಿತು. ಬಹಳ

ದುಃಖದಲ್ಲಿರುವಂತೆ ನಟಿಸಿತು. ಮೀನುಗಳು ಹತ್ತಿರ ಬಂದರೂ ಒಂದನ್ನೂ ಮುಟ್ಟಲಿಲ್ಲ. ಆಗ ಒಂದು ಮೀನು ಧೈರ್ಯದಿಂದ "ಏಕೆ ದುಃಖದಿಂದ ನಿಂತಿದ್ದೀಯೆ?" ಎಂದು ಕೇಳಿತು. ಅದಕ್ಕೆ ಬಕಪಕ್ಷಿ "ನಿನ್ನೆಯ ದಿವಸ ಬೆಸ್ತರು ಬಂದಿದ್ದರು. ಈ ಕೊಳ ಇನ್ನು ಹತ್ತು ದಿವಸಕ್ಕೆ ಬತ್ತಿಹೋಗುತ್ತದೆ ಎಂದು ಆಡಿಕೊಂಡರು. ನಾನೇನೊ ತುಂಬ ನೀರಿರುವ ಬೇರೆ ಕೊಳಕ್ಕೆ ಹೋಗಬಲ್ಲೆ. ಪಾಪ! ನಿಮ್ಮ ಗತಿಯೇನು? ಇಲ್ಲಿಯೇ ಸಾಯುತ್ತೀರಲ್ಲ" ಎಂದಿತು.

ಆಗ ಮೀನುಗಳೆಲ್ಲ ಸೇರಿ "ಅಯ್ಯ ಬಕರಾಜ! ನೀನೆ ನಮಗೆ ಆಪ್ತನು. ತುಂಬು ನೀರಿರುವ ಕೊಳಕ್ಕೆ ನಮ್ಮನ್ನೆಲ್ಲ ಕರೆದುಕೊಂಡು ಹೋಗು" ಎಂದು ಹೇಳಿದುವು. ಮಾರನೆಯ ದಿನ ಬಕಪಕ್ಷಿ ಕೆಲವು ಮೀನುಗಳನ್ನು ತನ್ನ ಬೆನ್ನಮೇಲೆ ಕುಳ್ಳಿರಿಸಿಕೊಂಡು ದೂರದಲ್ಲಿದ್ದ ಬಂಡೆಯ ಬಳಿಗೆ ಹೋಯಿತು. ಅಲ್ಲಿ ಅವುಗಳನ್ನು ಕೆಳಕ್ಕೆ ಹಾಕಿ, ಕುಕ್ಕಿ ತಿಂದು ಬಿಟ್ಟಿತು. ಹೀಗೆಯೇ ಪ್ರತಿದಿನವೂ ಬಕಪಕ್ಷಿ ಮೀನುಗಳನ್ನು ನಂಬಿಸಿ ಕರೆದುಕೊಂಡುಹೋಗಿ ಕೊಂದು ತಿನ್ನುತ್ತಿತ್ತು.

ಒಂದು ದಿನ ಆ ಕೊಳದಲ್ಲಿದ್ದ ಏಡಿ "ಬಕರಾಜ! ನನ್ನನ್ನೂ ತುಂಬು ನೀರಿನ ಕೊಳಕ್ಕೆ ಕರೆದುಕೊಂಡುಹೋಗುತ್ತೀಯಾ?" ಎಂದು ಕೇಳಿತು. ಬಕಪಕ್ಷಿ ಏಡಿಯನ್ನು ತಿನ್ನುವುದಕ್ಕೆ ಒಳ್ಳೆಯ ಸಮಯ ಸಿಕ್ಕಿತೆಂದು ಹಿಗ್ಗಿ ಒಪ್ಪಿಕೊಂಡಿತು. ಏಡಿ ಬಕದ ಬೆನ್ನಮೇಲೆ ಸವಾರಿ ಹೊರಟಿತು. ಬಂಡೆಯ ಬಳಿಗೆ ಬರುವಾಗ ಸತ್ತ ಮೀನುಗಳ ವಾಸನೆ ಏಡಿಗೆ ಬಂತು. ಮೀನಿನ ಎಲುಬುಗಳು ಕಣ್ಣಿಗೆ ಕಂಡುವು.

ಆಗ ಏಡಿ ನಿಜಸ್ಥಿತಿಯನ್ನು ಆಲೋಚಿಸಿ ತಿಳಿಯಿತು. "ಈ ದುಷ್ಟವಾದ ಬಕಪಕ್ಷಿ ಏನೂ ತಿಳಿಯದ ಮೀನುಗಳನ್ನು ನಂಬಿಸಿ ಕೊಂದು ಹಾಕಿದೆ. ಈಗ ನನ್ನನ್ನೂ ಕೊಲ್ಲಬೇಕೆಂದಿದೆ" ಎಂದುಕೊಂಡಿತು. ತರುವಾಯ ಮೆಲ್ಲಗೆ ಬೆನ್ನುಮೇಲಿಂದ ಕುತ್ತಿಗೆಗೆ ಸರಿದು ತನ್ನ ಕೊಂಡಿಗಳಿಂದ ಬಕದ ಕುತ್ತಿಗೆಯನ್ನು ಬಲವಾಗಿ ಕಚ್ಚಿತು. ಬಕಪಕ್ಷಿ "ಅಯ್ಯೋ! ಅಯ್ಯೋ! ನಾನು ಸತ್ತೆ. ಕುತ್ತಿಗೆಯನ್ನು ಬಿಡು" ಎಂದು ಕೂಗಿತು. ಆದರೆ ಏಡಿ ಬಿಡಲಿಲ್ಲ. "ನಂಬಿಸಿ ಮೋಸಮಾಡಿದ ನಿನ್ನನ್ನು ಕೊಲ್ಲುವುದೇ ಒಳ್ಳೆಯದು" ಎಂದು ಹೇಳಿ ಬಕವನ್ನು ಕೊಂದುಬಿಟ್ಟಿತು.

೪೭. ಮೈಸೂರು



ಮೈಸೂರು ಬಹಳ ಹಿಂದಿನ ಕಾಲದ ಊರು. ರಾಜ ಒಡೆಯರ ಕಾಲದವರೆಗೂ ಇದು ಮೈಸೂರು ದೊರೆಗಳ ರಾಜಧಾನಿಯಾಗಿತ್ತು. ಆಮೇಲೆ ಶ್ರೀರಂಗಪಟ್ಟಣ ರಾಜಧಾನಿಯಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಮೈಸೂರು ಮತ್ತೆ ರಾಜಧಾನಿಯಾಯಿತು.

ಪೂರ್ವದಲ್ಲಿ ಮೈಸೂರು ಈಗಿನಷ್ಟು ಸುಂದರವಾಗಿರಲಿಲ್ಲ. ಕೋಟೆ ಎಂಬ ಭಾಗದಲ್ಲಿಯೂ ಪೇಟೆಯ ಭಾಗಗಳಲ್ಲಿಯೂ ಒತ್ತೊತ್ತಾದ ಮನೆಗಳಿದ್ದುವು; ಸಂದುಗೊಂದುಗಳು ಬಹಳ ಇದ್ದುವು. ಈಗ ಮೈಸೂರು ಇಂಡಿಯಾ ದೇಶದಲ್ಲೆಲ್ಲ ಸುಂದರವಾದ ಪಟ್ಟಣ ಎನಿಸಿದೆ. ಈಗ ಅದು ತೋಟಗಳ ಊರು ಎಂದು ಹೆಸರು ಪಡೆದಿದೆ.

ಹಿಂದಿನ ಕಾಲದ ಒತ್ತಾದ ಮನೆಗಳನ್ನು ಕೆಡವಿ ಈಗ ಒಳ್ಳೆಯ ರಸ್ತೆಗಳನ್ನು ಮಾಡಿದ್ದಾರೆ. ಬೀದಿಗಳು ಅಗಲವಾಗಿಯೂ ಚೊಕ್ಕಟವಾಗಿಯೂ ಇರುವಂತೆ ಮಾಡಿದ್ದಾರೆ. ವಿದ್ಯುತ್ತಿನ ದೀಪಗಳಿಂದ ರಸ್ತೆಗಳನ್ನೂ ಮನೆಗಳನ್ನೂ ಬೆಳಗಿದ್ದಾರೆ. ಕಾವೇರಿಯ ನೀರನ್ನು ಶೋಧಿಸಿ ನಲ್ಲಿಗಳ ಮೂಲಕ ಒದಗಿಸಿದ್ದಾರೆ. ರಸ್ತೆಗಳ ಪಕ್ಕದಲ್ಲಿ ಅಲ್ಲಲ್ಲಿ ತೋಟಗಳನ್ನು ಮಾಡಿದ್ದಾರೆ.

ಮೈಸೂರಿನಲ್ಲಿ ನೋಡತಕ್ಕ ಸ್ಥಳಗಳು ಅನೇಕವಿವೆ. ನೋಡಿ. ಚಿತ್ರದಲ್ಲಿ ಮಹಾರಾಜರ ದೊಡ್ಡ ಅರಮನೆ ಕಾಣುತ್ತಿದೆ. ಇದಲ್ಲದೆ

ಮಹಾರಾಜರಿಗೆ ಜಗನ್ಮೋಹನ ಬಂಗಲೆ, ಲಲಿತಮಹಲ್ ಎಂದು ಮುಂತಾಗಿ ಇತರ ಅರಮನೆಗಳೂ ಇವೆ. ಮಹಾರಾಜರ ಕಾಲೇಜು, ಶ್ರೀಕೃಷ್ಣ ರಾಜೇಂದ್ರ ಆಸ್ಪತ್ರೆ ಮುಂತಾದ ದೊಡ್ಡ ಕಟ್ಟಡಗಳೂ ಇವೆ. ಈ ಪಟ್ಟಣ ದಲ್ಲಿ ಝೂ ಎಂಬ ಮೃಗಾಲಯವಿದೆ. ಅಲ್ಲಿ ಹುಲಿ, ಸಿಂಹ, ಚಿರತೆ, ಆನೆ, ಜಿರಾಫೆ ಮುಂತಾದ ಕಾಡುಮೃಗಗಳನ್ನೂ ಬಗೆಬಗೆಯ ಪಕ್ಷಿಗಳನ್ನೂ ಇಟ್ಟಿದ್ದಾರೆ. ಅಲ್ಲಿರುವ ತೋಟ ಬಹಳ ಚೆನ್ನಾಗಿದೆ.

ನವರಾತ್ರಿಯ ಕಾಲದಲ್ಲಿಯೂ ಮಹಾರಾಜರ ವರ್ಧಂತಿಯ ಕಾಲ ದಲ್ಲಿಯೂ ಮೈಸೂರು ಚೆನ್ನಾಗಿ ಶೋಭಿಸುತ್ತದೆ. ಆಗ ಪಟ್ಟಣವನ್ನು ಅಲಂಕಾರಮಾಡಿರುತ್ತಾರೆ, ನಾನಾ ಕಡೆಗಳಿಂದ ಜನರು ಸಾವಿರ ಸಾವಿರ ವಾಗಿ ಬರುತ್ತಾರೆ.

ಈ ಊರಿಗೆ ಪಕ್ಕದಲ್ಲಿಯೆ ಚಾಮುಂಡಿ ಬೆಟ್ಟವಿದೆ. ಬೆಟ್ಟವನ್ನು ಹತ್ತುವುದಕ್ಕೆ ಮೆಟ್ಟಲುಗಳಿವೆ. ಇವುಗಳನ್ನು ದೊಡ್ಡ ದೇವರಾಜ ಒಡೆಯರು ಮಾಡಿಸಿದರು. ಈಚೆಗೆ ಮಹಾರಾಜರು ಬೆಟ್ಟದಮೇಲೆ ಸೊಗಸಾದ ರಸ್ತೆಯನ್ನು ಮಾಡಿಸಿದ್ದಾರೆ. ಮೆಟ್ಟಲುಗಳನ್ನು ಹತ್ತಿ ಹೋಗುವಾಗ ಮಧ್ಯದಲ್ಲಿ ದೊಡ್ಡ ಬಸವನ ವಿಗ್ರಹ ಸಿಕ್ಕುತ್ತದೆ. ಇದು ಬಹಳ ದೊಡ್ಡದು. ಬೆಟ್ಟದಮೇಲೆ ಚಾಮುಂಡೇಶ್ವರಿ ದೇವಸ್ಥಾನ, ನರಸಿಂಹಸ್ವಾಮಿ ದೇವಸ್ಥಾನ ಇವೆ. ಮಹಾರಾಜರ ಅರಮನೆ ಇದೆ. ಚಾಮುಂಡೇಶ್ವರಿ ಮಹಾರಾಜರ ಕುಲದೇವತೆ. ರಾತ್ರಿಯ ಕಾಲದಲ್ಲಿ ಬೆಟ್ಟದಮೇಲೆ ನಿಂತು ಮೈಸೂರನ್ನು ನೋಡಿದರೆ ಅದರ ದೀಪಗಳು ಮಿನು ಗುಟ್ಟುವ ನಕ್ಷತ್ರಗಳಂತೆ ಕಾಣುತ್ತವೆ. ನಮ್ಮ ತಲೆಯಮೇಲಿರುವ ಆಕಾಶವನ್ನು ಭೂಮಿಯಮೇಲೆ ಹರಡಿದ ಹಾಗೆ ಕಾಣುತ್ತದೆ.

೪೮. ಕಷ್ಟದಲ್ಲಿ ಎಚ್ಚರಿಕೆ

ಒಂದು ನದಿಯ ತೀರದಲ್ಲಿ ಒಂದು ಮಾವಿನ ಮರ ಇತ್ತು. ಅದರಲ್ಲಿ ಒಂದು ಕೋತಿ ವಾಸವಾಗಿತ್ತು. ಅದು ತಿನ್ನುವುದಕ್ಕೆ ಹಣ್ಣನ್ನು ಕೀಳುತ್ತಿದ್ದಾಗ ಒಂದು ಹಣ್ಣು ಕೆಳಗಿದ್ದ ಮಡುವಿನಲ್ಲಿ ಧೊಪ್ಪನೆ ಬಿತ್ತು. ಆಗ ಆ ಮಡುವಿಗೆ ಬಂದಿದ್ದ ಒಂದು ಮೊಸಳೆ ಅದನ್ನು ತಿಂದು ಸಂತೋಷ

ಪಟ್ಟಿತು. ಮತ್ತಷ್ಟು ಹಣ್ಣು ಕೆಡಹುವಂತೆ ಅದು ಕೋತಿಯನ್ನು ಕೇಳಿತು. ಹೀಗೆ ಮೊಸಳೆಗೂ ಕೋತಿಗೂ ಸ್ನೇಹ ಉಂಟಾಯಿತು.

ಪ್ರತಿದಿನವೂ ಮೊಸಳೆ ಮಡುವಿಗೆ ಬರುತ್ತಿತ್ತು. ಆಗ ಕೋತಿ ಮರದಿಂದ ಹಣ್ಣು ಕೆಡಹುತ್ತಿತ್ತು. ಆ ಹಣ್ಣುಗಳನ್ನು ಮೊಸಳೆ ತಿಂದು ಕೋತಿಯೊಡನೆ ಮಾತನಾಡುತ್ತ ಕಾಲಕಳೆಯುತ್ತಿತ್ತು. ಮೊಸಳೆಯ ಹೆಂಡತಿ ತನ್ನ ಗಂಡ ಮನೆಗೆ ಸರಿಯಾಗಿ ಏಕೆ ಬರುತ್ತಿಲ್ಲ? ಎಂದು ಆಲೋಚಿಸಿತು. ಕೋತಿಗೂ ತನ್ನ ಗಂಡನಿಗೂ ಆಗಿರುವ ಸ್ನೇಹ ಅದಕ್ಕೆ ಗೊತ್ತಾಯಿತು.

ಹೆಣ್ಣು ಮೊಸಳೆ ಕೋತಿಯನ್ನು ಕೊಲ್ಲಬೇಕೆಂದು ಯೋಚಿಸಿತು. ಅದಕ್ಕಾಗಿ ಒಂದು ಯುಕ್ತಿಮಾಡಿತು. ಒಂದು ದಿನ ಗಂಡ ಬರುವ ಹೊತ್ತಿಗೆ ನರಳುತ್ತಾ ಮಲಗಿಕೊಂಡಿತು. ಮೊಸಳೆ ಹೆಂಡತಿಯ ಬಳಿಗೆ ಬಂದು ದುಃಖದಿಂದ "ನಿನಗೇನು ಆಗಿದೆ? ನಿನಗೇನು ಔಷಧಮಾಡಿಕೊಡಲಿ?" ಎಂದು ಕೇಳಿತು. ಆಗ ಹೆಣ್ಣು ಮೊಸಳೆ "ನನ್ನ ರೋಗಕ್ಕೆ ಕೋತಿಯ ಕರುಳೇ ಔಷಧ. ಅದನ್ನು ತರದಿದ್ದರೆ ನಾನು ಬದುಕುವುದು ಕಷ್ಟ" ಎಂದು ಹೇಳಿತು.

ಮೊಸಳೆಗೆ ದೊಡ್ಡ ಯೋಚನೆ ಹತ್ತಿತು. ಅದಕ್ಕೆ ಹೆಂಡತಿಯಮೇಲೆ ಪ್ರೀತಿ, ಸ್ನೇಹಿತನಮೇಲೆ ಪ್ರಾಣ. ಏನು ಮಾಡುವುದು? ಕಡೆಗೆ ಸ್ನೇಹಿತನನ್ನು ಕೊಂದು ಹೆಂಡತಿಯನ್ನು ಬದುಕಿಸಬೇಕೆಂದು ನಿಶ್ಚಯಿಸಿತು.

ಮೊಸಳೆ ಮಡುವಿಗೆ ಬಂದು "ಮಿತ್ರನೆ! ನಾವು ಬಹಳ ದಿವಸಗಳಿಂದ ಸ್ನೇಹಿತರಾಗಿದ್ದೇವೆ. ಒಂದು ದಿನವಾದರೂ ನೀನು ನಮ್ಮ ಮನೆಗೆ ಊಟಕ್ಕೆ ಬಂದಿಲ್ಲ. ಈ ದಿನ ಅಗತ್ಯವಾಗಿ ಬರಬೇಕು" ಎಂದು ಕೋತಿಯನ್ನು ಕರೆಯಿತು. ಅದರ ಮೋಸವನ್ನು ತಿಳಿಯದೆ ಕೋತಿ ಒಪ್ಪಿಕೊಂಡು ಹೊರಟಿತು. ಕೋತಿಯನ್ನು ಬೆನ್ನಿನಮೇಲೆ ಕೂಡಿಸಿಕೊಂಡು ಮೊಸಳೆ ಮನೆಯ ಕಡೆಗೆ ತಿರುಗಿತು.

ಅರ್ಧದೂರ ಹೋದಮೇಲೆ ಮೊಸಳೆ ದುಃಖದಿಂದ ಮೆಲ್ಲಗೆ ಹೆಜ್ಜೆ ಹಾಕುತ್ತಿತ್ತು. "ಸ್ನೇಹಿತನನ್ನು ಕೊಲ್ಲಬೇಕಲ್ಲಾ" ಎಂದು ಅದಕ್ಕೆ ದುಃಖ. ಆಗ ಕೋತಿ "ಗೆಳೆಯನೆ! ನಿನಗೇಕೆ ದುಃಖ? ಮನೆಯಲ್ಲಿ ಎಲ್ಲರೂ ಕ್ಷೇಮವಷ್ಟೆ?" ಎಂದು ಕೇಳಿತು. ಅದಕ್ಕೆ ಮೊಸಳೆ ತನ್ನ ಹೆಂಡತಿಗೆ ರೋಗನೆಂದೂ ವಾಸಿಮಾಡುವುದಕ್ಕೆ ಕೋತಿಯ ಕರುಳು ಬೇಕಾಗಿದೆಯೆಂದೂ ಹೇಳಿತು.

ಕೂಡಲೆ ಕೋತಿ ಮೊಸಳೆಯ ಮೋಸವನ್ನು ತಿಳಿದುಬಿಟ್ಟಿತು. ಉಪಾಯ ಮಾಡದಿದ್ದರೆ ತನ್ನ ಪ್ರಾಣ ಉಳಿಯುವುದಿಲ್ಲ ಎಂದು ತಿಳಿದು, "ಅಯ್ಯ ಸ್ನೇಹಿತನೆ! ಎಂಥ ಹುಚ್ಚು ಕೆಲಸ ಮಾಡಿದೆ? ಈ ಮಾತನ್ನು ನೀನು ಮೊದಲೆ ಏಕೆ ತಿಳಿಸಲಿಲ್ಲ? 'ಕೋತಿಯ ಕರುಳು ಕೊಂಬೆಯಮೇಲೆ' ಎಂಬುದನ್ನು ಕೇಳಿಲ್ಲವೆ? ಬೇಗ ಹಿಂದಿರುಗು. ಹೋಗಿ ಅದನ್ನು ತರೋಣ. ನಿನ್ನ ಹೆಂಡತಿ ಹೇಗಾದರೂ ಬದುಕಿಕೊಳ್ಳಲಿ" ಎಂದಿತು.

ಮೊಸಳೆ ಆ ಮಾತುಗಳನ್ನು ನಂಬಿ ಹಿಂದಿರುಗಿತು. ಮರದ ಬಳಿಗೆ ಬರಲು ಕೋತಿ ಚಂಗನೆ ಮರಕ್ಕೆ ಹಾರಿ ಜೀವವನ್ನು ಉಳಿಸಿಕೊಂಡಿತು. ಮೊಸಳೆ "ಗೆಳೆಯನೆ! ಕರುಳನ್ನು ತೆಗೆದುಕೊಂಡೆಯಾ? ಬೇಗ ಇಳಿದುಬಾ. ಹೋಗೋಣ" ಎಂದಿತು. ಅದಕ್ಕೆ ಕೋತಿ "ಒಂದುಬಾರಿ ತಿಳಿಯದೆ ಮೋಸ ಹೋದೆ. ತಿರುಗಿ ನಿನ್ನನ್ನು ನಂಬುವುದಕ್ಕೆ ನಾನು ಕತ್ತೆಯಲ್ಲ. ಹೋಗಿಬಾ" ಎಂದು ಉತ್ತರ ಹೇಳಿತು.

೪೯. ಅಂಚೆಯವನು



ದಾಸ—ವೆಂಕಟ! ನಿನ್ನ ಕೈಗೆ ಈ ಕಾಗದ ಕೊಟ್ಟುಹೋದನಲ್ಲ. ಅವನು ಯಾರು?

ವೆಂಕಟ—ಅವನೆ ಅಂಚೆಯವನು. ಅವನಿಗೆ ಪೋಸ್ಟು ಜವಾನ ಎಂದೂ ಹೇಳುತ್ತಾರೆ. ಊರುಗಳಿಂದ ಬಂದ ಕಾಗದಗಳನ್ನು ಆಯಾ

ಮನೆಗಳಿಗೆ ತಂದುಕೊಡುವುದು ಅಂಚೆಯವನ ಕೆಲಸ. ನಮ್ಮ ಊರಿನಲ್ಲಿ ಬಹಳ ಮಂದಿ ಅಂಚೆಯವರು ಇದ್ದಾರೆ.

ದಾ.—ಅವನು ಹೆಗಲಿಗೆ ಹಾಕಿಕೊಂಡಿದ್ದ ಚೀಲವೇನು?

ವೆಂ.—ಅದು ಕಾಗದಗಳ ಚೀಲ. ಅದರಲ್ಲಿ ಕಾಗದಗಳನ್ನೂ ಛಾಂಗಿಗಳನ್ನೂ ಹಣವನ್ನೂ ಇಟ್ಟುಕೊಂಡಿರುತ್ತಾನೆ.

ದಾ.—ಈ ಕಾಗದ ನಿನಗೆ ಎಲ್ಲಿಂದ ಬಂದಿದೆ?

ವೆಂ.—ನೋಡು. ಇದು ಮೈಸೂರಿಂದ ಬಂದಿದೆ. ಈ ಸ್ಟಾಂಪಿನ ಮೇಲೆ ಮೈಸೂರಿನ ಮುದ್ರೆಯಿದೆ. ಕಾಗದವನ್ನು ಊರಿಗೆ ಕಳುಹಿಸುವವರು ಈ ಸ್ಟಾಂಪನ್ನು ಕಾಗದಕ್ಕೆ ಹಚ್ಚಬೇಕು. ಸ್ಟಾಂಪಿಗೆ ಕೊಡುವ ಹಣವೇ ಕಾಗದವನ್ನು ತಲುಪಿಸುವುದಕ್ಕೆ ಕೂಲಿ. ಸ್ಟಾಂಪೆಂದರೆ ತಲೆ ಚೀಟಿ.

ದಾ.—ಈ ಮುದ್ರೆಯನ್ನು ಏತಕ್ಕೆ ಒತ್ತುತ್ತಾರೆ?

ವೆಂ.—ಈ ಮುದ್ರೆ ಕಾಗದ ಹಾಕಿದ ಊರನ್ನೂ, ಅಲ್ಲಿ ಅಂಚೆಯ ಕಚೇರಿಯನ್ನು ಬಿಟ್ಟ ತಾರೀಖನ್ನೂ ಗಂಟೆಯನ್ನೂ ತಿಳಿಸುತ್ತದೆ. ಮುದ್ರೆ ಹಾಕಿದ ಸ್ಟಾಂಪು ಪುನಃ ಉಪಯೋಗಕ್ಕೆ ಬರುವುದಿಲ್ಲ. ಆದ್ದರಿಂದ ಅಲ್ಲಿಯ ಕಚೇರಿಯಲ್ಲಿ ಹೀಗೆ ಮುದ್ರೆ ಹಾಕುತ್ತಾರೆ. ಇನ್ನೊಂದು ಮುದ್ರೆ ಈ ಊರಿನದು.

ದಾ.—ಊರುಗಳಿಂದ ಅನೇಕ ಕಾಗದಗಳು ಬರುತ್ತವೆ. ಅವುಗಳನ್ನು ವಿಂಗಡಿಸುವುದು ಕಷ್ಟವಲ್ಲವೆ?

ವೆಂ.—ಕಷ್ಟವೇ ಅಹುದು. ಆದರೆ ಅದಕ್ಕೆ ತಕ್ಕ ಜನರನ್ನು ನಿಯಮಿಸುತ್ತಾರೆ. ಅಂಚೆಯವರೆಲ್ಲ ರೈಲಿನಿಂದ ಕಾಗದಗಳ ಹೊರೆ ಬರುವಹೊತ್ತಿಗೆ ಕಚೇರಿಯಲ್ಲಿ ಇರುತ್ತಾರೆ. ಹೊರೆಗಳನ್ನು ಬಿಚ್ಚಿ ಹತ್ತು ಹನ್ನೆರಡು ಜನರು ವಿಳಾಸಗಳನ್ನು ಓದುತ್ತಾರೆ. ತಮ್ಮ ತಮ್ಮ ಪೇಟೆಗೆ ಸಂಬಂಧಪಟ್ಟುದನ್ನು ಆಯಾ ಅಂಚೆಯಾಳುಗಳು ತೆಗೆದುಕೊಳ್ಳುತ್ತಾರೆ. ಆಮೇಲೆ ತಮ್ಮ ಪೇಟೆಗೆ ಹೋಗಿ ಮನೆಗಳಿಗೆ ತಲುಪಿಸುತ್ತಾರೆ.

ದಾ.—ಅಹುದು. ಹೀಗೆ ಸರ್ಕಾರದವರು ಏರ್ಪಾಡು ಮಾಡಿರುವುದರಿಂದ ನಮಗೆಲ್ಲ ಬಹಳ ಅನುಕೂಲ. ಸ್ವಲ್ಪ ವೆಚ್ಚದಿಂದ ಕಾಗದಗಳನ್ನು ಬೇಕಾದ ಊರಿಗೆ ಕಳುಹಿಸಬಹುದು.

೫೦. ಓಬವ್ವೆ

ಪೂರ್ವಕಾಲದಲ್ಲಿ ಚಿತ್ರದುರ್ಗವನ್ನು ಪಾಳೆಯಗಾರರು ಆಳುತ್ತಿದ್ದರು. ಅವರಲ್ಲಿ ಮದಕರಿನಾಯಕನು ಪ್ರಬಲನು. ಅವನನ್ನು ಹಿಡಿಯಬೇಕೆಂದು ಹೈದರನು ಚಿತ್ರದುರ್ಗದ ಕೋಟೆಯನ್ನು ಮುತ್ತಿದನು. ಆದರೆ ಹೈದರನ ದಂಡು ಕೋಟೆಯನ್ನು ಹಿಡಿಯಲಾಗಲಿಲ್ಲ. ಹೈದರನಿಗೆ ಬಹಳ ಅಪಮಾನ ವಾಯಿತು.

ಕೋಟೆಗೆ ಕಳ್ಳದಾರಿ ಇದೆಯೆಂದು ಹೈದರನಿಗೆ ಗೊತ್ತಿತ್ತು. ಅದನ್ನು ಪತ್ತೆಮಾಡಲು ಜನರನ್ನು ಕಳುಹಿಸಿದನು. ಆ ಜನರು ಹುಡುಕುತ್ತ ಬರುತ್ತಿದ್ದರು. ಆಗ ಒಬ್ಬಳು ಮೊಸರಿನವಳು ಕಲ್ಲು ಸಂದುಗಳಲ್ಲಿ ಹೊಕ್ಕು ಕೋಟೆಯೊಳಕ್ಕೆ ಹೋದಳು. ಅವರು ಹೈದರನಿಗೆ ಆ ಸಂಗತಿ ಹೇಳಿದರು.

ಹೈದರನು ಧೈರ್ಯಶಾಲಿಗಳಾದ ಇನ್ನೂರು ಮಂದಿ ಸಿಪಾಯಿಗಳನ್ನು ಅಲ್ಲಿಗೆ ಕಳುಹಿಸಿದನು. ಕೋಟೆಯೊಳಕ್ಕೆ ಹೋಗಿ ಕೋಟೆಯ ಬಾಗಿಲನ್ನು ತೆರೆಯಬೇಕೆಂದು ಅವರಿಗೆ ಹೇಳಿದನು. ಅವರು ಕಳ್ಳದಾರಿಯಿಂದ ಒಳಕ್ಕೆ ಹೋಗಬೇಕೆಂದು ಪ್ರಯತ್ನಪಡುತ್ತಿದ್ದರು. ಆ ಸಂದಿ ಬಹಳ ಚಿಕ್ಕದು. ಕೆಳಗೆ ಬಂಡೆ, ಮೇಲೆ ಬಂಡೆ, ಎರಡು ಪಕ್ಕಗಳಲ್ಲೂ ಬಂಡೆ. ಒಬ್ಬನು ಮಲಗಿ ಹೊಟ್ಟೆಯ ಮೇಲೆ ಸರಿದುಕೊಂಡುಹೋಗುವಷ್ಟು ಮಾತ್ರ ಸ್ಥಳವಿತ್ತು.

ಆ ಕಳ್ಳದಾರಿಯ ಕಾವಲಿಗೆ ಒಬ್ಬ ಕಹಳೆಯವನು ಇರುತ್ತಿದ್ದನು. ಕೋಟೆಯ ಹಿಂದುಗಡೆ ಶತ್ರುಗಳನ್ನು ಕಂಡರೆ ಕಹಳೆ ಊದುವುದು ಅವನ ಕೆಲಸ. ಅವನು ಆಗ ಊಟಮಾಡುತ್ತಿದ್ದನು. ಅವನ ಹೆಂಡತಿ ಓಬವ್ವೆ ಕಳ್ಳಗಂಡಿಯ ಹತ್ತಿರವಿದ್ದ ಕೊಳಕ್ಕೆ ನೀರಿಗೆ ಬಂದಿದ್ದಳು. ಬಂಡೆಯ ಸಂದಿನಲ್ಲಿ ಜನರ ಸಪ್ಪಳ ಅವಳಿಗೆ ಕೇಳಿಸಿತು. ಕಳ್ಳಗಂಡಿಯಲ್ಲಿ ನೋಡಿದಳು. ಜನರ ಸುಳು ಗೊತ್ತಾಯಿತು. ಕೂಡಲೆ ತನ್ನ ಗುಡಿಸಿಲಿಗೆ ಓಡಿಹೋದಳು. ಗಂಡ ಊಟಮಾಡಲೆಂದು ಅವನಿಗೆ ಹೇಳಲಿಲ್ಲ. ತಾನೆ ಒಂದು ಒನಕೆಯನ್ನು ತಂದು ಕಂಡಿಯ ಪಕ್ಕದಲ್ಲಿ ನಿಂತುಕೊಂಡಳು.

ಓಬವ್ವೆ ಹಾಗೆ ನಿಂತುದು ಸಿಪಾಯಿಗಳಿಗೆ ತಿಳಿಯಲಿಲ್ಲ. ಕಂಡಿಯಲ್ಲಿ ತೂರಿಕೊಂಡು ಒಬ್ಬ ಸಿಪಾಯಿ ತಲೆಹಾಕಿದನು. ಕೂಡಲೆ ಒನಕೆಪೆಟ್ಟು

ಬಲವಾಗಿ ಬಿತ್ತು. ಓಬವ್ವೆ ಅವನನ್ನು ಪಕ್ಕದ ಹಳ್ಳಕ್ಕೆ ತಳ್ಳಿದಳು. ಇನ್ನೊಬ್ಬ ಸಿಪಾಯಿ ತಲೆ ಹಾಕಿದನು. ಅವನಿಗೂ ಅದೇ ಗತಿಯಾಯಿತು. ಹೀಗೆ ಒಬ್ಬೊಬ್ಬರಾಗಿ ಸಿಪಾಯಿಗಳು ತಲೆಹಾಕುತ್ತಿದ್ದರು. ಓಬವ್ವೆ ಒಬ್ಬೊಬ್ಬರ ತಲೆಯನ್ನೂ ಚಚ್ಚಿ ಹಳ್ಳಕ್ಕೆ ತಳ್ಳುತ್ತಿದ್ದಳು. ಅವಳ ಕೈ ಮೈ ಎಲ್ಲ ರಕ್ತ. ನೆಲದಮೇಲೆ ರಕ್ತದ ಕಾಲುವೆ.

"ನೀರಿಗೆ ಹೋದ ಹೆಂಡತಿ ಏಕೆ ಬರಲಿಲ್ಲ?" ಎಂದು ಕಹಳೆಯವನು ಹುಡುಕುತ್ತ ಬಂದನು. ಅವನೂ ಒಬ್ಬ ಸಿಪಾಯಿ ಎಂದು ತಿಳಿದು ಓಬವ್ವೆ ಹೊಡೆಯಲು ಹೋದಳು. ಅವನು ತಪ್ಪಿಸಿಕೊಂಡು ಕಹಳೆ ಊದಿದನು. ಅಷ್ಟರಲ್ಲಿ ಹೈದರನ ಕಡೆಯವರು ಕಂಡಿಯಲ್ಲಿ ನುಗ್ಗಿಬಂದು ಓಬವ್ವೆಯನ್ನು ಕಡಿದುಹಾಕಿದರು.

ಆದರೆ ಈ ಹೊತ್ತಿಗೆ ಕಹಳೆಯ ಕೂಗು ಕೋಟೆಯಲ್ಲೆಲ್ಲ ಕೇಳಿಸಿತ್ತು. ಪಾಳೆಯಗಾರನ ಕಡೆಯವರು ಓಡಿಬಂದರು. ಹಿರಿದ ಕತ್ತಿಗಳಿಂದ ಶತ್ರುಗಳ ಮೇಲೆ ಬಿದ್ದರು. ಒಂದೆರಡು ನಿಮಿಷಗಳಲ್ಲಿ ಹೈದರನ ಕಡೆಯವರೆಲ್ಲ ಸತ್ತುಬಿದ್ದರು. ಅದನ್ನು ನೋಡಿ ಹೊರಗಿದ್ದವರು ಓಡಿಹೋದರು. ಮದಕರಿನಾಯಕನು ಕಳ್ಳ ಗಂಡಿಯ ಬಳಿಗೆ ಬಂದನು. ಓಬವ್ವೆ ತೋರಿದ್ದ ಧೈರ್ಯ ಪರಾಕ್ರಮಗಳನ್ನು ನೋಡಿದನು. ಅವಳನ್ನು ಬಹಳವಾಗಿ ಹೊಗಳಿದನು. ಚಿತ್ರದುರ್ಗದಲ್ಲಿ ಜನರು ಈಗಲೂ ಓಬವ್ವೆಯನ್ನು ಮರೆತಿಲ್ಲ.

೫೧. ಧಾನ್ಯಗಳು

ನಾವು ತಿನ್ನುವ ಪದಾರ್ಥಗಳು ಅನೇಕ ಬಗೆಯಾಗಿವೆ. ಇವುಗಳಲ್ಲಿ ಅಕ್ಕಿ, ರಾಗಿ, ಗೋಧಿ, ಜೋಳ, ನವಣೆ, ತೊಗರಿ, ಅವರೆ, ಹುರುಳಿ, ಹೆಸರು, ಉದ್ದು, ಕಡಲೆ, ತಡಗಣಿ, ಮೊದಲಾದುವನ್ನು ಧಾನ್ಯವೆನ್ನುತ್ತೇವೆ. ಕೆಲವು ಧಾನ್ಯಗಳನ್ನು ಒಡೆದರೆ ಎರಡೆರಡು ಬೇಳೆಯಾಗುತ್ತವೆ. ಇವಕ್ಕೆ ದ್ವಿದಳ ಧಾನ್ಯಗಳೆಂದು ಹೆಸರು. ತೊಗರಿ, ಅವರೆ, ಹೆಸರು, ಕಡಲೆ, ಉದ್ದು ಮೊದಲಾದುವು ದ್ವಿದಳಧಾನ್ಯಗಳು.

ತೊಗರಿಯಕಾಯಿ ಉದ್ದವಾಗಿರುತ್ತದೆ. ಇದರಲ್ಲಿ ಐದರವರೆಗೂ ಕಾಳುಗಳಿರುತ್ತವೆ. ಒಣಗಿದ ಕಾಳು ಮಾಸಲು ಕೆಂಪು. ಒಳಗಿನ ಬೇಳೆ

ಹೆಳದಿಯ ಬಣ್ಣ. ಈ ಬೇಳೆಯಲ್ಲಿ ಸಾರು, ಹುಳಿ, ತೊವ್ವೆ ಮುಂತಾದುವನ್ನು ಮಾಡುತ್ತಾರೆ.

ಅವರೆಕಾಯಿ ಮತ್ತು ಹುರುಳಿಕಾಯಿ ಚಪ್ಪಟೆಯಾಗಿರುತ್ತವೆ. ಹೆಸರು, ಉದ್ದು, ತಡಗಣಿ, ಇವುಗಳ ಕಾಯಿ ದುಂಡು. ಅವರೆಬೇಳೆಯನ್ನೂ ತಡಗಣಿಯನ್ನೂ ಹುಳಿಗೆ ಉಪಯೋಗಿಸುತ್ತಾರೆ.

ಕಡಲೆಕಾಯಿಯಲ್ಲಿ ಒಂದೊಂದೆ ಕಾಳಿರುತ್ತದೆ. ಕೆಲವುಬಾರಿ ಅವಳಿ ಕಾಳು ಇರುವುದುಂಟು. ಕಡಲೆ ಬೇಳೆಯನ್ನೂ ಹೆಸರು ಬೇಳೆಯನ್ನೂ ಪಾಯಸಕ್ಕೆ ಉಪಯೋಗಿಸುತ್ತಾರೆ. ಈ ಬೇಳೆಗಳನ್ನು ನೆನೆಯಹಾಕಿ, ಕೋಸಂಬರಿ ಮಾಡಿ ತಿನ್ನುವರು.

ಬತ್ತವನ್ನು ಕುಟ್ಟಿದರೆ ಅಕ್ಕಿಯಾಗುತ್ತದೆ. ಬತ್ತಕ್ಕೆ ನೆಲ್ಲೆಂದೂ ಹೇಳುತ್ತಾರೆ. ಅಕ್ಕಿಯನ್ನು ಬೇಯಿಸಿದರೆ ಅನ್ನವಾಗುತ್ತದೆ. ಅನ್ನದ ಗಂಜಿ ಬಸಿದರೆ ಅನ್ನದ ಸಾರ ಕಡಮೆ. ನಮ್ಮ ದೇಶದಲ್ಲಿ ಬಹು ಜನರಿಗೆ ಅಕ್ಕಿಯೆ ಮುಖ್ಯವಾದ ಆಹಾರ. ಅಕ್ಕಿಯನ್ನು ಬೀಸಿದರೆ ಹಿಟ್ಟಾಗುತ್ತದೆ. ಅದರಲ್ಲಿ ರೊಟ್ಟಿ, ದೋಸೆ, ಚಕ್ಕುಲಿ, ಕೋಡುಬಳೆ, ಮುಂತಾದುವನ್ನು ಮಾಡುತ್ತಾರೆ.

ರಾಗಿಯನ್ನು ಬೀಸಿದರೆ ಹಿಟ್ಟಾಗುತ್ತದೆ. ಅದರಲ್ಲಿ ರೊಟ್ಟಿಯನ್ನೂ ದೋಸೆಯನ್ನೂ ಮಾಡುತ್ತಾರೆ. ಹಸಿಯ ಹಿಟ್ಟನ್ನು ಬೇಯಿಸಿ ಮುದ್ದೆ ಮಾಡಿ ತಿನ್ನುವುದು ಹೆಚ್ಚು. ರಾಗಿ ನಮ್ಮ ದೇಶದಲ್ಲಿ ಬಡವರಿಗೆಲ್ಲ ಮುಖ್ಯವಾದ ಆಹಾರ.

ನವಣೆಯನ್ನೂ ಜೋಳವನ್ನೂ ಅನೇಕರು ಉಪಯೋಗಿಸುತ್ತಾರೆ. ಅವುಗಳನ್ನು ಕುಟ್ಟಿ, ಮುಸುಕನ್ನೂ ಹೊಟ್ಟನ್ನೂ ಕೇರಿ ಆಮೇಲೆ ಅನ್ನ ಮಾಡುತ್ತಾರೆ. ಜೋಳದ ಹಿಟ್ಟಿನಿಂದ ರೊಟ್ಟಿಯನ್ನೂ ಮುದ್ದೆಯನ್ನೂ ಮಾಡಿ ತಿನ್ನುವುದು ಹೆಚ್ಚು.

ಗೋಧಿಯನ್ನು ಬೀಸಿ ರವೆಯನ್ನೂ ಹಿಟ್ಟನ್ನೂ ತೆಗೆಯುತ್ತಾರೆ. ರವೆಯಿಂದ ಉಪ್ಪಿಟ್ಟೂ, ಬಗೆ ಬಗೆಯ ಭಕ್ಷ್ಯಗಳೂ ಆಗುತ್ತವೆ. ಹಿಟ್ಟನ್ನು ರೊಟ್ಟಿಗೆ ಉಪಯೋಗಿಸುತ್ತಾರೆ.

೫೨. ಮನುಷ್ಯ ಶರೀರದ ಅವಯವಗಳು

ನಮ್ಮ ಶರೀರದಮೇಲೆ ಚರ್ಮವಿದೆ. ಒಳಗೆ ರಕ್ತ, ಮಾಂಸ ಮತ್ತು ಎಲುಬುಗಳಿವೆ. ಶರೀರವನ್ನು ತಲೆ, ಮುಂಡ ಮತ್ತು ಕೈಕಾಲುಗಳೆಂದು ಮೂರಾಗಿ ವಿಂಗಡಿಸಬಹುದು. ತಲೆಗೆ ರುಂಡವೆಂದೂ ಹೆಸರುಂಟು. ತಲೆಯನ್ನೂ ಮುಂಡವನ್ನೂ ಸೇರಿಸುವ ಭಾಗವೆ ಕತ್ತು. ಮುಂಡದ ಎರಡು ಪಕ್ಕಗಳಲ್ಲಿ ತೋಳುಗಳಿವೆ; ಕೆಳಭಾಗದಲ್ಲಿ ಕಾಲುಗಳಿವೆ.

ತಲೆಯ ಮುಂಭಾಗವೆ ಮುಖ. ಮುಖದಲ್ಲಿ ಕಣ್ಣು, ಮೂಗು, ಬಾಯಿ ಇವೆ. ಮುಖದ ಪಕ್ಕದಲ್ಲಿ ಕಿವಿಗಳಿವೆ. ತಲೆಬುರುಡೆಯಲ್ಲಿ ಮೆದುಳಿದೆ. ಮೆದುಳಿಂದ ನಮಗೆ ಜ್ಞಾನವುಂಟಾಗುತ್ತದೆ.

ನಾವು ಕಣ್ಣುಗಳಿಂದ ನೋಡುತ್ತೇವೆ. ರೆಪ್ಪೆಗಳು ಕಣ್ಣೊಳಗೆ ದೂಳು ಬೀಳದಂತೆ ಕಾಪಾಡುತ್ತವೆ. ನಾವು ನಿದ್ದೆ ಮಾಡುವಾಗ ಕದಗಳ ಹಾಗೆ ಮುಚ್ಚಿಕೊಳ್ಳುತ್ತವೆ.

ನಾವು ಮೂಗಿನಿಂದ ವಾಸನೆ ನೋಡುತ್ತೇವೆ. ಉಸಿರನ್ನು ಎಳೆದು ಕೊಳ್ಳುತ್ತೇವೆ. ಉಸಿರನ್ನು ಹೊರಕ್ಕೆ ಬಿಡುತ್ತೇವೆ.

ಬಾಯಿಂದ ಊಟಮಾಡುತ್ತೇವೆ ಮತ್ತು ನೀರು ಕುಡಿಯುತ್ತೇವೆ. ಹಲ್ಲು ಪದಾರ್ಥಗಳನ್ನು ಅಗಿಯುತ್ತದೆ. ನಾಲಗೆ ರುಚಿ ನೋಡುತ್ತದೆ. ತಿನ್ನುವ ಪದಾರ್ಥ ಹೊರಕ್ಕೆ ಬೀಳದಂತೆ ತುಟಿಗಳು ತಡೆಯುತ್ತವೆ.

ನಾವು ಕಿವಿಗಳಿಂದ ಶಬ್ದವನ್ನು ಕೇಳುತ್ತೇವೆ. ನಮ್ಮ ಚರ್ಮದಿಂದಲೂ ನಮಗೆ ಪ್ರಯೋಜನವುಂಟು. ಬಿಸಿಯಾಗಿರುವುದು ತಣ್ಣಗಿರುವುದು, ಮೆತ್ತಗಿರುವುದು, ಗಟ್ಟಿಯಾಗಿರುವುದು, ನುಣುಪಾಗಿರುವುದು, ಒರಟಾಗಿರುವುದು, ಇವೆಲ್ಲ ಚರ್ಮದಿಂದ ತಿಳಿಯುತ್ತವೆ.

ಕಣ್ಣು, ಕಿವಿ, ಮೂಗು ಮುಂತಾದ ಶರೀರದ ಭಾಗಗಳಿಗೆ ಅವಯವಗಳೆಂದು ಹೆಸರು.

ಮುಂಡದ ಮೇಲುಭಾಗ ಎದೆ, ಕೆಳಭಾಗ ಹೊಟ್ಟೆ, ಹಿಂಭಾಗ ಬೆನ್ನು. ಎದೆಯಲ್ಲಿ ಶ್ವಾಸಕೋಶವೆಂಬ ಉಸಿರಿನ ಚೀಲವೂ, ಹೃದಯವೆಂಬ ರಕ್ತದ ಚೀಲವೂ ಇವೆ.

ಹೊಟ್ಟೆಯಲ್ಲಿ ನಾವು ತಿಂದ ಆಹಾರವನ್ನು ಅರಗಿಸುವ ಅವಯವಗಳಿವೆ. ತೋಳಿನಲ್ಲಿ ರಟ್ಟೆ, ಮೊಣಕೈ, ಕೈ ಎಂಬ ಭಾಗಗಳಿವೆ. ತೋಳಿನ ಮೇಲುಭಾಗವೆ ಹೆಗಲು. ಕಾಲಿನಲ್ಲಿ ತೊಡೆ, ಮೊಣಕಾಲು, ಪಾದ ಎಂಬ ಭಾಗಗಳಿವೆ.

ಕೈಯಿಂದ ಹಿಡಿಯುತ್ತೇವೆ, ಬರೆಯುತ್ತೇವೆ; ಕಾಲಿನಿಂದ ನಡೆಯುತ್ತೇವೆ, ನಿಲ್ಲುತ್ತೇವೆ.

ಹೀಗೆ ದೇಹದ ಎಲ್ಲ ಅವಯವಗಳೂ ತಮ್ಮ ತಮ್ಮ ಕೆಲಸ ಮಾಡುವಂತೆ ದೇವರು ಏರ್ಪಡಿಸಿದ್ದಾನೆ.

೫೩. ಬಂಗಾರ ಮತ್ತು ಬೆಳ್ಳಿ

ಬಂಗಾರ, ಬೆಳ್ಳಿ, ತಾಮ್ರ, ಸೀಸ ಮತ್ತು ಕಬ್ಬಿಣ ಇವೇ ಪಂಚಲೋಹಗಳು. ಇವುಗಳಲ್ಲಿ ಬಂಗಾರವೂ ಬೆಳ್ಳಿಯೂ ಉತ್ತಮವಾದುವು. ಇವು ಗಣಿಗಳಲ್ಲಿ ಸಿಕ್ಕುತ್ತವೆ. ಮಿಕ್ಕ ಲೋಹಗಳಿಗಿಂತ ಇವಕ್ಕೇ ಬೆಲೆ ಹೆಚ್ಚು. ಬಂಗಾರವನ್ನು ಚಿನ್ನವೆಂತಲೂ ಕರೆಯುತ್ತಾರೆ. ಯಾವ ಬೆರಕೆಯೂ ಇಲ್ಲದೆ ಶುದ್ಧವಾಗಿರುವ ಚಿನ್ನವನ್ನು "ಚೊಕ್ಕ ಚಿನ್ನ" ಅಥವಾ "ಅಪರಂಜಿ" ಎಂದು ಕರೆಯುತ್ತಾರೆ. ಶುದ್ಧವಾದ ಬೆಳ್ಳಿಯನ್ನು "ಚೊಕ್ಕ ಬೆಳ್ಳಿ" ಅಥವಾ "ಹಾಲು ಬೆಳ್ಳಿ" ಎಂದು ಕರೆಯುವರು.

ಬಂಗಾರ ಹೊಳಪಾದ ಅರಸಿನ ಬಣ್ಣದ ಲೋಹ. ಇದು ಬೆಳ್ಳಿಗಿಂತ ಮೆದು. ಇದನ್ನು ಸುಲಭವಾಗಿ ಕರಗಿಸಬಹುದು. ಬಹಳ ತೆಳುವಾದ ರೇಕುಗಳಾಗಿ ಬಡಿಯಬಹುದು. ಕೂದಲಿಗಿಂತಲೂ ಸಣ್ಣದಾದ ಸರಿಗೆಗಳಾಗಿ ಎಳೆಯಬಹುದು. ಇದನ್ನು ಕಾಯಿಸಿದರೆ ಬಣ್ಣ ಕೆಡುವುದಿಲ್ಲ, ಹೊಳಪೂ ಹೋಗುವುದಿಲ್ಲ. ಶುದ್ಧವಾದ ಚಿನ್ನ ಬಹಳ ಮೃದು. ಅದರಿಂದ ಮಾಡಿದ ನಗನಾಣ್ಯಗಳು ಬೇಗನೆ ಸವೆಯುತ್ತವೆ. ಆದ್ದರಿಂದ ಚಿನ್ನದೊಡನೆ ಸ್ವಲ್ಪ ಬೆಳ್ಳಿಯನ್ನಾಗಲಿ ತಾಮ್ರವನ್ನಾಗಲಿ ಬೆರಸುವರು. ಅಡ್ಡಿಕೆ, ಸರ, ಕೈಬಳೆ, ನಾಗರ, ಪಟ್ಟಿ ಮುಂತಾದ ಆಭರಣಗಳನ್ನೂ ಸವರನ್ ಮೊದಲಾದ ನಾಣ್ಯಗಳನ್ನೂ ಚಿನ್ನದಿಂದ ಮಾಡುತ್ತಾರೆ. ನಮ್ಮ ದೇಶದಲ್ಲಿ ಹಿಂದೆ ಕಂಠೀರಾಯವರಹ ಎಂಬ ಚಿನ್ನದ ನಾಣ್ಯವನ್ನು ಉಪಯೋಗಿಸುತ್ತಿದ್ದರು.

ಬೆಳ್ಳಿ ಬೆಳ್ಳಗೆ ಹೊಳೆಯುವ ಮೆದುವಾದ ಲೋಹ. ಇದರಿಂದಲೂ ತೆಳುವಾದ ರೇಕುಗಳನ್ನೂ ಸರಿಗೆಗಳನ್ನೂ ಮಾಡಬಹುದು. ಬೆಳ್ಳಿಯಿಂದ ಕಾಲುಕಡಗ, ರುಳಿ, ಒಡ್ಯಾಣ ಮುಂತಾದ ಆಭರಣಗಳೂ ತಟ್ಟೆ ಬಟ್ಟಲು ಮೊದಲಾದುವೂ ಆಗುತ್ತವೆ. ರೂಪಾಯಿ, ಅರ್ಧರೂಪಾಯಿ, ಪಾವಲಿ ಮುಂತಾದ ನಾಣ್ಯಗಳನ್ನು ಸ್ವಲ್ಪ ತಾಮ್ರ ಬೆರಸಿದ ಬೆಳ್ಳಿಯಿಂದ ಮಾಡುತ್ತಾರೆ.

ಚಿನ್ನ, ಬೆಳ್ಳಿ ಇವುಗಳ ಸರಿಗೆಗಳನ್ನು ಸೀರೆ, ಧೋತ್ರ, ಶಾಲು ಮುಂತಾದುವುಗಳಿಗೆ ಹಾಕಿ ನೇಯುವುದುಂಟು.

ಬೆಳ್ಳಿಯ ಪಾತ್ರೆಗಳಿಗೆ ಚಿನ್ನದಿಂದಲೂ ಹಿತ್ತಾಳೆಯ ಪಾತ್ರೆಗಳಿಗೆ ಬೆಳ್ಳಿಯಿಂದಲೂ ಕೆಲವು ವೇಳೆ ಮುಲಾಮು ಮಾಡುವುದುಂಟು.

ನಮ್ಮ ಮೈಸೂರು ಸೀಮೆಯಲ್ಲಿ ಕೋಲಾರ ಡಿಸ್ಟ್ರಿಕ್ಟಿನ ಉರಿಗದ ಬಳಿ ಚಿನ್ನದ ಗಣಿಗಳಿವೆ. ಪ್ರತಿವರ್ಷವೂ ಸುಮಾರು ಮೂರು ಕೋಟಿ ರೂಪಾಯಿ ಬೆಲೆಯ ಚಿನ್ನವನ್ನು ಅವುಗಳಿಂದ ತೆಗೆಯುತ್ತಾರೆ.

೫೪. ಆರೋಗ್ಯ

ಆರೋಗ್ಯವೆಂದರೆ ರೋಗವಿಲ್ಲದೆ ಇರುವುದು. ಆರೋಗ್ಯವಾಗಿದ್ದರೆ ನಮ್ಮ ದೇಹದ ಎಲ್ಲ ಅವಯವಗಳೂ ತಮ್ಮ ತಮ್ಮ ಕೆಲಸವನ್ನು ಸರಿಯಾಗಿ ಮಾಡುತ್ತವೆ. ಆಗ ನಮಗೆ ಹರ್ಷವಿರುತ್ತದೆ. ಯಾವ ಕೆಲಸವಾದರೂ ಉಲ್ಲಾಸದಿಂದ ಮಾಡಬಹುದು. ನಾವು ಆರೋಗ್ಯವಾಗಿರಬೇಕಾದರೆ ಒಳ್ಳೆಯ ಊಟ, ಒಳ್ಳೆಯ ನೀರು ಮತ್ತು ಒಳ್ಳೆಯ ಗಾಳಿಯನ್ನು ಸೇವಿಸಬೇಕು. ನಮ್ಮ ಮೈ ಬಟ್ಟೆಗಳು ಚೊಕ್ಕಟವಾಗಿರಬೇಕು. ಕಾಲಕಾಲಕ್ಕೆ ವ್ಯಾಯಾಮ ತೆಗೆದುಕೊಳ್ಳಬೇಕು. ಮುನ್ನೆಚ್ಚರಿಕೆಯೇ ರೋಗಕ್ಕೆ ಮದ್ದು.

ನಾವು ತಿನ್ನುವ ಆಹಾರ ಚೆನ್ನಾಗಿ ಬೆಂದಿರಬೇಕು. ಬೇಯದ ಪದಾರ್ಥಗಳನ್ನೂ ಹಣ್ಣಾಗದ ಕಸುಗಾಯಿಗಳನ್ನೂ ತಿಂದರೆ ಹೊಟ್ಟೆನೋವು ಬರುತ್ತದೆ. ಹಳಸಿದ ತಿಂಡಿಯನ್ನಾಗಲಿ ಕೊಳೆತ ಹಣ್ಣುಕಾಯಿಗಳನ್ನಾಗಲಿ ತಿನ್ನಬಾರದು. ಆಹಾರವನ್ನು ಮಿತವಾಗಿ ತೆಗೆದುಕೊಳ್ಳಬೇಕು.

ಕೆಟ್ಟನೀರನ್ನು ಕುಡಿಯುವುದರಿಂದ ಕೆಟ್ಟ ಜ್ವರಗಳು, ವಾಂತಿ, ಭೇದಿ ಮುಂತಾದ ರೋಗಗಳು ಬರುತ್ತವೆ. ಆಳವಾದ ಬಾವಿಯ ನೀರು ಮತ್ತು ನಲ್ಲಿಗಳ ನೀರು ಒಳ್ಳೆಯದು. ಶುದ್ಧವಾದ ನೀರು ಸಿಕ್ಕದ ಕಡೆಗಳಲ್ಲಿ ನೀರನ್ನು ಚೆನ್ನಾಗಿ ಕಾಯಿಸಿ ಶೋಧಿಸಿ ಕುಡಿಯಬೇಕು.

ಕೆಟ್ಟಗಾಳಿಯನ್ನು ಉಸಿರಾಡುವುದರಿಂದ ತಲೆನೋವು, ವಾಂತಿ ಮುಂತಾದುವು ಉಂಟಾಗುತ್ತವೆ. ಮನೆಗಳಲ್ಲಿ ಕೆಟ್ಟಗಾಳಿ ಇಲ್ಲದಂತೆ ಕಸವನ್ನೂ ಹೇಸಿಗೆಯನ್ನೂ ಹೊರಕ್ಕೆ ಹಾಕಬೇಕು. ಕಿಟಕಿಗಳನ್ನೂ ಬಾಗಿಲುಗಳನ್ನೂ ಚೆನ್ನಾಗಿ ತೆರೆದು, ಶುದ್ಧವಾದ ಗಾಳಿ ಸಂಚರಿಸುವಂತೆ ಮಾಡಬೇಕು.

ನಮ್ಮ ಮೈಯನ್ನು ಯಾವಾಗಲೂ ಚೊಕ್ಕಟವಾಗಿಟ್ಟುಕೊಳ್ಳಬೇಕು. ಇದಕ್ಕಾಗಿ ಪ್ರತಿದಿವಸವೂ ಶುದ್ಧವಾದ ನೀರಿನಲ್ಲಿ ಸ್ನಾನಮಾಡಬೇಕು. ಒಗೆದು ಚೊಕ್ಕಟವಾದ ಬಟ್ಟೆಗಳನ್ನು ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಕಜ್ಜಿ ತುರಿ ಮೊದಲಾದ ಚರ್ಮದ ರೋಗಗಳು ಬರುತ್ತವೆ.

ನಿತ್ಯವೂ ತಪ್ಪದೆ ವ್ಯಾಯಾಮ ತೆಗೆದುಕೊಳ್ಳಬೇಕು. ಓಡುವುದು, ಆಡುವುದು, ದಂಡೆ ಒತ್ತುವುದು, ಕುಸ್ತಿಮಾಡುವುದು ಇವೆಲ್ಲ ಒಳ್ಳೆಯ ಅಂಗ ಸಾಧನೆಗಳು. ಹೀಗೆ ಮಾಡಿದರೆ ತಿಂದ ಆಹಾರ ಜೀರ್ಣಿಸುತ್ತದೆ. ಮಾಂಸ ಖಂಡಗಳು ಬಲಿಯುತ್ತವೆ. ದೇಹಕ್ಕೆ ಬಲ ಬರುತ್ತದೆ. ಆರೋಗ್ಯ ಹೆಚ್ಚುತ್ತದೆ.

೫೫. ವೈದ್ಯಶಾಲೆ

ರೋಗ ಔಷಧದಿಂದ ವಾಸಿಯಾಗುತ್ತದೆ. ಔಷಧಕೊಟ್ಟು ರೋಗ ವಾಸಿಮಾಡುವವನಿಗೆ ವೈದ್ಯನೆಂದು ಹೆಸರು. ಔಷಧವನ್ನು ಕೊಡುವುದಕ್ಕೆ ಏರ್ಪಡಿಸಿರುವ ಸ್ಥಳವೆ ವೈದ್ಯಶಾಲೆ ಅಥವಾ ಆಸ್ಪತ್ರೆ.

ನಮ್ಮ ದೇಶದಲ್ಲಿ ಪೂರ್ವಕಾಲದಿಂದ ವೈದ್ಯಶಾಲೆಗಳಿವೆ. ಆಯುರ್ವೇದ ಪಂಡಿತರು ಗಿಡಗಳ ಎಲೆ, ಬೇರು, ಹೂವು ಮತ್ತು ಕಾಯಿಗಳಿಂದ ಔಷಧಗಳನ್ನು ಮಾಡಿ ರೋಗವನ್ನು ಪರಿಹರಿಸುತ್ತಾರೆ. ಡಾಕ್ಟರುಗಳೆಂಬ ಇಂಗ್ಲೀಷು ಓದಿದ ವೈದ್ಯರು ಶಸ್ತ್ರಚಿಕಿತ್ಸೆಯಿಂದಲೂ ಇತರ ಔಷಧಗಳಿಂದಲೂ ರೋಗಗಳನ್ನು ಗುಣಪಡಿಸುತ್ತಾರೆ.

ರೋಗಿ ಔಷಧಶಾಲೆಗೆ ಹೋದಕೂಡಲೆ ವೈದ್ಯನು ಅವನ ಸ್ಥಿತಿಯನ್ನು ಪರೀಕ್ಷಿಸುತ್ತಾನೆ. ಅವನ ರೋಗವನ್ನು ಗೊತ್ತುಮಾಡಿ ಪುಸ್ತಕದಲ್ಲಿಯೂ ಒಂದು ಚೀಟಿಯಲ್ಲಿಯೂ ರೋಗಿಯ ಹೆಸರು, ವಯಸ್ಸು, ರೋಗದ ಹೆಸರು, ಔಷಧಿ ಮುಂತಾದುವುಗಳನ್ನು ಬರೆಯುತ್ತಾನೆ. ಚೀಟಿಯನ್ನು ಮಾತ್ರ ರೋಗಿಯ ಕೈಯಲ್ಲಿ ಕೊಡುತ್ತಾನೆ. ಆ ಚೀಟಿಯನ್ನು ಔಷಧಿಕೊಡುವ ಕಾಂಪೌಂಡರಿಗೆ ತೋರಿಸಬೇಕು. ಅವನು ಚೀಟಿಯಲ್ಲಿರುವ ಔಷಧವನ್ನು ರೋಗಿಗೆ ಕೊಡುತ್ತಾನೆ.


ಈಚೆಗೆ ವೈದ್ಯಶಾಸ್ತ್ರ ಬಹಳವಾಗಿ ಮುಂದುವರಿದಿದೆ. ಕಣ್ಣು, ಕಿವಿ, ಮೂಗು, ಗಂಟಲು ಮುಂತಾದ ಅವಯವಗಳಿಗೆ ಬರುವ ರೋಗಗಳನ್ನು ಪರೀಕ್ಷಿಸುವುದಕ್ಕೆ ಬೇರೆಬೇರೆ ಆಸ್ಪತ್ರೆಗಳೇ ಇವೆ. ಅವುಗಳಿಗೆಲ್ಲ ಬೇರೆ ಬೇರೆ ವೈದ್ಯರೇ ಇದ್ದಾರೆ. ಆ ರೋಗಗಳನ್ನು ಗೊತ್ತುಹಚ್ಚುವುದಕ್ಕೂ ಅವುಗಳನ್ನು ವಾಸಿಮಾಡುವುದಕ್ಕೂ ಬೇಕಾದ ಯಂತ್ರಸಾಮಗ್ರಿಗಳಿವೆ.

ರೋಗ ಬಲವಾಗಿದ್ದರೆ ರೋಗಿಯನ್ನು ಆಸ್ಪತ್ರೆಯಲ್ಲಿಯೇ ಇಟ್ಟುಕೊಳ್ಳುತ್ತಾರೆ. ಇದಕ್ಕಾಗಿ ಪ್ರತಿಯೊಂದು ಆಸ್ಪತ್ರೆಯಲ್ಲಿಯೂ ರೋಗಿಗಳ ಕಾವಲುಗಳು ಇರುತ್ತವೆ. ವೈದ್ಯರು ಕಾಲಕಾಲಕ್ಕೆ ರೋಗಿಗಳ ಸ್ಥಿತಿಯನ್ನು ಪರೀಕ್ಷಿಸಿ ಚಿಕಿತ್ಸೆಮಾಡುತ್ತಾರೆ. ರೋಗಿಗೆ ಬೇಕಾದ ಶುಚಿಯಾದ ಬಟ್ಟೆಬರೆಗಳನ್ನು ಆಸ್ಪತ್ರೆಯವರೇ ಕೊಡುತ್ತಾರೆ.

ಸರಕಾರದವರು ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ದೊಡ್ಡದೊಡ್ಡ ಆಸ್ಪತ್ರೆಗಳನ್ನು ಇಟ್ಟಿದ್ದಾರೆ. ದೇಶದ ಮುಖ್ಯವಾದ ಊರುಗಳಲ್ಲೆಲ್ಲ ಸಾಮಾನ್ಯವಾದ ಆಸ್ಪತ್ರೆಗಳಿವೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಹೆಂಗಸರಿಗಾಗಿಯೇ ಬೇರೆಬೇರೆ ಆಸ್ಪತ್ರೆಗಳಿವೆ. ಇಲ್ಲಿ ಹೆರಿಗೆಗೂ ಅನುಕೂಲಪಡಿಸಿದ್ದಾರೆ.

ಜನರು ರೋಗಗಳನ್ನು ಮುಚ್ಚಿಡದೆ ಬೇಗ ವೈದ್ಯರಿಗೆ ತೋರಿಸಬೇಕು. ವೈದ್ಯರು ಕೊಡುವ ಔಷಧಗಳನ್ನು ತಪ್ಪದೆ ತೆಗೆದುಕೊಳ್ಳಬೇಕು.

೫೬. ಮೈಸೂರು ದೇಶದ ಸಂಚಾರ



ಮೈಸೂರು ಸಂಸ್ಥಾನ ಬಹಳ ಸೊಗಸಾದ ದೇಶ. ಅನೇಕರು ನಮ್ಮ ದೇಶವನ್ನು ನೋಡಲು ಬರುತ್ತಾರೆ. ಇಲ್ಲಿನ ನೋಟಗಳನ್ನು ಕೊಂಡಾಡಿ ಹಿಂದಿರುಗುತ್ತಾರೆ.

ರಾಜಧಾನಿಯಾದ ಮೈಸೂರಿಂದ ರೈಲು ಮೂರು ಕಡೆಗಳಿಗೆ ಹೋಗುತ್ತದೆ. ಉತ್ತರಕ್ಕೆ ಬೆಂಗಳೂರಿಗೆ, ಅಲ್ಲಿಂದ ಮದರಾಸು, ಬೊಂಬಾಯಿಗಳಿಗೆ ಹೋಗುತ್ತದೆ. ದಕ್ಷಿಣದ ಕಡೆ ಹೋಗುವ ರೈಲು ನಂಜನಗೂಡು ಚಾಮರಾಜನಗರಗಳಿಗೆ ಹೋಗುತ್ತದೆ. ನಂಜನಗೂಡು ಪ್ರಸಿದ್ಧವಾದ ಯಾತ್ರಾಸ್ಥಳ. ಇಲ್ಲಿ ಶ್ರೀಕಂಠೇಶ್ವರಸ್ವಾಮಿಯ ದೇವಸ್ಥಾನವಿದೆ.

ನಾವು ಹಾಸನದ ರೈಲನ್ನು ಹತ್ತಿ ಹೊರಟರೆ ಮುಂದೆ ಹತ್ತು ಮೈಲಿ ಗಳೊಳಗಾಗಿ ಕನ್ನಂಬಾಡಿ ಕಟ್ಟೆಯನ್ನು ನೋಡಬಹುದು. ಇಲ್ಲಿ ನಮ್ಮ ದೇಶದ ಶಿಲ್ಪಿಗಳು ಕಾವೇರಿ ನದಿಗೆ ಅಡ್ಡಗಟ್ಟೆಹಾಕಿ ಕೃಷ್ಣರಾಜಸಾಗರ ಎಂಬ ದೊಡ್ಡ ಕೆರೆಯನ್ನು ಕಟ್ಟಿದ್ದಾರೆ. ಇಂತಹ ದೊಡ್ಡ ಕೆರೆ ಇಂಡಿಯಾ ದೇಶದಲ್ಲಿ ಮತ್ತೆಲ್ಲಿಯೂ ಇಲ್ಲ.

ಇಲ್ಲಿರುವ ಕಾವೇರಿ ನದಿ ಶ್ರೀರಂಗಪಟ್ಟಣ ಮತ್ತು ತಲಕಾಡು ಎಂಬ ಹಿಂದಿನ ರಾಜಧಾನಿಗಳ ಪಕ್ಕದಲ್ಲಿ ಹರಿದು ಶಿವನಸಮುದ್ರದ ಬಳಿ ದುಮುಕುತ್ತದೆ. ಶಿವನಸಮುದ್ರದಲ್ಲಿ ಸರ್ಕಾರದವರು ಯಂತ್ರಗಳನ್ನು ಇಟ್ಟು ವಿದ್ಯುಚ್ಛಕ್ತಿ ಪಡೆಯುತ್ತಿದಾರೆ.

ಹಾಸನ ಜಿಲ್ಲೆಯಲ್ಲಿ ಹಿಂದಿನ ಕಾಲದ ಶಿಲ್ಪಿಗಳು ಕೆಲವು ಆಶ್ಚರ್ಯ ವಸ್ತುಗಳನ್ನು ಮಾಡಿಟ್ಟಿದ್ದಾರೆ. ಶ್ರವಣಬೆಳುಗೊಳದ ಗೊಮ್ಮಟೇಶ್ವರ ವಿಗ್ರಹ, ಬೇಲೂರು ಹಳೆಯಬೀಡುಗಳ ದೇವಸ್ಥಾನಗಳು, ಇವುಗಳನ್ನು ಕುರಿತು ಹಿಂದೆ ಓದಿದ್ದೀರಿ.

ಹಾಸನ, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳ ಪಶ್ಚಿಮ ಭಾಗ ಮಲೆನಾಡು. ಅಲ್ಲಿ ಬೆಟ್ಟದ ಸಾಲುಗಳು ಬಹಳ ಎತ್ತರವಾಗಿ ಒತ್ತಾಗಿ ಹಬ್ಬಿವೆ. ಬೆಟ್ಟದ ತಪ್ಪಲುಗಳಲ್ಲಿಯೂ ಕಣಿವೆಗಳಲ್ಲಿಯೂ ಸೊಗಸಾದ ಅಡಕೆಯ ಮತ್ತು ಬಾಳೆಯ ತೋಟಗಳೂ, ಕಾಫಿ, ಏಲಕ್ಕಿ ಮತ್ತು ಮೆಣಸಿನ ತೋಟಗಳೂ ಇವೆ.

ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಬಾಬಾಬುಡನ್ ಬೆಟ್ಟಗಳು ನಮ್ಮ ದೇಶದಲ್ಲಿ ಬಹಳ ಎತ್ತರವಾದುವು. ಅಲ್ಲಿರುವ ಮುಳ್ಳಯ್ಯನಗಿರಿ ಬಹಳ ಎತ್ತರವಾದ ಶಿಖರ. ಈ ಬೆಟ್ಟಗಳಮೇಲೆ ನಾವು ಹೋಗುವಾಗ ಅಡಿಗಡಿಗೆ ಮೋಡಗಳು ನಮ್ಮನ್ನು ಮುಚ್ಚಿಬಿಡುತ್ತವೆ. ಕೆಳಗಿರುವ ಕಣಿವೆ ಗಳಿಂದ ಮೋಡಗಳು ವಿಮಾನಗಳಂತೆ ಹತ್ತಿ ಆಕಾಶದಲ್ಲಿ ತೇಲಾಡುತ್ತವೆ. ಈ ಬೆಟ್ಟಗಳಿಗೆ ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳಿವೆ. ಘಟ್ಟದ ಕೆಳಗಿರುವ ಮಂಗಳೂರು, ಉಡುಪಿ ಮುಂತಾದ ಊರುಗಳಿಗೆ ಹೋಗುವುದಕ್ಕೆ ಘಟ್ಟದ ರಸ್ತೆಗಳಿವೆ. ಆಗುಂಬೆ ಘಾಟಿ, ಹುಲಿಕಲ್ ಘಾಟಿ, ಎಂಬವು ಸೊಗಸಾದ ಸ್ಥಳಗಳು. ಅಲ್ಲಿಂದ ಅರಬ್ಬೀ ಸಮುದ್ರ ಕಾಣುತ್ತದೆ.

ಶಿವಮೊಗ್ಗದ ಡಿಸ್ಟ್ರಿಕ್ಟಿನಲ್ಲಿ ಗೇರುಸೊಪ್ಪೆ ಜಲಪಾತವಿದೆ. ಇದನ್ನೆ ಜೋಗ ಎಂದು ಕರೆಯುತ್ತಾರೆ. ಅಲ್ಲಿ ಶರಾವತಿ ನದಿ ಸುಮಾರು ಒಂಬೈನೂರು ಅಡಿಗಳ ಎತ್ತರದಿಂದ ಕೆಳಕ್ಕೆ ದುಮುಕುತ್ತದೆ. ಇದನ್ನು ನೋಡಿ ಕಣ್ಣು ದಣಿಯದು. ಆಕಾಶದಿಂದ ದುಮುಕುತ್ತಿರುವ ಹಾಲಿನ ನದಿಯಂತೆ ಕೆಳಗೆ ನಿಂತವರಿಗೆ ಕಾಣುತ್ತದೆ. ಮಧ್ಯದಲ್ಲಿ ನೂರಾರು ಕಾಮನ ಬಿಲ್ಲುಗಳು ಬಗೆಬಗೆಯ ಬಣ್ಣಗಳನ್ನು ಹರಡುತ್ತವೆ. ಕೆಳಗಿನ ಹೊಂಡದಲ್ಲಿ ಕುದಿಯುತ್ತಿರುವ ಹಾಲಿನಂತೆ ನೀರಿನ ರಾಶಿ ಕಾಣುತ್ತದೆ.

ಗೇರುಸೊಪ್ಪೆಯ ಜಲಪಾತದಿಂದ ಹಿಂದಿರುಗಿ ಶಿವಮೊಗ್ಗೆಗೆ ಬಂದರೆ ತುಂಗಾ ನದಿ ವಿಶಾಲವಾಗಿ ಹರಿಯುವುದು ಕಾಣುತ್ತದೆ. ಅಲ್ಲಿ ರೈಲನ್ನು ಹತ್ತಿ ಭದ್ರಾವತಿಗೆ ಬರಬಹುದು. ಇಲ್ಲಿ ನಮ್ಮ ಸರ್ಕಾರದವರು ದೊಡ್ಡ ಕಬ್ಬಿಣದ ಕಾರ್ಖಾನೆ ಇಟ್ಟಿದ್ದಾರೆ. ಬಾಬಾಬುಡನ್ ಬೆಟ್ಟಗಳಲ್ಲಿ ದೊರೆಯುವ ಕಬ್ಬಿಣದ ಅದುರುಗಳನ್ನು ಇಲ್ಲಿಗೆ ತಂದು ದೊಡ್ಡ ಕುಲುಮೆಯಲ್ಲಿ ಕರಗಿಸಿ ಕಬ್ಬಿಣ ಮಾಡುತ್ತಾರೆ. ಈ ಭದ್ರಾವತಿಯ ಪಕ್ಕದಲ್ಲಿ ಭದ್ರಾ ನದಿ ಹರಿಯುತ್ತದೆ. ತುಂಗಾ ಮತ್ತು ಭದ್ರಾ ನದಿಗಳು ಶಿವಮೊಗ್ಗೆಗೆ ಸುಮಾರು ಹತ್ತು ಮೈಲಿ ದೂರದಲ್ಲಿ ಸಂಗಮ ಆಗುತ್ತವೆ.

ಹೀಗೆ ಸಂಗಮವಾದ ನದಿಗಳು ಮುಂದೆ ತುಂಗಭದ್ರಾ ಎನಿಸುತ್ತವೆ. ಈ ದೊಡ್ಡ ನದಿ ನಮ್ಮ ಸೀಮೆಯನ್ನು ಹರಿಹರದ ಬಳಿ ಬಿಡುತ್ತದೆ. ಹರಿಹರ ನಮ್ಮ ಸೀಮೆಗೆ ಕೊನೆಯ ರೈಲ್ ಸ್ಟೇಷನ್. ಹರಿಹರ ಮತ್ತು ದಾವಣಗೆರೆ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಸೇರಿವೆ. ದಾವಣಗೆರೆ ದೊಡ್ಡ ಊರು. ಇಲ್ಲಿ ಹತ್ತಿಯ ಬೀಜ ಬಿಡಿಸುವ ಕಾರ್ಖಾನೆಗಳಿವೆ. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ವಾಣೀವಿಲಾಸ ಸಾಗರ ಅಥವಾ ಮಾರಿಕಣಿವೆ ಕೆರೆ ಇದೆ. ವೇದಾವತಿ ನದಿಗೆ ಅಡ್ಡಗಟ್ಟೆಹಾಕಿ ಇದನ್ನು ಕಟ್ಟಿದ್ದಾರೆ.

ಚಿತ್ರದುರ್ಗ, ತುಮಕೂರು, ಬೆಂಗಳೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಟ್ಟಗುಡ್ಡಗಳಿಲ್ಲ. ದೊಡ್ಡ ಕಾಡುಗಳಿಲ್ಲ. ತುಮಕೂರು ಡಿಸ್ಟ್ರಿಕ್ಟಿನಲ್ಲಿ ದೇವರಾಯ ದುರ್ಗದ ಪ್ರಾಂತ ರಮ್ಯವಾಗಿದೆ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಕಾನ್‌ಕಾನ್‌ಹಳ್ಳಿಯ ಪ್ರಾಂತ ಬೆಟ್ಟಗುಡ್ಡಗಳಿಂದಲೂ ಕಾಡುಗಳಿಂದಲೂ ಕೂಡಿದೆ.

ಕೋಲಾರ ಡಿಸ್ಟ್ರಿಕ್ಟು ಬಂಗಾರದ ಗಣಿಗಳಿಗೆ ಪ್ರಸಿದ್ಧವಾಗಿದೆ. ರಾಬರ್ಟಸನ್‌ಪೇಟೆ ಅಥವಾ ಉರಿಗ ಎಂಬ ಊರು ಕೈಗಾರಿಕೆಯ ಊರಾಗಿದೆ. ಇಲ್ಲಿ ಬಂಗಾರದ ಅದುರುಗಳನ್ನು ತೆಗೆಯುವುದಕ್ಕೆ ಸಾವಿರಾರು ಅಡಿಗಳ ಆಳದ ಬಾವಿಗಳನ್ನು ತೋಡಿದ್ದಾರೆ. ಈ ಬಾವಿಗಳ ಒಳಗಡೆ ಸುರಂಗಗಳನ್ನು ಕೊರೆದು ದಾರಿಮಾಡಿದ್ದಾರೆ. ಬಂಗಾರದ ಗಣಿಗಳನ್ನು ಅಗೆದು ಅದುರುಗಳನ್ನು ಮೇಲಕ್ಕೆ ತರುತ್ತಾರೆ. ಅದುರುಗಳನ್ನು ಪುಡಿ ಮಾಡಿ ನೀರಿನಲ್ಲಿ ತೊಳೆದು ಪಾದರಸದಲ್ಲಿ ಸೇರಿಸಿ ಬಂಗಾರ ತೆಗೆಯುತ್ತಾರೆ.


ಹೀಗೆ ನಮ್ಮ ದೇಶದ ಕೆಲವು ಸ್ಥಳಗಳಲ್ಲಿ ಹಿಂದಿನ ಕಾಲದ ಸುಂದರ ದೇವಾಲಯಗಳಿವೆ. ಕೆಲವು ಸ್ಥಳಗಳಲ್ಲಿ ರಮ್ಯವಾದ ಅಡಕೆ, ತೆಂಗು, ಬಾಳೆ ಮತ್ತು ಏಲಕ್ಕಿಯ ತೋಟಗಳಿವೆ. ಕೆಲವು ಸ್ಥಳಗಳಲ್ಲಿ ಶ್ರೀಗಂಧ, ತೇಗ, ಮತ್ತಿ, ಕರಿಯಮರ ಮುಂತಾದುವುಗಳ ದೊಡ್ಡ ಕಾಡುಗಳಿವೆ. ಕೆಲವು ಸ್ಥಳಗಳಲ್ಲಿ ಮೋಡಗಳು ಮುತ್ತಿಕ್ಕುವ ಎತ್ತರವಾದ ಬೆಟ್ಟದ ಸಾಲುಗಳಿವೆ. ಕೆಲವು ಸ್ಥಳಗಳಲ್ಲಿ ಮನಸ್ಸನ್ನು ಸಂತೋಷಗೊಳಿಸುವ ಜಲಪಾತಗಳಿವೆ. ಇವುಗಳಲ್ಲದೆ ಕಬ್ಬಿಣದ ಗಣಿಗಳು, ಬಂಗಾರದ ಗಣಿಗಳು, ಕಾರ್ಖಾನೆಗಳು, ಎಲ್ಲವೂ ಇವೆ. ನಮ್ಮದು ಚೆಲುವಿನ ನಾಡು, ಸುಖದ ಬೀಡು.

೫೭. ಸಿಂದಬಾದ್ ನಾವಿಕ

ಪೂರ್ವಕಾಲದಲ್ಲಿ ಬಾಗದಾದ್ ಎಂಬುದು ಒಂದು ದೊಡ್ಡ ಪಟ್ಟಣ ವಾಗಿತ್ತು. ಅಲ್ಲಿ ಸಿಂದಬಾದ್ ಎಂಬ ನಾವಿಕನು ವಾಸಮಾಡುತ್ತಿದ್ದನು. ಅವನು ಆಗಾಗ ಹಡಗಿನಲ್ಲಿ ಸಾಮಾನು ಹೇರಿಕೊಂಡು ವ್ಯಾಪಾರಕ್ಕೆ ಹೋಗುತ್ತಿದ್ದನು. ಈ ವ್ಯಾಪಾರದಿಂದ ಅವನು ಬಹಳ ಹಣಗಾರ ನಾಗಿದ್ದನು. ಆದರೆ ಹೀಗೆ ಸಮುದ್ರದಮೇಲೆ ಹೋಗುತ್ತಿದ್ದಾಗ ಅವನು ಅನೇಕ ಅಪಾಯಗಳಿಗೆ ಸಿಕ್ಕಿಬಿದ್ದಿದ್ದನು. ದೇವರ ದಯೆಯಿಂದ ಅವುಗಳನ್ನು ತಪ್ಪಿಸಿಕೊಂಡು ಹಿಂದಿರುಗುತ್ತಿದ್ದನು.

ಒಂದಾನೊಂದು ದಿನ ಸಿಂದಬಾದನು ಜೊತೆಯ ವರ್ತಕರೊಡನೆ ಹಡಗಿನಲ್ಲಿ ಹೊರಟನು. ಸಮುದ್ರದಮೇಲೆ ಹೋಗುತ್ತಿದ್ದಾಗ ಒಂದು ಸುಂದರವಾದ ದ್ವೀಪ ಸಿಕ್ಕಿತು. ಹಡಗನ್ನು ಯಜಮಾನನು ಅಲ್ಲಿ ನಿಲ್ಲಿಸಿದನು.

ವರ್ತಕರು ಹಡಗಿಂದ ಇಳಿದು ಮರಗಿಡಗಳ ಸೊಬಗನ್ನು ನೋಡುವುದಕ್ಕೆ ಹೊರಟರು. ಸಿಂದಬಾದನು ಕೂಡ ಸ್ವಲ್ಪ ಆಹಾರವನ್ನು ಕಟ್ಟಿಕೊಂಡು ದ್ವೀಪದ ಒಂದು ಭಾಗಕ್ಕೆ ಹೋದನು. ಹೂವುಗಳ ವಾಸನೆ ಇಂಪಾಗಿತ್ತು.



ಗಾಳಿ ಸುಖವಾಗಿ ಬೀಸುತ್ತಿತ್ತು. ಊಟವನ್ನು ಮುಗಿಸಿದನು. ಹಾಗೆಯೇ ಅವನಿಗೆ ನಿದ್ದೆ ಬಂತು. ಎಷ್ಟುಹೊತ್ತು ನಿದ್ದೆಮಾಡಿದನೋ ಅವನಿಗೆ ತಿಳಿಯದು. ಎಚ್ಚರವಾದಾಗ ಅವನು ಸುತ್ತಲೂ ನೋಡಿದನು. ಹಡಗು ಹೊರಟುಹೋಗಿತ್ತು. ವರ್ತಕರು ಯಾರೂ ಇರಲಿಲ್ಲ.

ಸಿಂದಬಾದನಿಗೆ ಬಹಳ ಭಯವಾಯಿತು; ಬಹಳ ದುಃಖ ಬಂತು. "ಅಯ್ಯೋ ದೇವರೆ! ನನ್ನ ಗತಿಯೇನು?" ಎಂದುಕೊಂಡನು. ಅವನು ಮುಂದೆ ಹೋಗುತ್ತಿರಲು ಅಲ್ಲಿ ಒಂದು ವಸ್ತು ಕಾಣಿಸಿತು. ಅದು ಬೆಳ್ಳಗೆ, ಗುಂಡಗೆ, ನುಣ್ಣಗೆ ಒಂದು ತೆಂಗಿನ ಮರದಷ್ಟು ಎತ್ತರವಾಗಿ ದಪ್ಪಗೆ ಇತ್ತು. ಅದು ಏನೆಂಬುದು ಅವನಿಗೆ ತಿಳಿಯಲಿಲ್ಲ. ಅದಕ್ಕೆ ಎತ್ತಕಡೆಯಿಂದಲೂ ಬಾಗಿಲು ಇರಲಿಲ್ಲ. ಹಾಗೆಯೇ ನೋಡುತ್ತಿದ್ದಾಗ ಸಾಯಂಕಾಲವಾಯಿತು. ಆಗ ಆಕಾಶದಲ್ಲಿ ಕತ್ತಲೆಯನ್ನುಂಟುಮಾಡುತ್ತ ಒಂದು ದೊಡ್ಡ ಪಕ್ಷಿ ಹಾರಿಬಂತು. ಅದು ರಾಕ್ ಎಂಬ ಪಕ್ಷಿ. ಬೆಳ್ಳಗಿದ್ದ ವಸ್ತು ಅದರ ಮೊಟ್ಟೆ.

ರಾಕ್ ಪಕ್ಷಿ ಒಂದು ಬೆಟ್ಟದಷ್ಟು ದೊಡ್ಡದು. ಅದರ ಕಾಲುಗಳು ಅರಮನೆಯ ಕಂಬಗಳಿಗಿಂತಲೂ ದಪ್ಪ. ಅದು ದೊಡ್ಡದೊಡ್ಡ ಆನೆಗಳನ್ನು

ಕೊಕ್ಕಿನಲ್ಲಿ ಎತ್ತಿಕೊಂಡುಬಂದು ಮರಿಗಳಿಗೆ ಕೊಡುವುದು. ಮರಿಗಳು ಒಂದು ತುತ್ತಿಗೆ ಒಂದು ಆನೆಯಂತೆ ನುಂಗುವುವು. ಆ ರಾಕ್ ಪಕ್ಷಿಯನ್ನು ನೋಡಿ ಸಿಂದಬಾದನು ನಡುಗಿಹೋದನು. ಅದು ರಾತ್ರಿಯೆಲ್ಲ ತನ್ನ ಮೊಟ್ಟೆಯಮೇಲೆ ಕುಳಿತು ಕಾವು ಕೊಟ್ಟಿತು. ಸಿಂದಬಾದನು ರಾತ್ರಿ ನಿದ್ದೆ ಮಾಡಲಿಲ್ಲ. ಬೆಳಗಾಗುವ ಹೊತ್ತಿಗೆ ಅವನಿಗೆ ಒಂದು ಆಲೋಚನೆ ಹೊಳೆಯಿತು. ಆ ದ್ವೀಪದಿಂದ ತಪ್ಪಿಸಿಕೊಳ್ಳುವುದಕ್ಕೆ ಕಾಲ ಬಂತೆಂದು ತಿಳಿದನು. ಕೂಡಲೆ ತನ್ನ ರುಮಾಲನ್ನು ಬಿಚ್ಚಿದನು. ಪಕ್ಷಿ ಮೊಟ್ಟೆಯನ್ನು ಬಿಟ್ಟು ನೆಲದಮೇಲೆ ನಿಂತಿತು. ಆಗ ಸಿಂದಬಾದನು ಆ ಪಕ್ಷಿಯ ಒಂದು ಕಾಲಿಗೆ ರುಮಾಲಿನ ಸಹಾಯದಿಂದ ಬಿಗಿದುಕೊಂಡನು.



ಆ ಪಕ್ಷಿ ಹಾರಿಹೋಗಿ ಜನಗಳಿರುವ ಕಡೆ ತನ್ನನ್ನು ಬಿಡುವುದೆಂದು ಅವನು ತಿಳಿದನು. ಪಕ್ಷಿ ಅಂತರಿಕ್ಷದಲ್ಲಿ ಬಹಳ ಎತ್ತರಕ್ಕೆ ಹಾರಿತು. ಸೂರ್ಯಮಂಡಲದವರೆಗೂ ಹೋದಂತೆ ಸಿಂದಬಾದನಿಗೆ ಕಂಡಿತು. ಅವನ ಕಣ್ಣುಗಳು ಸುತ್ತಿಕೊಂಡುಬಂದುವು. ಬಹುಕಾಲ ಹೀಗೆ ಹಾರಿದಮೇಲೆ ಎಲ್ಲಿಯೋ ಒಂದು ಕಡೆ ಒಂದು ಬೆಟ್ಟದಮೇಲೆ ಅದು ನಿಂತಿತು. ಸಿಂದಬಾದನು ಕಟ್ಟುಗಳನ್ನು ಬಿಚ್ಚಿ ನೆಲದಮೇಲೆ ನಿಂತನು. ಆ ಪಕ್ಷಿ ದೊಡ್ಡದೊಂದು ಸರ್ಪವನ್ನು ಕಚ್ಚಿಕೊಂಡು ಹಾರಿಹೋಯಿತು. ಸಿಂದಬಾದನು ಒಬ್ಬನೇ ಉಳಿದನು.

ಸಿಂದಬಾದನು ಸುತ್ತಲೂ ನೋಡಿದನು. ಜನರು ಯಾರೂ ಕಾಣಿಸ ಲಿಲ್ಲ. ಮುಂದೆ ಒಂದು ದೊಡ್ಡ ಕಣಿವೆ ಇತ್ತು. ಅದರ ಹಿಂದುಗಡೆ ಪರ್ವತದ ಶಿಖರ. ಕಣಿವೆಯಲ್ಲಿ ಇಳಿದು ನೋಡಿದನು. ಅಲ್ಲಿ ವಜ್ರಗಳು, ಕೆಂಪುಗಳು, ಪಚ್ಚೆಗಳು ಮುಂತಾದುವೆಲ್ಲ ಬೇಕಾದಷ್ಟು ಬಿದ್ದಿದ್ದುವು. ಅವುಗಳ ಪಕ್ಕದಲ್ಲಿ ದೊಡ್ಡ ದೊಡ್ಡ ಹಾವುಗಳು ಬುಸುಗುಟ್ಟುತ್ತ ಹರಿದಾಡು ತ್ತಿದ್ದುವು. ಹೀಗೆ ನೋಡುತ್ತಿರುವಾಗ ಮೇಲಿನಿಂದ ಒಂದು ಪ್ರಾಣಿ ಕಡಿದುಬಿತ್ತು. ಸಿಂದಬಾದನು ಹೆದರಿ ಹಿಂದಕ್ಕೆ ಹೋದನು. ಆ ಪ್ರಾಣಿಯ ಮೈಗೆ ಕೆಲವು ವಜ್ರ, ಕೆಂಪು, ಪಚ್ಚೆಗಳು ಹತ್ತಿಕೊಂಡುವು. ಆ ಸಮಯ ದಲ್ಲಿ ದೊಡ್ಡ ಹದ್ದೊಂದು ಕೆಳಕ್ಕೆ ಎರಗಿ ಆ ಪ್ರಾಣಿಯನ್ನು ಎತ್ತಿಕೊಂಡು



ಹಾರಿಹೋಯಿತು. ಸಿಂದಬಾದನು ತಲೆಯೆತ್ತಿ ನೋಡಿದನು. ಆ ಹದ್ದು ಹಿಂದಿದ್ದ ಪರ್ವತದ ಶಿಖರದಮೇಲೆ ಹೋಯಿತು.

ಸಿಂದಬಾದನು ತಾನಿರುವುದು ವಜ್ರಗಳ ಕಣಿವೆಯೆಂದೂ ಶಿಖರದ ಮೇಲೆ ವರ್ತಕರು ಯಾರೋ ಇರುವರೆಂದೂ ತಿಳಿದನು. ಆಗ ಇನ್ನೊಂದು ಪ್ರಾಣಿ ಕಡಿದುಬಿತ್ತು. ಸಿಂದಬಾದನು ತಾನು ಹೊರುವಷ್ಟು ವಜ್ರ, ಕೆಂಪು, ಪಚ್ಚೆ ಮುಂತಾದುವನ್ನು ಗಂಟು ಕಟ್ಟಿಕೊಂಡನು. ತರುವಾಯ ಆ ಪ್ರಾಣಿಯನ್ನು ಕೆಳಗಿಂದ ಬಲವಾಗಿ ತಬ್ಬಿ ಹಿಡಿದುಕೊಂಡನು. ಕೂಡಲೆ ಇನ್ನೊಂದು ಹದ್ದು ಬಂದು ಆ ಪ್ರಾಣಿಯನ್ನು ಎತ್ತಿಕೊಂಡು ಶಿಖರಕ್ಕೆ ಹಾರಿತು. ಅದರೊಡನೆ ಸಿಂದಬಾದನೂ ಶಿಖರವನ್ನು ಮುಟ್ಟಿದನು. ಹದ್ದು

ಪ್ರಾಣಿಯನ್ನು ತಿನ್ನಬೇಕೆಂದು ಪ್ರಯತ್ನಿಸಿತು. ಅಷ್ಟರಲ್ಲಿ ಚಪ್ಪಾಳೆ ತಮ್ಮಟೆ ಮೊದಲಾದ ಸದ್ದುಗಳು ಕೇಳಿಬಂದುವು. ಹದ್ದು ಹೆದರಿ ಹಾರಿಹೋಯಿತು.

ಆಗ ದೂರದಲ್ಲಿದ್ದ ವರ್ತಕರು ಪ್ರಾಣಿಗೆ ಹತ್ತಿಕೊಂಡಿರುವ ವಜ್ರಗಳನ್ನು ತೆಗೆದುಕೊಳ್ಳಬೇಕೆಂದು ಹತ್ತಿರಕ್ಕೆ ಬಂದರು. ಸಿಂದಬಾದನು ಎದ್ದುನಿಂತುಕೊಂಡನು. ಎಲ್ಲರಿಗೂ ಆಶ್ಚರ್ಯವಾಯಿತು. ಸಿಂದಬಾದನು ಆ ವರ್ತಕರಿಗೆ ತನ್ನ ಕಥೆಯನ್ನೆಲ್ಲ ಹೇಳಿದನು. ತನ್ನಲ್ಲಿದ್ದ ಕೆಂಪು, ವಜ್ರಗಳಲ್ಲಿ ಕೆಲವನ್ನು ಅವರಿಗೂ ಕೊಟ್ಟನು. ಅವರು ಅವನನ್ನು ತಮ್ಮೂರಿಗೆ ಕರೆದುಕೊಂಡುಹೋದರು. ಅಲ್ಲಿಂದ ಸಿಂದಬಾದನು ಬಾಗದಾದಿಗೆ ಹಿಂದಿರುಗಿ ತನ್ನ ಹೆಂಡಿರು ಮಕ್ಕಳನ್ನು ಸೇರಿಕೊಂಡನು.

ಸಿಂದಬಾದನ ವಿಚಾರದಲ್ಲಿ ಇನ್ನು ಆರು ಕಥೆಗಳಿವೆ. ಈ ಕಥೆಗಳೆಲ್ಲ "ಅರೇಬಿಯನ್ ನೈಟ್ಸ್" ಎಂಬ ಪುಸ್ತಕದಲ್ಲಿವೆ. ಕನ್ನಡದಲ್ಲಿ ಯವನ ಯಾಮಿನೀ ಕಥೆಗಳು ಎಂದು ಇವುಗಳನ್ನು ಕರೆಯುತ್ತಾರೆ. ಮುಂದಿನ ಪಾಠದ ಅಲಿಬಾಬನ ಕಥೆಯೂ ಆ ಪುಸ್ತಕದಲ್ಲಿರುವ ಇನ್ನೊಂದು ಕಥೆ.

೫೮. ಅಲಿಬಾಬ ಮತ್ತು ನಲವತ್ತು ಮಂದಿ ಕಳ್ಳರು



ಪಾರ್ಸಿ ದೇಶದ ಒಂದು ಊರಿನಲ್ಲಿ ಕಾಸಿಂ ಮತ್ತು ಅಲಿಬಾಬ ಎಂಬ ಇಬ್ಬರು ಅಣ್ಣತಮ್ಮಂದಿರು ಇದ್ದರು. ಕಾಸಿಂ ಐಶ್ವರ್ಯವಂತ. ಅವನು

ದೊಡ್ಡ ಅಂಗಡಿ ಇಟ್ಟಿದ್ದನು. ಅಲಿಬಾಬ ಬಡವ. ಕಾಡಿನಿಂದ ಸೌದೆ ತಂದು ಮಾರಿ ಜೀವಿಸುತ್ತಿದ್ದನು.

ಒಂದು ದಿನ ಕಾಡಿನಲ್ಲಿ ಯಾವುದೋ ಒಂದು ಮರವನ್ನು ಅಲಿಬಾಬ ಕಡಿಯುತ್ತಿದ್ದನು. ಆಗ ಅವನಿಗೆ ದೂರದಲ್ಲಿ ಕುದುರೆ ದಂಡು ಕಾಣಿಸಿತು. ಅವರು ಕಳ್ಳರಿರಬಹುದೆಂದು ಹೆದರಿ ಅಲಿಬಾಬ ಮರಹತ್ತಿ ಅವಿತುಕೊಂಡನು. ಆ ಮರದ ಕೆಳಗೆ ಒಂದು ಬಂಡೆ ಇತ್ತು. ಕುದುರೆ ದಂಡು ಬಂದಿತು. ಅವರು ಕಳ್ಳರು. ನಲವತ್ತು ಮಂದಿ ಕಳ್ಳರು, ಅವರ ಯಜಮಾನ, ಎಲ್ಲರೂ ಕುದುರೆಗಳಿಂದ ಇಳಿದರು. ಅದೇ ಮರದ ಕೆಳಗೆ ನಿಂತರು. ಅವರೆಲ್ಲ ಹಣದ ಚೀಲಗಳನ್ನು ಹೊತ್ತು ತಂದಿದ್ದರು.

ಕಳ್ಳರ ಯಜಮಾನನು ಬಂಡೆಯ ಪಕ್ಕಕ್ಕೆ ಹೋಗಿ "ಬಾಗಿಲು ತೆಗೆ ಸೇಸಮ್ಮ" ಎಂದನು. ಬಂಡೆ ಬಾಯಿ ಬಿಟ್ಟಿತು. ಎಲ್ಲರೂ ತಮ್ಮ ಚೀಲಗಳೊಂದಿಗೆ ಒಳಕ್ಕೆ ಹೋದರು. ಬಂಡೆಯ ಬಾಯಿ ಮುಚ್ಚಿತು. ಸ್ವಲ್ಪ ಹೊತ್ತಾದಮೇಲೆ ಅವರೆಲ್ಲ ಹೊರಕ್ಕೆ ಬಂದು ಬಾಗಿಲು ಮುಚ್ಚಿ ಕುದುರೆಗಳಮೇಲೆ ಹೊರಟುಹೋದರು.

ಕಳ್ಳರು ಕಣ್ಣುಮರೆಯಾದಮೇಲೆ ಅಲಿಬಾಬ ಮರದಿಂದ ಇಳಿದನು. ತಾನೂ ಬಂಡೆಯ ಪಕ್ಕಕ್ಕೆ ಹೋಗಿ "ಬಾಗಿಲು ತೆಗೆ ಸೇಸಮ್ಮ" ಎಂದನು. ಬಂಡೆ ಬಾಯಿ ತೆರೆಯಿತು. ಒಳಕ್ಕೆ ಹೋಗಿ ನೋಡಿದರೆ ಚಿನ್ನ ಬೆಳ್ಳಿ ನಾಣ್ಯಗಳ ರಾಸಿ! ಮುತ್ತು ರತ್ನಗಳ ಮೂಟೆಗಳು! ಅಲಿಬಾಬ ಸಂತೋಷದಿಂದ ಹಿಗ್ಗಿಹೋದನು. ತಾನು ಹೊರುವಷ್ಟು ಚಿನ್ನದ ನಾಣ್ಯಗಳನ್ನು ಹೊತ್ತುಕೊಂಡು ಹೊರಕ್ಕೆ ಬಂದನು. "ಬಾಗಿಲು ಮುಚ್ಚೆ ಸೇಸಮ್ಮ" ಎಂದನು. ಬಂಡೆ ಮುಚ್ಚಿಕೊಂಡಿತು.

ಕತ್ತಲೆಯಾದಮೇಲೆ ಅಲಿಬಾಬ ಮನೆಗೆ ಬಂದನು. ಹೆಂಡತಿಗೆ ನಡೆದ ಸಂಗತಿ ಹೇಳಿದನು. ಅವಳು ಹಣವನ್ನು ಅಳೆಯಲು ಕಾಸಿಮನ ಮನೆಯಿಂದ ಸೇರು ತಂದಳು. ತನ್ನ ಓರಗಿತ್ತಿ ಏನು ಅಳೆಯುವಳೋ ತಿಳಿಯಬೇಕೆಂದು ಕಾಸಿಮನ ಹೆಂಡತಿ ಸೇರಿನ ತಳಕ್ಕೆ ಸ್ವಲ್ಪ ಮಯಣ ಹಚ್ಚಿ ಕೊಟ್ಟಳು. ಸೇರನ್ನು ಹಿಂದಕ್ಕೆ ಕೊಟ್ಟಾಗ ಅದರಲ್ಲಿ ಒಂದು ಚಿನ್ನದ ನಾಣ್ಯ ಅಂಟಿಕೊಂಡಿತ್ತು. ಅವಳು ಗಂಡನಿಗೆ ಎಲ್ಲವನ್ನೂ ಹೇಳಿದಳು.

ಕಾಸಿಂ ಅಲಿಬಾಬನ ಮನೆಗೆ ಬಂದು ಹೆದರಿಸಿ ಎಲ್ಲ ವಿಚಾರಗಳನ್ನೂ ತಿಳಿದುಬಿಟ್ಟನು.

ಮಾರನೆಯ ದಿನ ಕಾಸಿಂ ಹತ್ತು ಕತ್ತೆಗಳನ್ನು ಹೊರಗೆಬಿಟ್ಟು ಕಾಸು ಬಂಡೆಯ ಒಳಕ್ಕೆ ಹೋದನು. ಒಳಗಿದ್ದ ಹಣದ ರಾಶಿಯನ್ನು ನೋಡಿ ಅವನಿಗೆ ಸಂತೋಷದಿಂದ ಮೈಯುಬ್ಬಿತು. ಈ ಸಂತೋಷದಲ್ಲಿ ಬಾಗಿಲು ತೆಗೆಸುವ ಮಾತು ಮರೆತುಹೋಯಿತು. ಹಣದ ಗಂಟನ್ನು ಹೊತ್ತು ಕೊಂಡು "ಬಾಗಿಲು ತೆಗೆ ಲೇಸಮ್ಮ, ಬಾಗಿಲು ತೆಗೆ ಕೂಸಮ್ಮ" ಎಂದು ಏನೇನೋ ಹೇಳಿದನು, ಬಾಗಿಲು ತೆರೆಯಲಿಲ್ಲ. ಅವನು ಒಳಗೆ ಸಿಕ್ಕಿ ಹೋದನು.

ಸಾಯಂಕಾಲವಾಯಿತು, ಕಳ್ಳರು ಎಂದಿನಂತೆ ಬಂದರು. ಹೊರಗಡೆ ಇದ್ದ ಕತ್ತೆಗಳನ್ನು ನೋಡಿ ಒಳಗೆ ಯಾರೋ ಇರುವರೆಂದು ತಿಳಿದರು. ಕೂಡಲೆ ಕತ್ತಿಗಳನ್ನು ಹಿರಿದು ಬಂಡೆಯ ಬಳಿ ನಿಂತರು. ಯಜಮಾನನು "ಬಾಗಿಲು ತೆಗೆ ಸೇಸಮ್ಮ" ಎಂದನು. ಬಾಗಿಲು ತೆರೆಯಿತು. ಕಾಸಿಂ ಬುಡಕ್ಕನೆ ಹೊರಕ್ಕೆ ಬಂದನು. ಕಳ್ಳರು ಅವನನ್ನು ಕಡಿದು ತುಂಡು ಮಾಡಿದರು. ಆ ಹೆಣದ ತುಂಡುಗಳನ್ನು ಗುಹೆಯೊಳಗೆ ಹಾಕಿ ತಮ್ಮ ಕೆಲಸವನ್ನು ತೀರಿಸಿಕೊಂಡು ಕಳ್ಳರು ಹೊರಟುಹೋದರು.

ಕಾಸಿಂ ಮನೆಗೆ ಹಿಂದಿರುಗಲಿಲ್ಲವೆಂದು ಅಲಿಬಾಬನಿಗೆ ತಿಳಿಯಿತು. ಮಾರನೆಯ ದಿನ ಅಲಿಬಾಬ ಅಲ್ಲಿಗೆ ಹೋಗಿ ಹೆಣದ ತುಂಡುಗಳನ್ನು ತಂದು ಬಿಟ್ಟನು. ಕಡೆಗೆ ಆ ಹೆಣವನ್ನು ಗೋರಿಮಾಡಿ ಕಾಸಿಂ ರೋಗದಿಂದ ಸತ್ತುಹೋದನೆಂದು ಸುದ್ದಿ ಹರಡಿದನು.

ಕಳ್ಳರು ಸಾಯಂಕಾಲ ಬಂದು ಗುಹೆಯಲ್ಲಿ ನೋಡಿದಾಗ ಹೆಣ ಇರಲಿಲ್ಲ. "ನಮ್ಮ ಗುಟ್ಟನ್ನು ತಿಳಿದವರು ಯಾರೋ ಇದ್ದಾರೆ. ಅವರನ್ನು ಪತ್ತೆಮಾಡಿ ಕೊಂದುಬಿಡಬೇಕು" ಎಂದು ಯಜಮಾನನು ಹೇಳಿದನು. ಇಬ್ಬರು ಕಳ್ಳರು "ಆ ಮನುಷ್ಯನನ್ನು ಹುಡುಕಿಕೊಡುವೆವು, ಇಲ್ಲದಿದ್ದರೆ ಸಾಯುವೆವು" ಎಂದು ಹೇಳಿದರು. ಆದರೆ ಅವರ ಕೈಯಲ್ಲಿ ಅಲಿಬಾಬನ ಮನೆ ಗೊತ್ತುಹಚ್ಚಲು ಆಗಲಿಲ್ಲ. ಅವರು ತಮ್ಮ ಮಾತಿನಂತೆ ಪ್ರಾಣ ಬಿಟ್ಟರು. ಕಡೆಗೆ ಯಜಮಾನನೇ ಹೊರಟು ಉಪಾಯದಿಂದ ಅಲಿಬಾಬನ ಮನೆಯನ್ನು ಪತ್ತೆಮಾಡಿದನು.

ತರುವಾಯ ಯಜಮಾನನು ಎಣ್ಣೆಯ ಸಾಹುಕಾರನ ವೇಷ ಹಾಕಿಕೊಂಡು ಬುದ್ದಲಿಗಳನ್ನು ತೆಗೆಸಿಕೊಂಡು ಬಂದನು. ಒಂದು ಬುದ್ದಲಿಯಲ್ಲಿ ಮಾತ್ರ ಎಣ್ಣೆಯಿತ್ತು. ಮಿಕ್ಕ ಬುದ್ದಲಿಗಳಿಗೆ ಎಣ್ಣೆ ಬಳಿದಿತ್ತು. ಒಳಗೆ ಒಬ್ಬೊಬ್ಬ ಕಳ್ಳನು ಅಡಗಿಕೊಂಡಿದ್ದನು. ಯಜಮಾನನು ರಾತ್ರಿ ಒಂಬತ್ತು ಗಂಟೆಗೆ ಸರಿಯಾಗಿ ಅಲಿಬಾಬನ ಮನೆಗೆ ಬಂದನು. "ನಾಳೆ ಎಣ್ಣೆ ವ್ಯಾಪಾರ ಮಾಡಬೇಕು. ಈ ರಾತ್ರಿ ಈ ಬುದ್ದಲಿಗಳಿಗೂ ನನಗೂ ಸ್ಥಳ ಸಿಕ್ಕೀತೇ?" ಎಂದು ಕೇಳಿದನು. ಅಲಿಬಾಬನು ಸ್ಥಳ ಕೊಟ್ಟನು. ಬುದ್ದಲಿಗಳನ್ನು ಮನೆಯ ಅಂಗಳದಲ್ಲಿ ಸಾಲಾಗಿ ಇಟ್ಟಿದ್ದಾಯಿತು. "ಮಧ್ಯರಾತ್ರಿಯಲ್ಲಿ ಕಲ್ಲು ಎಸೆಯುತ್ತೇನೆ. ಆಗ ಹೊರಕ್ಕೆ ಬಂದು ಅಲಿಬಾಬನನ್ನೂ ಮನೆಯಲ್ಲಿ ಇರುವವರನ್ನೂ ಕೊಂದುಬಿಡಿ" ಎಂದು ಯಜಮಾನನು ಕಳ್ಳರಿಗೆ ಗುಟ್ಟಾಗಿ ಹೇಳಿಹೋದನು.

ಆ ದಿವಸ ರಾತ್ರಿ ಮಾರ್ಜಿಯಾನ ಎಂಬ ಅಡಿಗೆಯವಳು ತನ್ನ ಕೆಲಸ ಮಾಡುತ್ತಾ ಇದ್ದಳು. ಅಡಿಗೆಯ ಮನೆಯ ದೀಪಕ್ಕೆ ಎಣ್ಣೆ ಸಾಲದೆ ಹೋಯಿತು. ಆಗ ಹತ್ತಿರ ಹತ್ತಿರ ಮಧ್ಯರಾತ್ರಿ. ಎಣ್ಣೆ ಎಲ್ಲಿಂದ ತರುವುದು? ಬುದ್ದಲಿಗಳಲ್ಲಿ ಇರುವ ಎಣ್ಣೆಯನ್ನು ಸ್ವಲ್ಪ ತೆಗೆದುಕೊಳ್ಳೋಣ



ಎಂದು ಒಂದು ಬುದ್ದಲಿಯ ಬಳಿಗೆ ಬಂದಳು. ಎಣ್ಣೆಗೆ ಕೈ ಹಾಕಿದಾಗ "ಹೊತ್ತಾಯಿತೆ?" ಎಂದು ಪಿಸುಮಾತು ಕೇಳಿಸಿತು. ಆಕೆ ಬೆಚ್ಚಿ ಬಿದ್ದಳು. ಆದರೆ ಕೂಗಲಿಲ್ಲ. ಆಕೆ ಜಾಣೆ ಮತ್ತು ಧೈರ್ಯಶಾಲಿ.

"ಇನ್ನೂ ಇಲ್ಲ" ಎಂದು ಹೇಳಿ ಮುಂದಿನ ಬುದ್ದಲಿಗೆ ಕೈಹಾಕಿದಳು. ಅಲ್ಲಿಂದಲೂ "ಹೊತ್ತಾಯಿತೆ?" ಎಂದು ಕೇಳಿಸಿತು. "ಇನ್ನೂ ಇಲ್ಲ" ಎಂದು ಹೇಳಿ ಮುಂದೆ ಹೋದಳು. ಹೀಗೆ ಒಂದು ಬುದ್ದಲಿ ಬಿಟ್ಟು ಎಲ್ಲ ಬುದ್ದಲಿಗಳಿಂದಲೂ "ಹೊತ್ತಾಯಿತೇ?" ಎಂದು ಕೇಳಿದರು. ಮಾರ್ಜಿಯಾನ ಎಲ್ಲರಿಗೂ "ಇನ್ನೂ ಇಲ್ಲ" ಎಂದು ಹೇಳಿ ಕಡೆಯ ಬುದ್ದಲಿಯಿಂದ ಬೇಕಾದಷ್ಟು ಎಣ್ಣೆ ತಂದಳು. ತನ್ನ ಯಜಮಾನನನ್ನು ಕೊಲ್ಲುವುದಕ್ಕೆ ಕಳ್ಳರು ಬಂದಿದ್ದಾರೆಂದು ಆಕೆ ತಿಳಿದು ಉಪಾಯ ಮಾಡಿದಳು. ಒಂದು ಕಡಾಯಿ ತುಂಬ ಎಣ್ಣೆಯನ್ನು ಮರಳಿಸಿ ಆ ಕಾದ ಎಣ್ಣೆಯನ್ನು ಪ್ರತಿಯೊಬ್ಬ ಕಳ್ಳನ ತಲೆಯಮೇಲೂ ಸುರಿದಳು. ಎಲ್ಲ ಕಳ್ಳರೂ ಸತ್ತುಹೋದರು.

ಮಧ್ಯರಾತ್ರಿಯಾಯಿತು. ಮಾರ್ಜಿಯಾನ ದೀಪ ಆರಿಸಿ ನೋಡುತ್ತಿದ್ದಳು. ಕಳ್ಳರ ಯಜಮಾನನು ಕಲ್ಲುಗಳನ್ನು ಜೀಸಿದನು. ಯಾರೂ ಏಳಲಿಲ್ಲ. ಕಡೆಗೆ ತಾನೇ ಬಂದು ನೋಡಿದನು. ಕಳ್ಳರೆಲ್ಲ ಸತ್ತು ಬಿದ್ದಿದ್ದರು. ಯಾಜಮಾನನು ಕೆಲಸ ಕೆಟ್ಟಿತು ಎಂದುಕೊಂಡು ಹಿತ್ತಿಲ ಗೋಡೆ ಹಾರಿ ಓಡಿಹೋದನು. ಮಾರನೆಯ ದಿನ ಬೆಳಗ್ಗೆ ಎಲ್ಲ ವಿಚಾರಗಳೂ ಅಲಿಬಾಬನಿಗೆ ತಿಳಿದುವು. ಅವನು ಮಾರ್ಜಿಯಾನಳನ್ನು ಕೊಂಡಾಡಿದನು.

ಕೆಲವು ಕಾಲದಮೇಲೆ ಕಳ್ಳರ ಯಜಮಾನನು ಬೇರೆ ವೇಷದಿಂದ ಆ ಊರಿನಲ್ಲಿ ಜವಳಿ ಅಂಗಡಿ ಇಟ್ಟನು. ಅವನು ಅಲಿಬಾಬನ ಮಗನ ಸ್ನೇಹಮಾಡಿಕೊಂಡು ಅಲಿಬಾಬನ ಮನೆಗೆ ಬಂದನು. ಸಮಯ ನೋಡಿ ಅಲಿಬಾಬನನ್ನು ಕೊಲ್ಲಬೇಕೆಂದು ಭರ್ಜಿಯನ್ನು ಬಚ್ಚಿಟ್ಟುಕೊಂಡಿದ್ದನು. ಅಡಿಗೆಯ ಪದಾರ್ಥಗಳಿಗೆ ಉಪ್ಪು ಹಾಕಿದರೆ ತಾನು ಊಟಮಾಡುವುದಿಲ್ಲವೆಂದು ಆ ಯಜಮಾನನು ಹೇಳಿದನು. ಇದನ್ನು ಮಾರ್ಜಿಯಾನ ಕೇಳಿ ಜವಳಿ ಅಂಗಡಿಯವನು ಕಳ್ಳರ ಯಜಮಾನನೇ ಇರಬೇಕೆಂದು ಊಹಿಸಿದಳು. ಅಡಿಗೆಯನ್ನು ಬಡಿಸುತ್ತಿದ್ದಾಗ ಅವನನ್ನು ಚೆನ್ನಾಗಿ ಪರೀಕ್ಷಿಸಿದಳು. ಅವಳಿಗೆ ನಿಜ ತಿಳಿದುಹೋಯಿತು. ಅವನು ಏತಕ್ಕೆ ಬಂದಿದ್ದಾನೆ ಎಂಬುದನ್ನು ಊಹಿಸಿದಳು.

ಊಟವಾದಮೇಲೆ ಮಾರ್ಜಿಯಾನ ಒಂದು ಉಪಾಯ ಮಾಡಿದಳು.

ವೇಷಹಾಕಿಕೊಂಡು ಕೈಯಲ್ಲಿ ಭರ್ಜಿಯನ್ನು ಹಿಡಿದುಕೊಂಡು ಕುಣಿಯು ವುದಕ್ಕೆ ಆರಂಭಿಸಿದಳು. ಆ ಕುಣಿತವನ್ನು ಎಲ್ಲರೂ ನೋಡಿ ಸುಖ



ಪಡುತ್ತಿದ್ದರು. ಒಂದುಬಾರಿ ಕುಳಿತಿದ್ದ ಜನರನ್ನು ತಿವಿಯುವಂತೆಯೂ, ಒಂದುಬಾರಿ ತಾನೆ ತಿವಿದುಕೊಳ್ಳುವಂತೆಯೂ ನಟಿಸಿದಳು. ಕಡೆಗೆ ಕಳ್ಳರ ಯಜಮಾನನ ಬಳಿಗೆ ಬಂದು ಅವನನ್ನು ತಿವಿದು ಕೊಂದುಬಿಟ್ಟಳು.

ಅಲಿಬಾಬನು ತಟ್ಟನೆದ್ದು "ಏನು ಮಾಡಿಬಿಟ್ಟೆ? ಮನೆಗೆ ಬಂದವ ರನ್ನು ಹೀಗೆ ಕೊಲ್ಲಬಹುದೆ?" ಎಂದು ಕೇಳಿದನು. "ಅವನು ಕಳ್ಳರ ಯಜಮಾನ. ನಿನ್ನನ್ನು ಕೊಲ್ಲುವುದಕ್ಕೆ ಭರ್ಜಿ ಬಚ್ಚಿಟ್ಟುಕೊಂಡಿದ್ದ, ಇಲ್ಲಿ ನೋಡು" ಎಂದು ಅವಳು ಹೇಳಿದಳು. ಅಂಗಡಿಯವನ ಅಂಗಿ ಬಿಚ್ಚಿ ನೋಡಿದರೆ ಒಳಗೆ ಭರ್ಜಿಯಿತ್ತು. ಆಗ ಅಲಿಬಾಬನು ಮಾರ್ಜಿಯಾನ ಮಾಡಿದ ಉಪಕಾರಕ್ಕೂ ತೋರಿಸಿದ ಧೈರ್ಯಕ್ಕೂ ಮೆಚ್ಚಿದನು. ಅವಳನ್ನು ತನ್ನ ಮಗನಿಗೆ ಕೊಟ್ಟು ಮದುವೆಮಾಡಿದನು. ಅಲಿಬಾಬನು ಆಗಾಗ ಬಂಡೆಯ ಬಳಿಗೆ ಹೋಗಿ ಬೇಕಾದಷ್ಟು ಹಣವನ್ನು ತರುತ್ತಿದ್ದನು. ಅವರೆಲ್ಲ ಬಹುಕಾಲ ಸುಖವಾಗಿದ್ದರು.

೫೯. ರಾಮಾಯಣದ ಕಥೆ

೧


ಪೂರ್ವಕಾಲದಲ್ಲಿ ಅಯೋಧ್ಯೆಯಲ್ಲಿ ದಶರಥನೆಂಬ ರಾಜನಿದ್ದನು ಆತನಿಗೆ ಕೌಸಲ್ಯೆ, ಕೈಕೆ ಮತ್ತು ಸುಮಿತ್ರೆ ಎಂಬ ಮೂವರು ಹೆಂಡತಿಯರಿದ್ದರು. ಕೌಸಲ್ಯೆಯಲ್ಲಿ ಶ್ರೀರಾಮನೂ, ಕೈಕೆಯಲ್ಲಿ ಭರತನೂ, ಸುಮಿತ್ರೆಯಲ್ಲಿ ಲಕ್ಷ್ಮಣ ಶತ್ರುಘ್ನರೂ ಮಕ್ಕಳಾದರು. ಇವರಲ್ಲಿ ಶ್ರೀರಾಮನೆ ಹಿರಿಯನು.

ಮಿಥಿಲೆಯ ದೊರೆಯಾದ ಜನಕನಿಗೆ ಸೀತೆ ಎಂಬ ಮಗಳಿದ್ದಳು. ಆಕೆ ಸುಂದರಿ ಮತ್ತು ಗುಣಶಾಲಿ. ಶ್ರೀರಾಮನಿಗೆ ಸೀತೆಯನ್ನು ಕೊಟ್ಟು ಮದುವೆಯಾಯಿತು.

ದಶರಥನು ಮುದುಕನಾಗುತ್ತ ಬಂದನು. ಆದುದರಿಂದ ಹಿರಿಯ ಮಗನಾದ ಶ್ರೀರಾಮನಿಗೆ ರಾಜ್ಯವನ್ನು ವಹಿಸಬೇಕೆಂದು ಗೊತ್ತುಮಾಡಿದನು. ಅರಮನೆಗೆ ಅಲಂಕಾರವಾಯಿತು. ಪುರೋಹಿತರು ಸಿದ್ಧರಾಗಿ ಬಂದರು. ಆದರೆ ಶ್ರೀರಾಮನ ಮಲತಾಯಿಯಾದ ಕೈಕೆಗೆ ಇದೆಲ್ಲ ಸರಿಬೀಳಲಿಲ್ಲ. ಶ್ರೀರಾಮನಿಗೆ ಪ್ರತಿಯಾಗಿ ತನ್ನ ಮಗನಾದ ಭರತನೇ ದೊರೆಯಾಗಬೇಕೆಂದು ಅವಳು ಆಸೆಪಟ್ಟಳು.

ದಶರಥನು ಹಿಂದೆ ಕೈಕೆಗೆ ಬೇಕಾದಾಗ ಕೇಳೆಂದು ಎರಡು ವರಗಳನ್ನು ಕೊಟ್ಟಿದ್ದನು. ಅವಳು ಈಗ ಆ ವರಗಳನ್ನು ಕೇಳಿದಳು. "ಶ್ರೀರಾಮನನ್ನು ಹದಿನಾಲ್ಕು ವರ್ಷ ಕಾಡಿಗೆ ಕಳುಹಿಸು. ನನ್ನ ಮಗ ಭರತನಿಗೆ ಪಟ್ಟಕಟ್ಟಿಸು" ಎಂದು ದಶರಥನನ್ನು ಬೇಡಿದಳು. ದಶರಥನು ಆ ಮಾತುಗಳನ್ನು ಕೇಳಿ ದುಃಖದಿಂದ ಮೈಮರೆತನು. ಆ ಕಾಲಕ್ಕೆ ಸರಿಯಾಗಿ ಅಲಂಕಾರಮಾಡಿಕೊಂಡು ಶ್ರೀರಾಮನು ಅಲ್ಲಿಗೆ ಬಂದನು. ಕೈಕೆ ತನ್ನ ಮನಸ್ಸಿನಲ್ಲಿರುವುದನ್ನು ಅವನಿಗೆ ಹೇಳಿದಳು. ಕೂಡಲೆ ಶ್ರೀರಾಮನು "ಅಮ್ಮಾ, ಅದಕ್ಕೆ ಅಡ್ಡಿಯೇನು? ಹಾಗೆಯೆ ಆಗಲಿ. ದೊರೆತನಕ್ಕೆ ನಾನಾದರೇನು, ಭರತನಾದರೇನು? ನನಗೆ ಸಂತೋಷವೆ. ನಾನು ಕಾಡಿಗೆ ಹೋಗುವೆನು. ತಂದೆಯ ವರಗಳನ್ನು ನಡಸಿಕೊಡುವೆನು" ಎಂದು ಹೇಳಿ ಆಕೆಗೆ ನಮಸ್ಕಾರಮಾಡಿ ಕಾಡಿಗೆ ಹೊರಟನು.

ಈ ಸಮಾಚಾರ ಕೌಸಲ್ಯೆಗೆ ತಿಳಿದು ದುಃಖವಾಯಿತು. ಸೀತೆ ತನ್ನ ಗಂಡನ ಸಂಗಡವೇ ಕಾಡಿಗೆ ಹೊರಟಳು. ಲಕ್ಷ್ಮಣನು ಅಣ್ಣನಮೇಲಿನ ಪ್ರೇಮದಿಂದ ಹಿಂದೆಯೆ ಹೊರಟನು. ಹೀಗೆ ಮಕ್ಕಳು ಕಾಡಿಗೆ ಹೊರಟು ಹೋದುದನ್ನು ತಿಳಿದು ದಶರಥನು ಕೊರಗಿ ಸತ್ತುಹೋದನು.



೨

ಇದೆಲ್ಲ ನಡೆದಾಗ ಭರತನು ತನ್ನ ಸೋದರಮಾವನ ಮನೆಯಲ್ಲಿದ್ದನು. ಅವನು ಹಿಂದಿರುಗಿದಾಗ ನಡೆದ ಸಂಗತಿ ತಿಳಿಯಿತು. ಅವನಿಗೆ ದುಃಖ ಬಂತು. "ನಾನು ರಾಜ್ಯವನ್ನು ಆಳುವುದಿಲ್ಲ. ಹಿರಿಯವನಾದ ರಾಮನೆ ದೊರೆಯಾಗಬೇಕು. ಅವನನ್ನು ಕರೆತರುವೆನು" ಎಂದು ಭರತನು ಹೊರಟನು. ಆಗ ರಾಮನು ಚಿತ್ರಕೂಟ ಪರ್ವತದಲ್ಲಿದ್ದನು. ಭರತನು ಶ್ರೀರಾಮನಿಗೆ ನಮಸ್ಕಾರಮಾಡಿ "ನಾನು ಏನೂ ತಪ್ಪುಮಾಡಿದವನಲ್ಲ. ಹಿಂದಿರುಗಿ ಬಂದು ರಾಜ್ಯವನ್ನು ಆಳು. ರಾಜ್ಯಕ್ಕೆ ನೀನೆ ದೊರೆ, ನಾನಲ್ಲ" ಎಂದು ಅಳುತ್ತಾ ಹೇಳಿದನು. ಶ್ರೀರಾಮನು ಅವನನ್ನು ತಬ್ಬಿಕೊಂಡು ಸಮಾಧಾನಪಡಿಸಿದನು. "ತಂದೆಯ ಮಾತನ್ನು ಪಾಲಿಸುವುದು ಮಕ್ಕಳ ಕೆಲಸ. ನಾನು ಹದಿನಾಲ್ಕು ವರ್ಷ ಅರಣ್ಯದಲ್ಲಿದ್ದು ಖಂಡಿತ ಹಿಂದಿರುಗಿ ಬರುವೆನು. ನೀನು ಅಲ್ಲಿಯವರೆಗೆ ರಾಜ್ಯವನ್ನು ನೋಡಿಕೋ" ಎಂದು ಹೇಳಿದನು. ಭರತನು ತನ್ನ ಹೆಸರಿನಲ್ಲಿ ರಾಜ್ಯವಾಳುವುದಕ್ಕೆ ಇಷ್ಟಪಡಲಿಲ್ಲ.

ಭಕ್ತಿಯಿಂದ ಶ್ರೀರಾಮನ ಪಾದುಕೆಗಳನ್ನು ಈಸಿಕೊಂಡು ತಲೆಯಮೇಲಿಟ್ಟು ಕೊಂಡು ಅಯೋಧ್ಯೆಗೆ ಬಂದನು. ಆ ಪಾದುಕೆಗಳನ್ನೆ ಸಿಂಹಾಸನದ ಮೇಲಿಟ್ಟು ಶ್ರೀ ರಾಮನ ಹೆಸರಿನಲ್ಲಿ ರಾಜ್ಯವನ್ನು ನೋಡಿಕೊಳ್ಳುತ್ತಿದ್ದನು.

ಶ್ರೀರಾಮನು ಚಿತ್ರಕೂಟವನ್ನು ಬಿಟ್ಟು, ದಕ್ಷಿಣಕ್ಕೆ ಹೊರಟನು. ಗೋದಾವರಿಯ ತೀರದಲ್ಲಿ ಗುಡಿಸಲು ಕಟ್ಟಿಕೊಂಡು ಸೀತೆ ಲಕ್ಷ್ಮಣರೊಡನೆ ವಾಸಮಾಡುತ್ತಿದ್ದನು. ಅವರಿಗೆ ಆಗಾಗ ದಂಡಕಾರಣ್ಯದ ರಾಕ್ಷಸರು ತೊಂದರೆ ಕೊಡುತ್ತಿದ್ದರು. ಶ್ರೀ ರಾಮ ಲಕ್ಷ್ಮಣರು ಅನೇಕ ರಾಕ್ಷಸರನ್ನು ಕೊಂದರು. ಒಂದು ದಿನ ಶೂರ್ಪನಖಿ ಎಂಬ ರಾಕ್ಷಸಿ ಅಲ್ಲಿಗೆ ಬಂದಳು. ಶ್ರೀ ರಾಮನನ್ನು ಮದುವೆ ಮಾಡಿಕೊಳ್ಳಬೇಕೆಂದು ಹಠಮಾಡಿದಳು. ಆಗ ಲಕ್ಷ್ಮಣನಿಗೆ ಸಿಟ್ಟುಬಂತು. ಅವನು ಅವಳ ಕಿವಿ ಮೂಗುಗಳನ್ನು ಕೊಯ್ದು ಕಳುಹಿಸಿಬಿಟ್ಟನು. ಅವಳು ಅಳುತ್ತಾ ಲಂಕೆಗೆ ಹೋಗಿ ತನ್ನ ಅಣ್ಣನಾದ ರಾವಣನ ಮುಂದೆ ದೂರು ಹೇಳಿದಳು. ಕಡೆಗೆ "ಶ್ರೀ ರಾಮನ ಹೆಂಡತಿ ಸೀತೆ ಬಹು ಸುಂದರಿ. ಅವಳನ್ನು ತಂದು ನೀನು ಮದುವೆ ಮಾಡಿಕೋ" ಎಂದು ಹೇಳಿದಳು.

ರಾಕ್ಷಸರ ರಾಜನಾದ ರಾವಣನು ಸೀತೆಯನ್ನು ಎತ್ತಿಕೊಂಡು ಹೋಗಲು ಬಂದನು. ರಾವಣನ ಸಹಾಯಕ್ಕೆ ಮಾರೀಚನೆಂಬ ರಾಕ್ಷಸನು



ಬಂದಿದ್ದನು. ಅವನು ಬಂಗಾರದ ಜಿಂಕೆಯಾಗಿ ಸೀತೆಯ ಮುಂದೆ ಸುಳಿದಾಡಿದನು. ಸೀತೆಗೆ ಆ ಮೋಸ ತಿಳಿಯಲಿಲ್ಲ. ಆ ಮೃಗವನ್ನು ತಂದುಕೊಡೆಂದು

ಶ್ರೀ ರಾಮನನ್ನು ಸೀತೆ ಕೇಳಿದಳು. ಶ್ರೀ ರಾಮನು ಅದನ್ನು ಹಿಡಿಯು ವುದಕ್ಕೆ ಹೋದನು. ಆ ಜಿಂಕೆ ಕೈಗೆ ಸಿಕ್ಕದೆ ಬಹು ದೂರ ಶ್ರೀ ರಾಮನನ್ನು ಎಳೆದುಕೊಂಡುಹೋಯಿತು. ಶ್ರೀ ರಾಮನು ಕಡೆಗೆ ಬಾಣವನ್ನು ಬಿಟ್ಟು ಅದನ್ನು ಕೊಂದನು. ಆಗ ಮಾರೀಚನು ಶ್ರೀ ರಾಮನ ಧ್ವನಿಯಂತೆ ಮಾಡಿ ಕೊಂಡು "ಹಾ ಸೀತೆ! ಹಾ ಲಕ್ಷ್ಮಣಾ!" ಎಂದು ಕೂಗುತ್ತ ಪ್ರಾಣ ಬಿಟ್ಟನು. ಸೀತೆ ಹೆದರಿ ಶ್ರೀ ರಾಮನ ಸಹಾಯಕ್ಕೆ ಲಕ್ಷ್ಮಣನನ್ನು ಕಳುಹಿಸಿದಳು. ಹೀಗೆ ಶ್ರೀರಾಮ, ಲಕ್ಷ್ಮಣ ಇಬ್ಬರೂ ಮರೆಯಾಗಲು ರಾವಣನು ಬಂದು ಸೀತೆಯನ್ನು ಎತ್ತಿಕೊಂಡು ಓಡಿಹೋದನು. ಲಂಕೆಯಲ್ಲಿ ಆಕೆಯನ್ನು ಸೆರೆಯಾಗಿಟ್ಟು ತನ್ನನ್ನು ಮದುವೆಯಾಗೆಂದು ಕಾಡುತ್ತಿದ್ದನು. ಸೀತೆ ಒಪ್ಪದೆ ಶ್ರೀ ರಾಮನನ್ನೇ ಧ್ಯಾನಿಸುತ್ತಿದ್ದಳು. ಆಕೆ ಬಹಳ ದುಃಖ ಪಡುತ್ತಿದ್ದಳು.

೩

ಶ್ರೀ ರಾಮನೂ ಲಕ್ಷ್ಮಣನೂ ಹಿಂದಿರುಗಿ ಬಂದು ನೋಡಿದರು. ಸೀತೆ ಇರಲಿಲ್ಲ. ಬಹಳ ವ್ಯಸನದಿಂದ ಹುಡುಕುತ್ತ ಹೊರಟರು. ಹೀಗೆ ಹೋಗುತ್ತಿರುವಾಗ ಶ್ರೀ ರಾಮನಿಗೆ ಸುಗ್ರೀವನೆಂಬ ಕಪಿರಾಜನ ಸ್ನೇಹ ವಾಯಿತು. ಸುಗ್ರೀವನ ಮಂತ್ರಿಯಾದ ಹನುಮಂತನು ಶ್ರೀ ರಾಮನಿಗೆ ಬಂಟನಾದನು. ಸುಗ್ರೀವನು ಸೀತೆಯನ್ನು ಹುಡುಕುವುದಕ್ಕಾಗಿ ಕಪಿ ಗಳನ್ನು ದಿಕ್ಕು ದಿಕ್ಕಿಗೆ ಕಳುಹಿಸಿದನು. ದಕ್ಷಿಣ ದಿಕ್ಕಿಗೆ ಹೋದ ಹನುಮಂತನು ಸಮುದ್ರವನ್ನು ದಾಟಿ ಲಂಕೆಗೆ ಹೋದನು. ಅಲ್ಲಿ ಸೀತೆಯನ್ನು ಕಂಡು ಆಕೆಗೆ ಶ್ರೀ ರಾಮನ ಸಮಾಚಾರ ತಿಳಿಸಿದನು.

ಆಮೇಲೆ ತೋಟದ ಮರಗಿಡಗಳನ್ನು ಹನುಮಂತನು ಕುಚೇಷ್ಟೆಗೆ ಮುರಿದನು. ಆಗ ರಾಕ್ಷಸರು ಜಗಳಕ್ಕೆ ಬಂದರು. ರಾವಣನು ಹನುಮಂತನನ್ನು ಹಿಡಿತರಿಸಿ, ಅವನ ಬಾಲಕ್ಕೆ ಎಣ್ಣೆಬಟ್ಟೆ ಸುತ್ತಿಸಿ ಬೆಂಕಿ ಹತ್ತಿಸಿದನು. ಆಗ ಹನುಮಂತನು ಆ ಬೆಂಕಿಯಿಂದಲೆ ಲಂಕಾಪಟ್ಟಣವನ್ನು ಸುಟ್ಟು ರಾಮನ ಬಳಿಗೆ ಬಂದನು. ಆತನಿಗೆ ಸೀತೆಯ ವೃತ್ತಾಂತ ತಿಳಿಸಿದನು.

ತರುವಾಯ ಶ್ರೀರಾಮನು ಕಪಿಗಳ ದಂಡಿನೊಡನೆ ರಾವಣನಮೇಲೆ ಯುದ್ಧಕ್ಕೆ ಹೊರಟನು. ಸಮುದ್ರಕ್ಕೆ ಸೇತುವೆ ಕಟ್ಟಿದ್ದಾಯಿತು. ಕಪಿ ಸೈನ್ಯವೆಲ್ಲ ಲಂಕೆಗೆ ಹೋಯಿತು. ಅಲ್ಲಿ ದೊಡ್ಡ ಯುದ್ಧವಾಯಿತು.



ರಾವಣನೇ ಮೊದಲಾದ ದುಷ್ಟರಾಕ್ಷಸರನ್ನು ಶ್ರೀರಾಮ ಲಕ್ಷ್ಮಣರು ಕೊಂದರು. ಸೀತೆಯನ್ನು ಸೆರೆಯಿಂದ ಬಿಡಿಸಿ ಜೊತೆಯಲ್ಲಿ ಕರೆದುಕೊಂಡು ಅಯೋಧ್ಯೆಗೆ ಹಿಂದಿರುಗಿದರು. ಭರತನೇ ಮೊದಲಾದವರೆಲ್ಲ ಬಹಳ ಸಂತೋಷ ಪಟ್ಟರು. ಅಯೋಧ್ಯೆಯ ಜನರು ಸಂಭ್ರಮದಿಂದ ಸೀತಾರಾಮ ಲಕ್ಷ್ಮಣ ರನ್ನು ಎದುರುಗೊಂಡರು. ಪಟ್ಟಣವನ್ನು ಅಲಂಕರಿಸಿದರು. ಶ್ರೀರಾಮನಿಗೆ ಪಟ್ಟಾಭಿಷೇಕವಾಯಿತು. ಆಮೇಲೆ ಎಲ್ಲರೂ ಸುಖವಾಗಿದ್ದರು.

ಈ ರಾಮಾಯಣದ ಕಥೆಯನ್ನು ಶ್ರೀವಾಲ್ಮೀಕಿ ಮಹರ್ಷಿಗಳು ಸಂಸ್ಕೃತದಲ್ಲಿ ಬರೆದಿದ್ದಾರೆ. ಕನ್ನಡದಲ್ಲಿಯೂ ತೊರವೆರಾಮಾಯಣ, ಆನಂದರಾಮಾಯಣ ಮುಂತಾದುವು ಇವೆ. ದೊಡ್ಡವರಾದಮೇಲೆ ನೀವು ಈ ಪುಣ್ಯಕಥೆಯನ್ನು ಚೆನ್ನಾಗಿ ಓದಿ ತಿಳಿಯಬೇಕು.

೬೦. ಮಹಾಭಾರತದ ಕಥೆ

೧

ಕುರುವಂಶದ ದೊರೆಗಳಲ್ಲಿ ಧೃತರಾಷ್ಟ್ರ ಮತ್ತು ಪಾಂಡು ಎಂಬ ಇಬ್ಬರು ಅಣ್ಣತಮ್ಮಂದಿರು ಇದ್ದರು. ಧೃತರಾಷ್ಟ್ರನು ಹುಟ್ಟು ಕುರುಡ. ಆದುದರಿಂದ ಪಾಂಡುರಾಜನೇ ಹಸ್ತಿನಾವತಿಯ ದೊರೆಯಾದನು.

ಧೃತರಾಷ್ಟ್ರನಿಗೆ ಗಾಂಧಾರಿ ಎಂಬ ಹೆಂಡತಿ ಇದ್ದಳು. ಆಕೆಯಲ್ಲಿ ಧೃತರಾಷ್ಟ್ರನಿಗೆ ದುರ್ಯೋಧನ ದುಶ್ಯಾಸನ ಮೊದಲಾದ ನೂರು ಮಂದಿ ಮಕ್ಕಳಾದರು. ಇವರೇ ಕೌರವರು. ಪಾಂಡುರಾಜನಿಗೆ ಕುಂತಿ ಮತ್ತು ಮಾದ್ರಿ ಎಂಬ ಇಬ್ಬರು ಹೆಂಡತಿಯರು ಇದ್ದರು. ಕುಂತಿಯಲ್ಲಿ ಧರ್ಮರಾಜ, ಭೀಮ ಮತ್ತು ಅರ್ಜುನ ಹುಟ್ಟಿದರು. ಮಾದ್ರಿಯಲ್ಲಿ ನಕುಲ ಸಹದೇವರು ಹುಟ್ಟಿದರು. ಈ ಐದು ಜನರೇ ಪಾಂಡವರು.

ಪಾಂಡವರು ಚಿಕ್ಕಮಕ್ಕಳಾಗಿದ್ದಾಗಲೆ ಪಾಂಡುರಾಜನು ಸತ್ತು ಹೋದನು. ಮಾದ್ರಿ ಗಂಡನೊಡನೆ ತಾನೂ ಸತ್ತುಹೋದಳು. ಐವರು ಮಕ್ಕಳನ್ನೂ ಕುಂತಿ ಬಹಳ ಕಷ್ಟದಿಂದ ಸಾಕಿದಳು. ದುರ್ಯೋಧನನಿಗೆ ಪಾಂಡವರನ್ನು ಕಂಡರೆ ಮೊದಲಿಂದಲೂ ಆಗುತ್ತಿರಲಿಲ್ಲ. ಅವನಿಗೆ ಭೀಮನಲ್ಲಿ ಹೆಚ್ಚು ವೈರ. ಭೀಮನನ್ನು ಕೊಲ್ಲಬೇಕೆಂದು ಒಂದುಬಾರಿ



ದುರ್ಯೋಧನನು ವಿಷವನ್ನು ಕೊಟ್ಟನು. ಇನ್ನೊಂದುಬಾರಿ ಹಾವುಗಳಿಂದ ಕಚ್ಚಿಸಿದನು; ಮತ್ತೊಂದುಬಾರಿ ನದಿಯಲ್ಲಿ ಮುಳುಗಿಸಿದನು. ಆದರೆ

ಭೀಮನು ಹೇಗೋ ಬದುಕಿಕೊಂಡನು. ಅನಾಥರಾದ ಪಾಂಡವರು ಹೀಗೆ ಅನೇಕ ಕಷ್ಟಗಳಿಗೆ ಸಿಕ್ಕಿದರು.

ಪಾಂಡವರೂ ಕೌರವರೂ ದೊಡ್ಡವರಾದರು. ಯಾರನ್ನು ದೊರೆಯಾಗಿ ಮಾಡಬೇಕೆಂದು ಚರ್ಚೆಯಾಯಿತು. ಧರ್ಮರಾಜನೇ ದೊರೆಯಾಗಬೇಕೆಂದು ಹಿರಿಯರು ನಿಶ್ಚಯಿಸಿದರು. ಇದು ದುರ್ಯೋಧನನಿಗೆ ಒಪ್ಪಲಿಲ್ಲ. ಪಾಂಡವರನ್ನೆಲ್ಲ ಕೊಂದು ತಾನೇ ಆಳಬೇಕೆಂದು ಅವನು ಮನಸ್ಸು ಮಾಡಿದನು. ಆಗ ದುರ್ಯೋಧನನು ಗುಟ್ಟಾಗಿ ವಾರಣಾವತದಲ್ಲಿ ಒಂದು ಅರಗಿನ ಮನೆಯನ್ನು ಕಟ್ಟಿಸಿದನು. ಪಾಂಡವರು ಅಲ್ಲಿಗೆ ಹೋಗಿ ಇರಬಹುದೆಂದೂ, ಸ್ವಲ್ಪ ರಾಜ್ಯವನ್ನು ಅವರಿಗೆ ಕೊಟ್ಟಿರುವುದಾಗಿಯೂ ಅವನು ಹೇಳಿದನು. ಏನೂ ತಿಳಿಯದ ಪಾಂಡವರು ವಾರಣಾವತಕ್ಕೆ ಹೋದರು. ಅರಗಿನ ಮನೆಯ ಸಮಾಚಾರ ಆಪ್ತನೊಬ್ಬನ ಮೂಲಕ ಧರ್ಮರಾಜನಿಗೆ ತಿಳಿಯಿತು. ದುರ್ಯೋಧನನು ತಮ್ಮನ್ನು ಆ ಮನೆಯಲ್ಲಿ ಸುಟ್ಟುಹಾಕಬೇಕೆಂದಿರುವನೆನ್ನುವುದು ತಿಳಿಯಿತು. ಆಗ ಪಾಂಡವರು ಒಂದು ರಾತ್ರಿ ತಾವೆ ಅರಗಿನ ಮನೆಗೆ ಬೆಂಕಿ ಇಟ್ಟು ಸುರಂಗದ ಮಾರ್ಗವಾಗಿ ತಪ್ಪಿಸಿಕೊಂಡರು. ಊರಿನ ಜನರೆಲ್ಲ ಪಾಂಡವರು ಸುಟ್ಟು ಹೋದರೆಂದು ತಿಳಿದು ದುಃಖಪಟ್ಟರು. ಈ ವರ್ತಮಾನ ಧೃತರಾಷ್ಟ್ರ, ದುರ್ಯೋಧನ ಮುಂತಾದವರಿಗೆ ತಿಳಿಯಿತು. ಅವರ ಸಂತೋಷ ಹೇಳತೀರದು.

೨

ಅರಗಿನ ಮನೆಯಿಂದ ತಪ್ಪಿಸಿಕೊಂಡು ಪಾಂಡವರು ಒಂದು ಅರಣ್ಯಕ್ಕೆ ಬಂದರು. ತಾವು ಬದುಕಿರುವುದು ದುರ್ಯೋಧನನಿಗೆ ತಿಳಿದರೆ ಮೋಸದಿಂದ ಎಲ್ಲಿ ಕೊಂದುಬಿಡುವನೋ ಎಂದು ಪಾಂಡವರು ಹೆದರಿದರು. ಆಗ ಬ್ರಾಹ್ಮಣರ ವೇಷವನ್ನು ಹಾಕಿಕೊಂಡು ಕೆಲವು ಕಾಲ ಏಕಚಕ್ರ ನಗರದಲ್ಲಿ ವಾಸವಾಗಿದ್ದರು. ರಾಜ್ಯಭಾರಮಾಡುತ್ತ ಸುಖವಾಗಿರಬೇಕಾದ ಈ ರಾಜಕುಮಾರರು ಭಿಕ್ಷೆಯನ್ನು ಬೇಡುತ್ತ ಹೊಟ್ಟೆ ಹೊರೆಯುತ್ತಿದ್ದರು. ಹೀಗಿರುವಾಗ ಪಾಂಚಾಲ ರಾಜನಾದ ದ್ರುಪದನು ತನ್ನ ಮಗಳಾದ ದ್ರೌಪದಿಗೆ ಸ್ವಯಂವರವನ್ನು ಗೊತ್ತುಮಾಡಿದನು. ದ್ರೌಪದಿ ಬಿಲ್ಲು ವಿದ್ಯೆಯಲ್ಲಿ ಜಾಣನಾದ ಅರ್ಜುನನನ್ನೇ ಮದುವೆಯಾಗಬೇಕೆಂದು ಇದ್ದಳು. ಸ್ವಯಂವರಕ್ಕೆ ಪಾಂಡವರು ಬ್ರಾಹ್ಮಣ ವೇಷದಿಂದ ಹೋದರು.

ದ್ರುಪದರಾಜನು ಕೊಟ್ಟ ಬಿಲ್ಲನ್ನು ಯಾವ ರಾಜರೂ ಬಗ್ಗಿಸಿ ಗುರಿ ಹೊಡೆಯಲಿಲ್ಲ. ಆಗ ಬ್ರಾಹ್ಮಣ ವೇಷದಲ್ಲಿದ್ದ ಅರ್ಜುನನು ಅದನ್ನು ಬಗ್ಗಿಸಿ ಬಾಣಗಳಿಂದ ಗುರಿಯನ್ನು ಹೊಡೆದನು. ಆಮೇಲೆ ಪಾಂಡವರು ಬ್ರಾಹ್ಮಣ ವೇಷದಿಂದ ಬಂದಿದ್ದಾರೆಂದು ಎಲ್ಲರಿಗೂ ತಿಳಿಯಿತು. ದ್ರೌಪದಿಯನ್ನು ಪಾಂಡವರಿಗೆ ಕೊಟ್ಟು ಮದುವೆ ನಡೆಯಿತು. ಈ ಕಾಲದಲ್ಲಿ ಶ್ರೀ ಕೃಷ್ಣನು ಪಾಂಡವರ ಯೋಗಕ್ಷೇಮವನ್ನು ವಿಚಾರಿಸಿದನು. ಶ್ರೀ ಕೃಷ್ಣನಿಗೆ ಪಾಂಡವರು ಸೋದರತ್ತೆಯ ಮಕ್ಕಳು. ಅರ್ಜುನನಿಗೂ ಶ್ರೀ ಕೃಷ್ಣನಿಗೂ ಪರಮ ಸ್ನೇಹವುಂಟಾಯಿತು.

೩

ಆಮೇಲೆ ಪಾಂಡವರು ದುರ್ಯೋಧನನಿಂದ ಅರ್ಧರಾಜ್ಯವನ್ನು ಪಡೆದರು. ಅವರು ಇಂದ್ರಪ್ರಸ್ಥದಲ್ಲಿ ಆಳುತ್ತ ರಾಜಸೂಯ ಯಾಗವನ್ನು ಮಾಡಿದರು. ದುರ್ಯೋಧನನಿಗೆ ಮೊದಲೆ ಇದ್ದ ಹೊಟ್ಟೆಕಿಚ್ಚು ಇನ್ನೂ ಬೆಳೆಯಿತು. ಪಾಂಡವರ ರಾಜ್ಯ ಕಿತ್ತುಕೊಂಡು ಅವರನ್ನು ಹಿಂಸಿಸಬೇಕೆಂದು ಅವನು ನಿಶ್ಚಯಿಸಿದನು. ಒಂದು ದಿನ ಧರ್ಮರಾಜನನ್ನು ಪಗಡೆಯಾಟಕ್ಕೆ ಕರೆದು ಮೋಸದಿಂದ ಸೋಲಿಸಿದನು. ಆಗ ದ್ರೌಪದಿ ತನ್ನ ದಾಸಿಯಾದಳೆಂದು



ದುರ್ಯೋಧನನು ಹೇಳಿದನು. ಆಕೆಯನ್ನು ದುರ್ಯೋಧನನ ತಮ್ಮನಾದ ದುಶ್ಯಾಸನನು ದರದರನೆ ಆಸ್ಥಾನಕ್ಕೆ ಎಳೆತಂದನು. ಆಕೆ ಅಳುತ್ತಾ "ಕೃಷ್ಣಾ, ನನ್ನ ಮಾನವನ್ನು ಕಾಪಾಡು" ಎಂದು ಮೊರೆಯಿಟ್ಟಳು.

ಶ್ರೀ ಕೃಷ್ಣನು ಆಕೆಯನ್ನು ಕಾಪಾಡಿದನು. ಆಗ ಧೃತರಾಷ್ಟ್ರನು ಪಾಂಡವರನ್ನು ಸಮಾಧಾನಪಡಿಸಿ ಇಂದ್ರಪ್ರಸ್ಥಕ್ಕೆ ಕಳುಹಿಸಿಕೊಟ್ಟನು.

ಕೆಲವು ದಿವಸಗಳಾದಮೇಲೆ ದುರ್ಯೋಧನನು ಧರ್ಮರಾಜನನ್ನು ಪುನಃ ಪಗಡೆಯಾಟಕ್ಕೆ ಕರೆದನು. ಆಗಲೂ ಮೋಸದಿಂದ ದುರ್ಯೋಧನನು ಗೆದ್ದನು. ಪಂಥದ ಪ್ರಕಾರ ಪಾಂಡವರು ರಾಜ್ಯವನ್ನು ಬಿಟ್ಟು ಹನ್ನೆರಡು ವರ್ಷ ಕಾಡಿಗೆ ಹೋಗಬೇಕಾಯಿತು; ಒಂದು ವರ್ಷ ಯಾರಿಗೂ ತಿಳಿಯದಂತೆ ವಾಸಮಾಡಬೇಕಾಯಿತು. ಪಾಂಡವರು ವನವಾಸವನ್ನು ಬಹಳ ಕಷ್ಟದಿಂದ ಕೊನೆಸಾಗಿಸಿದರು. ಅಜ್ಞಾತವಾಸವನ್ನು ವಿರಾಟನಗರದಲ್ಲಿ ಕಳೆದರು. ದ್ರೌಪದಿ ಅಲ್ಲಿ ವಿರಾಟನ ಹೆಂಡತಿಗೆ ದಾಸಿಯಾಗಿ ಕೆಲಸಮಾಡಬೇಕಾಯಿತು. ಕಡೆಗೆ ಇವೆಲ್ಲವನ್ನೂ ಮುಗಿಸಿಕೊಂಡು ತಮ್ಮ ರಾಜ್ಯವನ್ನು ಹಿಂದಕ್ಕೆ ಕೊಡೆಂದು ಪಾಂಡವರು ದುರ್ಯೋಧನನನ್ನು ಕೇಳಿದರು. ಇದನ್ನು ಕೇಳುವುದಕ್ಕಾಗಿ ಪಾಂಡವರ ಕಡೆಯಿಂದ ಶ್ರೀ ಕೃಷ್ಣನು ಹಸ್ತಿನಾವತಿಗೆ ಹೋದನು. ಆದರೆ ಶ್ರೀ ಕೃಷ್ಣನ ಮಾತುಗಳನ್ನು ದುರ್ಯೋಧನನು ಕೇಳಲಿಲ್ಲ. "ಪಾಂಡವರು ಬಲಶಾಲಿಗಳಾದರೆ ಯುದ್ಧಮಾಡಿ ರಾಜ್ಯ ಗೆದ್ದುಕೊಳ್ಳಲಿ" ಎಂದು ದುರ್ಯೋಧನನು ಹೇಳಿದನು.

ಯುದ್ಧಕ್ಕೆ ಪಾಂಡವರೂ ಕೌರವರೂ ಸಿದ್ಧರಾದರು. ಕೌರವರ ಕಡೆ ಭೀಷ್ಮ, ದ್ರೋಣ, ಕರ್ಣ ಮುಂತಾದ ವೀರರಿದ್ದರು. ಪಾಂಡವರ ಕಡೆ ಶ್ರೀ ಕೃಷ್ಣ, ವಿರಾಟ, ದ್ರುಪದ ಮುಂತಾದ ವೀರರಿದ್ದರು. ಈ ಯುದ್ಧವೇ ಮಹಾಭಾರತದ ಯುದ್ಧ. ಇದು ಹದಿನೆಂಟು ದಿವಸಗಳವರೆಗೆ ನಡೆಯಿತು. ಯುದ್ಧದಲ್ಲಿ ದುರ್ಯೋಧನ ಮುಂತಾದವರು ಸತ್ತುಹೋದರು, ಪಾಂಡವರು ಗೆದ್ದರು. ಮುದುಕರಾದ ಧೃತರಾಷ್ಟ್ರ ಮತ್ತು ಗಾಂಧಾರಿ ತಮ್ಮ ಮಕ್ಕಳನ್ನು ಕಳೆದುಕೊಂಡು ದುಃಖಿಸಿದರು. ಶ್ರೀ ಕೃಷ್ಣನು ಅವರನ್ನು ಸಮಾಧಾನಪಡಿಸಿದನು. ಕೊನೆಗೆ ಧರ್ಮರಾಜನಿಗೆ ಪಟ್ಟಾಭಿಷೇಕವಾಯಿತು. ಪಾಂಡವರು ಬಹುಕಾಲ ರಾಜ್ಯವನ್ನು ಚೆನ್ನಾಗಿ ಆಳಿ ಸುಖವಾಗಿದ್ದರು.

ಈ ಮಹಾಭಾರತದ ಕಥೆಯನ್ನು ವ್ಯಾಸಮಹರ್ಷಿಗಳು ಸಂಸ್ಕೃತದಲ್ಲಿ ಬರೆದಿದ್ದಾರೆ. ಕುಮಾರವ್ಯಾಸ ಎಂಬ ಬಿರುದುಳ್ಳ ನಾರಣಪ್ಪನು ಕನ್ನಡದಲ್ಲಿ ಬಹಳ ಚೆನ್ನಾಗಿ ಬರೆದಿದ್ದಾನೆ.

ಕವಿತೆಗಳು

೧. ಹೂವಾಡಿಗಿತ್ತಿ

ಹೂವನು ಮಾರುತ
ಹೂವಾಡಿಗಿತ್ತಿ
ಹಾಡುತ ಬರುತಿಹಳು.
ಘಮ ಘಮ ಹೂಗಳು
ಬೇಕೇ ಎನುತ
ಹಾಡುತ ಬರುತಿಹಳು.
ಬಿಳುಪಿನ ಮಲ್ಲಿಗೆ
ಹಳದಿಯ ಸಂಪಿಗೆ
ಹಸುರಿನ ಹೊಸ ಮರುಗ
ಹಾಕಿ ಕಟ್ಟಿರುವೆ
ಬೇಕೇ ಎನುತ
ಹಾಡುತ ಬರುತಿಹಳು.
ಹೊಸ ಸೇವಂತಿಗೆ
ಹೊಸ ಇರುವಂತಿಗೆ
ಅರಿಸಿನ ತಾಳೆ ಇದೆ.
ಅಚ್ಚ ಮೊಲ್ಲೆಯಲಿ
ಪಚ್ಚೆಯ ತೆನೆಗಳು
ಸೇರಿದ ಮಾಲೆ ಇದೆ.
ಕಂಪನು ಚೆಲ್ಲುವ
ಕೆಂಪು ಗುಲಾಬಿ,
ಅರಳಿದ ಹೊಸ ಕಮಲ;
ಬಿಳುಪಿನ ಜಾಜಿ
ಹಳದಿಯ ಜಾಜಿ
ಅರಳಿದ ಬಿಳಿ ಕಮಲ.
ಬಗೆ ಬಗೆ ಹೂಗಳು
ಬೇಕೇ ಎನುತ
ಹಾಡುತ ಬರುತಿಹಳು
ಹೂವನು ಮಾರುತ
ಹೂವಾಡಿಗಿತ್ತಿ
ಹಾಡುತ ಬರುತಿಹಳು.

—ಎಂ. ವಿ. ಸೀತಾರಾಮಯ್ಯ

೨. ಸಂತಂಮಣ್ಣ

ಕಲ್ಯಾಣಸೇವೆ ಜೇಬಿನ ಬುಡದಲಿ,
ಪುಟ್ಟಾಣಿಯ ಪುರಿ ಮೇಲೊಂದಿಷ್ಟು,
ಗೋಲಿ ಬಳಪ ಮತ್ತೊಂದಿಷ್ಟು,
ಬಂದ, ಬಂದ, ಸಣ್ಣ ತಮ್ಮಣ್ಣ.

ಪಠಾಸು ಪೆಟ್ಲು ಬಳಜೇಬಲ್ಲಿ,
ಕಾಸಿನ ಸಾಲು ಕಳ್ಳಜೇಬಲ್ಲಿ,

ಚೆಂಡು ದಾಂಡು ಎಡಬಲದಲ್ಲಿ,
ಬಂದ, ಬಂದ, ಸಂತಂಮಣ್ಣ.

ಅಮ್ಮನ ಹಾರ ಉಬ್ಬಿದ ಎದೆಗೆ,
ಬಿದಿರಿನ ಕೊಳಲು ಗೆಜ್ಜೆಯೊಳಗೆ,
ಹದ್ದಿನ ರೆಕ್ಕೆ ಎತ್ತಿದ ತಲೆಗೆ,
ಬಂದ, ಬಂದ, ಸಣ್ಣ ತಮ್ಮಣ್ಣ.

ಕತ್ತುರಿ ಚಂದ್ರ ಹಣೆಯಲ್ಲಿಹುದು,
ಸಂಜೆಯ ಶುಕ್ರ ಕಣ್ಣಲ್ಲಿಹುದು,
ಬೆಳುಬೆಳ್ದಿಂಗಳು ಗಲ್ಲದಮೇಲೆ,
ಬಂದ, ಬಂದ, ಸಂತಂಮಣ್ಣ.

ಮೊದಲನೆ ಮಾತು ಹೂವಿನ ಮುತ್ತು,
ಮರುಮಾತಾಡಲು ಸಿಡಿಲು ಗುಡುಗು,
ಮೂರನೆ ಬಾರಿಗೆ ಆನೆಯ ಕಲ್ಮಳೆ,
ಬಂದ, ಬಂದ, ಸಣ್ಣ ತಮ್ಮಣ್ಣ.

ಬಾರೋ, ಬಾರೋ, ಸಿಡಿಲಿನ ಮರಿಯೆ!
ಬಾರೋ, ನಾಡಿನ ಸುಂಟರಗಾಳಿ!
ತೋರೋ ಸಿರಿಮೊಗ, ತುಂಟರ ಗುರುವೆ!
ಬಂದ, ಬಂದ, ಸಂತಂಮಣ್ಣ.

—**ಹೊಯ್ಸಳ**

೩. ತುತ್ತೂರಿ

ಬಣ್ಣದ ತಗಡಿನ
ತುತ್ತೂರಿ
ಕಾಸಿಗೆ ಕೊಂಡನು
ಕಸ್ತೂರಿ.

ಸರಿಗಮ ಪದನಿಸ
ಊದಿದನು
ಸನಿದಪ ಮಗರಿಸ
ಊದಿದನು.

ತನಗೇ ತುತ್ತೂರಿ
ಇದೆಯೆಂದ
ಬೇರಾರಿಗು ಅದು
ಇಲ್ಲೆಂದ.

ಕಸ್ತೂರಿ ನಡೆದನು
ಬೀದಿಯಲಿ
ಜಂಭದ ಕೋಳಿಯ
ರೀತಿಯಲಿ.

ತುತ್ತೂರಿಯೂದುತ
ಕೊಳದ ಬಳಿ
ನಡೆದನು ಕಸ್ತೂರಿ
ಸಂಜೆಯಲಿ.
ಜಾರಿತು ನೀರಿಗೆ
ತುತ್ತೂರಿ
ಗಂಟಲು ಕಟ್ಟಿತು
ನೀರೂರಿ.
ಸರಿಗಮ ಊದಲು
ನೋಡಿದನು
ಗಗಗಗ ಸದ್ದನು
ಮಾಡಿದನು.
ಬಣ್ಣವು ನೀರಿನ
ಪಾಲಾಯ್ತು
ಬಣ್ಣದ ತುತ್ತೂರಿ
ಬೋಳಾಯ್ತು.
ಬಣ್ಣದ ತುತ್ತೂರಿ
ಹಾಳಾಯ್ತು.
ಜಂಭದ ಕೋಳಿಗೆ
ಗೋಳಾಯ್ತು.

—ರಾಜರತ್ನಂ

೪. ಹಾವಿನ ಹಾಡು

ನಾಗರ ಹಾವೇ! ಹಾವೊಳು ಹೂವೇ!
ಬಾಗಿಲ ಬಿಲದಲಿ ನಿನ್ನಯ ಠಾವೇ!
ಕೈಗಳ ಮುಗಿವೆ, ಹಾಲನ್ನೀವೆ
ಬಾ ಬಾ ಬಾ ಬಾ ಬಾ ಬಾ ಬಾ ಬಾ ॥ ೧ ॥

ಹಳದಿಯ ಹೆಡೆಯನು ಬಿಚ್ಚೋ ಬೇಗಾ!
ಹೊಳಹಿನ ಹೊಂದಲೆ ತೂಗೋ, ನಾಗಾ!
ಕೊಳಲನ್ನೂದುವೆ ಲಾಲಿಸು ರಾಗಾ!
ನೀ ನೀ ನೀ ನೀ ನೀ ನೀ ನೀ ನೀ ॥ ೨ ॥

ಎಲೆ ನಾಗಣ್ಣಾ, ಹೇಳೆಲೊ ನಿನ್ನಾ
ತಲೆಯಲಿ ರನ್ನವಿಹ ನಿಜವನ್ನಾ!
ಬಲು ಬಡವಗೆ ಕೊಪ್ಪರಿಗೆಯ ಚಿನ್ನಾ
ತಾ ತಾ ತಾ ತಾ ತಾ ತಾ ತಾ ತಾ ॥ ೩ ॥

ಬರಿ ಮೈ ತಣ್ಣಗೆ, ಮನದಲಿ ಬಿಸಿ ಹಗೆ,
ಎರಡೆಳೆ ನಾಲಗೆ ಇದ್ದರು ಸುಮ್ಮಗೆ,
ಎರಗುವೆ ನಿನಗೆ, ಈಗಲೆ ಹೊರಗೆ
ಪೋ ಪೋ ಪೋ ಪೋ ಪೋ ಪೋ ಪೋ ಪೋ ॥ ೪ ॥

—ಪಂಜೆ ಮಂಗೇಶರಾವ್

೫. ತಾಯಿ

ಹಾಲನು ಕೊಡುತ್ತೆನ್ನ ಲೀಲೆಗೆ ನಲಿವನು
ತಾಳಿದಳಾರ್? ಎನ್ನ ತಾಯಿ!
ಲಾಲಿಸಿ ತೊಡೆಯಮೇಲೆನ್ನನು ಮಲಗಿಸಿ
ಪಾಲಿಸಿದವಳಾರು? ತಾಯಿ! ॥ ೧ ॥

ಓಡಿ ನಾ ಬೀಳೆ ತಾನೋಡಿ ಬಂದೆತ್ತಿ ಮು
ದ್ದಾಡಿದಳಾರ್? ಎನ್ನ ತಾಯಿ.
ಮೂಡಿದ ನೋವ ಹೋಗಾಡಿಸೆ ಜೋಗುಳ
ಹಾಡಿ ತೂಗಿದಳಾರು? ತಾಯಿ! ॥ ೨ ॥

ಪರಮಾತ್ಮ ಲೋಕಕೆ ಹಿರಿಯನೆಂಬುದನೆನ
ಗರುಹಿದಳಾರ್? ಎನ್ನ ತಾಯಿ.
ದುರುಳರೊಡನೆ ಸೇರದಿರು ಕೆಟ್ಟ ಕೆಲಸವ
ತೊರೆ ನೀನೆಂದವಳಾರು? ತಾಯಿ! ॥ ೩ ॥

ಪೊರೆದೆನ್ನ ತಾಯಿಯ ಮರೆಯುವನಲ್ಲ ನಾ
ಹಿರಿಯೊಲ್ಮೆ ತೋರಿ ಬಾಳಿಸುವೆ.
ಪರಮಾತ್ಮನ ಕೃಪೆಯಿಂದೆನ್ನ ತಾಯಿಗೆ
ಕೊರಗು ತಟ್ಟದ ಪರಿ ನಡೆವೆ ॥ ೪ ॥

೬. ಗೋವಿನ ಬಾಳು

ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ
ಸುಟ್ಟರೇ ನೊಸಲಿಗೆ ವಿಭೂತಿಯಾದೆ
ತಟ್ಟದೇ ಹಾಕಿದರೆ ಮೇಲು ಗೊಬ್ಬರವಾದೆ
ನೀನಾರಿಗಾದೆಯೋ ಎಲೆ ಮಾನವಾ, ಹರಿಹರೀ ಗೋವು ನಾನು

ಹಾಲಾದೆ ಕರೆದರೆ ಮೊಸರಾದೆ ಹೆತ್ತರೆ
ಮೇಲೆ ಕೆನೆಗಡೆದರೆ ಬೆಣ್ಣೆಯಾದೆ
ಮೇಲಾದ ತುಪ್ಪವೂ ನಾನಾದೆ ಕಾಸಿದರೆ
ನೀನಾರಿಗಾದೆಯೋ ಎಲೆ ಮಾನವಾ ॥ ೨ ॥

ಉಳುವೆ ನಾ ಭೂಮಿಯನು ಹೊರುವೆ ನಾ ಹೇರನ್ನು
ತುಳಿದು ಕಡ್ಡಿಯ ಕಾಳ ವಿಂಗಡಿಸುವೆ
ಕಳಪೆಯಾಗ್ಗಿಹ ಸೆಲವ ನಗುವ ತೋಪನು ಮಾಳ್ಪೆ
ನೀನಾರಿಗಾದೆಯೋ ಎಲೆ ಮಾನವಾ ॥ ೩ ॥

ಹಾಯ ಹರಿಗೋಲಾದೆ ರಾಯ ಭೇರಿಗೆಯಾದೆ
ರಾಯರಾ ಕಾಲಿಗೆ ಮುಳ್ಳೊತ್ತುವಾದೆ
ಆಯವರಿತು ಹೊಡೆಯೆ ಮಧುರಗಾನಕ್ಕಾದೆ
ನೀನಾರಿಗಾದೆಯೋ ಎಲೆ ಮಾನವಾ ॥ ೪ ॥

ಹಾದಿಬೀದಿಯಲಿರುವ ಕಸದ ಹುಲ್ಲನು ಹುಡುಕಿ
ಮೇದು ಮನೆಗೈದಿ ನಾನಮೃತವೀವೆ
ಅದನುಂಡು ನನಗೆರಡ ಬಗೆವ ಮಾನವ ಹೇಳು
ನೀನಾರಿಗಾದೆಯೋ ಎಲೆ ಮಾನವಾ ॥ ೫ ॥

೭. ಗೋವಿನ ಹಾಡು

೧

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ಣಾಟ ದೇಶದೊ
ಳಿರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು ॥ ೧ ॥

ಗಿರಿಗಳೆಡೆಯಲಿ ಅಡವಿ ನಡುವೆ
ತುರುವ ದೊಡ್ಡಿಯ ಮಾಡಿಕೊಂಡು
ಮೆರೆವ ಕಾಳಿಂಗನೆಂಬ ಗೊಲ್ಲನ
ಸಿರಿಯ ನಾನೆಂತು ಪೇಳ್ವೆನು ॥ ೨ ॥

ಗೊಲ್ಲದೊಡ್ಡಿಯೊಳಿರುವ ಹಸುಗಳು
ಎಲ್ಲ ಬೆಟ್ಟದ ಮೇಲೆ ಮೇಯುತ
ಹುಲ್ಲನೊಳ್ಳೆಯ ನೀರ ಕುಡಿಯುತ
ಅಲ್ಲಿ ಮೆರೆದುವರಣ್ಯದಿ ॥ ೩ ॥

ಕರುಗಳನು ನೆನೆನೆನೆದು ಹಸುಗಳು
ಕೊರಳ ಘಂಟೆ ಘಣಿರು ಘಣಿರೆನೆ

ಹರಿದು ಲಂಘಿಸಿ ಚಿಮ್ಮಿ ನೆಗೆಯುತ
ಮರಳಿ ಬಂದುವು ದೊಡ್ಡಿಗೆ ॥ ೪ ॥

ತಮ್ಮ ತಾಯನು ಕಂಡು ಕರುಗಳು
ಅಮ್ಮಾ ಎಂದು ಕೂಗಿ ನಲಿಯುತ
ಸುಮ್ಮಾನದೊಳು ಮೊಲೆಯನುಂಡು
ನಿರ್ಮಲದೊಳು ಇದ್ದುವು ॥ ೫ ॥

ಉದಯಕಾಲದೊಳೆದ್ದು ಗೊಲ್ಲನು
ನದಿಯ ಸ್ನಾನವ ಮಾಡಿಕೊಂಡು
ಮುದದಿ ತಿಲಕವ ಹಣೆಯೊಳಿಟ್ಟು
ಚದುರ ಶಿಖೆಯನು ಹಾಕಿದ ॥ ೬ ॥

ಎಳೆಯ ಮಾವಿನ ಮರದ ಕೆಳಗೆ
ಕೊಳಲನೂದುತ ಗೊಲ್ಲಗೌಡನು
ಬಳಸಿ ನಿಂದ ತುರುಗಳನ್ನು
ಬಳಿಗೆ ಕರೆದನು ಹರುಷದಿ ॥ ೭ ॥

ಗಂಗೆ ಬಾರೇ ಗೌರಿ ಬಾರೇ
ತುಂಗಭದ್ರೇ ತಾಯಿ ಬಾರೇ
ಕಾಮಧೇನು ನೀನು ಬಾರೆಂದು
ಪ್ರೇಮದಲಿ ಗೊಲ್ಲ ಕರೆದನು ॥ ೮ ॥

ಗೊಲ್ಲ ಕರೆದ ಧ್ವನಿಯ ಕೇಳಿ
ಎಲ್ಲ ಹಸುಗಳು ಬಂದು ನಿಂತು
ಚೆಲ್ಲಿ ಸೂಸಿ ಹಾಲು ಕರೆಯಲು
ಅಲ್ಲಿ ತುಂಬಿತು ಬಿಂದಿಗೆ ॥ ೯ ॥

೨

ಹಬ್ಬಿದಾ ಮಲೆ ಮಧ್ಯದೊಳಗೆ
ಅರ್ಭುತನೆಂದೆಂಬ ವ್ಯಾಘ್ರನು
ಅಬ್ಬರಿಸಿ ಹಸಿ ಹಸಿದು ಬೆಟ್ಟದ
ಕಿಬ್ಬಿಯೊಳು ತಾನಿದ್ದನು ॥ ೧೦ ॥

ಸಿಡಿದು ರೋಷದಿ ಮೊರೆಯುತಾ ಹುಲಿ
ಘುಡುಘುಡಿಸಿ ಭೋರಿಡುತ ಛಂಗನೆ
ತುಡುಕಲೆರಗಿದ ರಭಸಕಂಜಿ
ಚೆದರಿಹೋದುವು ಹಸುಗಳು ॥ ೧೧ ॥

ಪುಣ್ಯಕೋಟಿ ಎಂಬ ಗೋವು
ತನ್ನ ಕಂದನ ನೆನೆದುಕೊಂಡು
ಮುನ್ನ ಹಾಲನು ಕೊಡುವೆನೆನುತ
ಚೆನ್ನಾಗಿ ತಾ ಬರುತಿರೆ ॥ ೧೨ ॥

ಇಂದೆನಗೆ ಆಹಾರ ಸಿಕ್ಕಿತು
ಎಂದು ಬೇಗನೆ ದುಷ್ಟ ವ್ಯಾಘ್ರನು
ಬಂದು ಬಳಸಿ ಅಡ್ಡಗಟ್ಟಿ
ನಿಂದನಾ ಹುಲಿರಾಯನು ॥ ೧೩ ॥

ಮೇಲೆ ಬಿದ್ದು ನಿನ್ನನೀಗಲೆ
ಜೀಳಹೊಯ್ವೆನು ನಿನ್ನ ಹೊಟ್ಟೆಯ
ಸೀಳಿ ಬಿಡುವೆನು ಎನುತ ಕೋಪದಿ
ಖೂಳ ವ್ಯಾಘ್ರನು ಕೂಗಲು ॥ ೧೪ ॥

ಒಂದು ಬಿನ್ನಹ ಹುಲಿಯೆ ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಒಂದು ಸೇರುವೆನಿಲ್ಲಿಗೆ ॥ ೧೫ ॥

ಹಸಿದ ವೇಳೆಗೆ ಸಿಕ್ಕಿದೊಡವೆಯ
ವಶವಮಾಡದೆ ಬಿಡಲು ನೀನು
ನುಸುಳಿ ಹೋಗುವೆ ಮತ್ತೆ ಬರುವೆಯ
ಹುಸಿಯನಾಡುವೆಯೆಂದಿತು ॥ ೧೬ ॥

ಸತ್ಯವೇ ನಮ್ಮ ತಾಯಿತಂದೆ
ಸತ್ಯವೇ ನಮ್ಮ ಸರ್ವ ಬಳಗ
ಸತ್ಯವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು ॥ ೧೭ ॥

೩

ಕೊಂದು ತಿನ್ನುವೆನೆಂಬ ಹುಲಿಗೆ
ಚೆಂದದಿಂದ ಭಾಷೆಯಿತ್ತು
ಕಂದ ನಿನ್ನನು ನೋಡಿ ಹೋಗುವೆ
ನೆಂದು ಬಂದೆನು ದೊಡ್ಡಿಗೆ ॥ ೧೮ ॥

ಅಮ್ಮ ನೀನು ಸಾಯಲೇಕೆ
ನನ್ನ ತಬ್ಬಲಿ ಮಾಡಲೇಕೆ
ಸುಮ್ಮನಿಲ್ಲಿಯೆ ನಿಲ್ಲೆನುತ್ತ
ಅಮ್ಮನಿಗೆ ಕರು ಹೇಳಲು ॥ ೧೯ ॥

ಕೊಟ್ಟ ಭಾಷೆಗೆ ತಪ್ಪಲಾರೆನು
ಕೆಟ್ಟ ಯೋಚನೆ ಮಾಡಲಾರೆನು
ನಿಷ್ಠೆಯಿಂದಲಿ ಪೋಪೆನಲ್ಲಿಗೆ
ಕಟ್ಟ ಕಡೆಗಿದು ಖಂಡಿತ ॥ ೨೦ ॥

ಆರ ಮೊಲೆಯನು ಕುಡಿಯಲಮ್ಮ
ಆರ ಸೇರಿ ಬದುಕಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರು ನನಗೆ ಹಿತವರು ॥ ೨೧ ॥

ಅಮ್ಮಗಳಿರ ಅಕ್ಕಗಳಿರ
ನಮ್ಮ ತಾಯೊಡಹುಟ್ಟುಗಳಿರ
ನಿಮ್ಮ ಕಂದನೆಂದು ಕಾಣಿರಿ
ತಬ್ಬಲಿಯನೀ ಕರುವನು ॥ ೨೨ ॥

ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು ॥ ೨೩ ॥

ಕಟ್ಟಕಡೆಯಲಿ ಮೇಯಬೇಡ
ಬೆಟ್ಟದೊತ್ತಿಗೆ ಹೋಗಬೇಡ

ದುಷ್ಟ ವ್ಯಾಘ್ರನು ಹೊಂಚುತಿರುವನು
ನಟ್ಟ ನಡುವಿರು ಕಂದನೆ ॥ ೨೪ ॥

ತಬ್ಬಲಿ ನೀನಾದೆ ಮಗನೆ
ಹೆಬ್ಬುಲಿಯ ಬಾಯನ್ನು ಹೊಗುವೆನು
ಇಬ್ಬರಾ ಋಣ ತೀರಿತೆಂದು
ತಬ್ಬಿಕೊಂಡಿತು ಕಂದನ ॥ ೨೫ ॥

೪

ಗೋವು ಕರುವನು ಬಿಟ್ಟು ಬಂದು
ಸಾವಕಾಶವ ಮಾಡದಂತೆ
ಗವಿಯ ಬಾಗಿಲ ಸೇರಿ ನಿಂತು
ತವಕದಲಿ ಹುಲಿಗೆಂದಿತು ॥ ೨೬ ॥

ಖಂಡವಿದೆ ಕೋ ಮಾಂಸವಿದೆ ಕೋ
ಗುಂಡಿಗೆಯ ಬಿಸಿ ರಕ್ತವಿದೆ ಕೋ
ಚಂಡ ವ್ಯಾಘ್ರನೆ ನೀನಿದೆಲ್ಲವ
ನುಂಡು ಸಂತಸದಿಂದಿರು ॥ ೨೭ ॥

ಪುಣ್ಯಕೋಟಿಯ ಮಾತ ಕೇಳಿ
ಕಣ್ಣ ನೀರನು ಸುರಿಸಿ, ನೊಂದು
ಕನ್ನೆಯಿವಳನು ಕೊಂದು ತಿಂದರೆ
ಮೆಚ್ಚನಾ ಪರಮಾತ್ಮನು ॥ ೨೮ ॥

ಎನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ನಾನೇನ ಪಡೆವೆನು
ಎನ್ನುತಾ ಹುಲಿ ಹಾರಿ ನೆಗೆದು
ತನ್ನ ಪ್ರಾಣವ ಬಿಟ್ಟಿತು ॥ ೨೯ ॥

೮. ಬಿಡುವು

ಬಾರೋ ನಾವಾಡುವ ಬಾರೋ,
ಸಾರಿತು ಸುಗ್ಗಿಯ ತಿಂಗಳಿದೋ,
ಸಾರುವ ನಾವಿಂದಿನ ದಿನದಿ
ದೂರದ ಬೆಟ್ಟದ ಮೇಗಡೆಗೆ ॥ ೧ ॥

ಫಲರೇ ಬಿಡುವಾಗಿಹುದಿಂದು,
ತೊಳಲುತ ವನದಲಿ ತಪ್ಪಲಲಿ
ನೆಳಲಲಿ ಬಿಸಿಲಲಿ ನಲಿದಾಡಿ
ಸುಳಿವೆವು ದೂರದ ಬೆಟ್ಟದಲಿ ॥ ೨ ॥

ಹೂಗಿಡದಲಿ ಹೂವರಳಿಹುದು,
ಆಗಸ ತೊಳೆದಂತೆಸೆದಿಹುದು,
ಕೂಗುವುವೆತ್ತಲು ಹಕ್ಕಿಗಳು,
ಸಾಗುವೆವಾ ಬೆಟ್ಟದ ಬಳಿಗೆ ॥ ೩ ॥

ಯಾರೊಬ್ಬರು ಹಿಂದುಳಿಯದಿರಿ,
ಸೇರಿಸಿಕೊಳ್ಳಿರಿ ಹಸುಳೆಗಳ,
ಸಾರುವೆವೆಳಗಾಳಿಗಳಲೆವ
ದೂರದ ಬೆಟ್ಟದ ಮೇಗಡೆಗೆ ॥ ೪ ॥

೯. ಮರಳಿ ಯತ್ನವ ಮಾಡು

ಮರಳಿ ಯತ್ನವ ಮಾಡು
ಮರಳಿ ಯತ್ನವ ಮಾಡು
ತೊರೆಯದಿರು ಮೊದಲು ಕೈಗೂಡದಿರಲು
ಭರದಿ ಧೈರ್ಯವ ತಾಳು
ತೊರೆಯದಿರು ತೊರೆಯದಿರು
ಮರಳಿ ಯತ್ನವ ಮಾಡೆ ಸಿದ್ಧಿಸುವುದು ॥ ೧ ॥

ಒಂದು ಸೂಳಲಿ ಕೆಟ್ಟಿ
ತೆಂದು ಬೆದರದೆ ಮಾಡು
ಕುಂದಿಲ್ಲ ಕೈಗೂಡದಷ್ಟರಿಂದ
ನೊಂದುಕೊಳ್ಳದೆ ಮರಳಿ
ಮುಂದೆ ಯತ್ನವ ಮಾಡು
ಸಂದೇಹವಿಲ್ಲದದು ಸಿದ್ಧಿಸುವುದು ॥ ೨ ॥

ಕೆಲಸವಿದು ಕಷ್ಟವೆಂ
ದಳುಕಿ ಬಿಡದಿರು ಮಾಡು
ಫಲಗಳನು ಕೊಡುವುದದು ಕೊನೆಗೆ ನಿನಗೆ

ಸುಲಭವಹುದಾ ಕೆಲಸ
ಫಲಿಸುವುದು ಹುಲಿಸುವುದು
ನೆಲೆಗಿಡದೆ ಯತ್ನವನು ಮಾಡು ಮಗುವೆ ॥ ೩ ॥

೧೦. ಮಕ್ಕಳು ಮಲಗುವ ಹೊತ್ತು

ಹೊತ್ತು ಮುಳುಗುತ್ತಲಿದೆ
ಕತ್ತಲಾಗುತ್ತಲಿದೆ
ಎತ್ತಲೂ ಕಾಗೆಗಳು ಗೂಡ ಬಳಿಗೆ
ಮತ್ತೆ ಕಾಯೆಂದು ಕೂ
ಗುತ್ತಲಾಗಸದೆ ಹಾ
ರುತ್ತಲಿವೆ ಮಲಗುವಾ ಹೊತ್ತಾಯಿತು ॥ ೧ ॥

ಹಗಲು ಕಳೆದುದು ತಾವ
ರೆಗಳೆಸಳು ಮುಚ್ಚುತಿವೆ
ಬಗೆಬಗೆಯ ಹೂವುಗಳು ಮೊಗವ ಮುಸುಕಿ
ಬಿಗಿದ ನಿದ್ದೆಯೊಳಿಹುವು
ಮಗುವೆ, ಅದರಿಂದ ಹಾ
ಸಿಗೆಯಲ್ಲಿ ಮಲಗುವಾ ಹೊತ್ತಾಯಿತು ॥ ೨ ॥

ಬಲುನಿದ್ದೆಯಿಂದೆರಕೆ
ಗಳ ಮುಚ್ಚಿದುವು ಚಿಟ್ಟೆ
ನಿಲಿಸಿದುವು ಹಾಡುಗಳ ತುಂಬಿ, ಹಕ್ಕಿ
ಕೆಲಸವನು ಮುಗಿಸಿ ಮರಿ
ಗಳಿಗೆ ಕುಟುಕನು ಕೊಟ್ಟು
ವೆಲೆ ಮಗುವೆ ಮಲಗುವಾ ಹೊತ್ತಾಯಿತು ॥ ೩ ॥

ಅದೊ ಮಂದೆಯಿಂದೆ ಬಂ
ದುದು ಕರುಗಳೆಡೆಗೆ ಹಸು
ಅದೊ ಹಾಸಿದಾ ಹುಲ್ಲಮೇಲೆ ಕುಳಿತು
ಮುದದೆ ಮೆಲುಕಿಕ್ಕಿ ಮಲ
ಗಿದುದು ಕರುಗಳ ಕೂಡಿ
ಇದೊ ಕಂದ ಮಲಗುವಾ ಹೊತ್ತಾಯಿತು ॥ ೪ ॥

ಒಳ್ಳಿತಾಗಲಿ ನಿನಗೆ
ಒಳ್ಳಿತಾಗಲಿ ನಿನಗೆ
ಒಳ್ಳಿತಾಗಲಿ ನಿನಗೆ ಬೆಳಗುತನಕ
ಒಳ್ಳೆ ಕನಸುಗಳು ಕ
ಣ್ಣಲ್ಲಿ ಸುಳಿಯಲಿ ಮಗುವೆ
ಉಲ್ಲಸದಿ ಮಲಗುವಾ ಹೊತ್ತಾಯಿತು ॥ ೫ ॥

೧೧. ಹೊಳೆ ಕರೆ

ಹೊಳೆ ಬೆಳಗಿ ಜಾರುವುದು,
ಗಿಳಿ ನೆಗೆದು ಹಾರುವುದು,
ಬೆಳೆದ ಹೊಲ ಬಿಸಿಲಲ್ಲಿ ಮಲಗಿರುವುದು;
ತಿಳಿಯಾದ ಬಾನಿನಲಿ
ಬಿಳಿಮುಗಿಲು ತೇಲುವುದು,
ಮಳೆ ಸೋತ ದಳದಂತೆ ಕದ್ದಡಗಿತು! ॥ ೧ ॥

ಕರೆಯ ಹೊಂಗೆಯ ಮರದ
ನೆರಳ ಸೊಂಪಿನೊಳೊರಗಿ
ಕುರುಬಹೈದನು ಕೊಳಲನೂದುತಿರಲು,
ಕೊರಳೆತ್ತಿ, ಮೈಮರೆತು,
ಹರಡಿದೆಳಹಸುರಾದ
ಗರುಕೆಯನು ಮೇಯದೆಯೆ ಮಂದೆ ಇಹುದು ॥ ೨ ॥

ಎಳೆಮುದಿಯರೊಂದಾಗಿ
ಕಲೆತು ಹೊಲಗೆಯ್ಮೆಯೊಳು
ನಲಿದುಲಿವ ನಗೆಮಾತು ಕಿವಿಗೆಸೆವುದು;
ಮಲೆಯಲ್ಲಿ ಬಯಲಲ್ಲಿ
ನೆಲದಲ್ಲಿ ಜಲದಲ್ಲಿ
ತಲೆದೋರಿತಾನಂದವೆಲ್ಲೆಲ್ಲಿಯೂ! ॥ ೩ ॥

೧೨. ತಿರುಕನ ಕನಸು

ತಿರುಕನೊಬ್ಬನೂರ ಮುಂದೆ
ಮುರುಕು ಧರ್ಮಶಾಲೆಯಲ್ಲಿ
ಒರಗಿರುತ್ತಲೊಂದು ಕನಸ ಕಂಡನೆಂತನೆ
ಪುರದ ರಾಜ ಸತ್ತನವಗೆ
ವರ ಕುಮಾರರಿಲ್ಲದಿರಲು
ಕರಿಯು ಕೈಗೆ ಕುಸುಮಮಾಲೆಯಿತ್ತು ಪುರದೊಳು ॥ ೧ ॥

ಬಿಡಲದಾರ ಕೊರಳಿನಲ್ಲಿ
ತೊಡರಿಸುವುದೊ ಅವರ ಪಟ್ಟ
ದೊಡೆಯರನ್ನು ಮಾಳ್ಪೆವೆಂದು ಬಿಟ್ಟರಲ್ಲಿಗೆ
ಒಡನೆ ತನ್ನ ಕೊರಳಿನಲ್ಲಿ
ತೊಡರಿಸಲದ ಕಂಡು ತಿರುಕ
ಪೊಡವಿಯಾಣ್ಮನೆಂದು ಮನದಿ ಹಿಗ್ಗುತಿದ್ದನು ॥ ೨ ॥

ಪಟ್ಟಗಟ್ಟಲವಗೆ ನೃಪರು
ಕೊಟ್ಟರವರ ಕನ್ಯೆಯರನು
ನೆಟ್ಟನವನು ರಾಜ್ಯವಾಳ್ದ ಕನಸಿನಲ್ಲಿಯೇ
ಭಟ್ಟಿನಿಗಳ ಕೂಡಿ ಸಲವು
ಪುಟ್ಟಿ ಸುಖದೊಳಿರಲವಂಗೆ
ಹುಟ್ಟಿ ಹೆಣ್ಣು ಗಂಡು ಮಕ್ಕಳಾದುವಾಗಲೇ ॥ ೩ ॥

ಓಲಗದಲಿರುತ್ತ ತೊಡೆಯ
ಮೇಲೆ ಮಕ್ಕಳಾಡುತಿರಲು
ಲೀಲೆಯಿಂದ ಚಾತುರಂಗಬಲವ ನೋಡುತ
ಲೋಲನಾಗಿ ನುಡಿದನಿಂತು
ಕೇಳು ಮಂತ್ರಿ ಸುತರುಗಳಿಗೆ
ಬಾಲೆಯರನು ನೋಡಿ ಮದುವೆ ಮಾಡಬೇಕೆಲೈ ॥ ೪ ॥

ನೋಡಿ ಬನ್ನಿರೆಸಲು ಜೀಯ
ನೋಡಿ ಬಂದೆವೆಸಲು ಬೇಗ
ಮಾಡು ಮದುವೆಮಂಟಪದೊಳು ಸಕಲಕಾರ್ಯವ

ಗಾಢವಾಗಿ ಸಂಭ್ರಮಗಳು
ಮಾಡುತಿದ್ದ ಮದುವೆಗಳನು
ಕೂಡಿದಖಿಳರಾಯರುಗಳು ಮೆಚ್ಚುವಂದದಿ ॥ ೫ ॥

ಧನದ ಮದವ ರಾಜ್ಯಮದವ
ವನಿತೆ ಸುತರ ನೋಡಿ ತಿರುಕ
ಧನಿಕನಾಗಿ ಕಾಣುತಿದ್ದ ಕನಸಿನಲ್ಲಿಯೇ
ಮುನಿದು ನೃಪರ ದಂಡು ಬಂದು
ಮನೆಯ ಮುತ್ತಿದಂತೆಯಾಗೆ
ಕನಸು ಕಾಣುತಿದ್ದು ಹೆದರಿ ಕಣ್ಣ ತೆರೆದನು ॥ ೬ ॥

ಮೆರೆಯುತಿದ್ದ ಭಾಗ್ಯವೆಲ್ಲ
ಹರಿದು ಹೋಯಿತೆನುತ ತಿರುಕ
ಮರಳಿ ನಾಚಿ ಹೋಗುತಿದ್ದ ಮುನ್ನಿನಂತೆಯೇ ॥ ೭ ॥

೧೩. ನೇಗಿಲು

ನೇಗಿಲಿಗೆ ಕೈಯಿಡಿರಿ ಹುಡುಗರೆ
ರಾಗದಲಿ ಹೊಲಗಳನು ಬಿತ್ತನೆ
ಗಾಗಿ ನಾವುಳುತುಳುತ ಹೆಂಟೆಯನೊಡೆದು ಹದಮಾಡಿ
ಬೇಗದಲಿ ಕಾಳುಗಳ ಚೆಲ್ಲುತ
ಸಾಗಿ ಬರುವಾ ಸುಗ್ಗಿಯಲಿ ಹುಲು
ಸಾಗಿ ಬೆಳಸನು ಬೆಳೆದು ಮಾಡುವ ಹಲವು ಹಬ್ಬಗಳ ॥ ೧ ॥

ಹುಡುಗರೇ ಕೈಯಿಟ್ಟು ನೇಗಿಲ
ನಡಸಿ ಕುಳಿತೆವರೆನ್ನದುಳುತಲಿ
ಹಿಡಿದ ಕೈಯಲಿ ಹೊಲವ ಹದಗೊಳಿಸುತಲಿ ಬಿತ್ತುತಲಿ
ಹುಡಿಯು ಮಣ್ಣನು ಮೇಲೆ ಚೆಲ್ಲುತ
ನಡೆದರದು ಸುಗ್ಗಿಯಲಿ ಸಾಸಿರ
ಮಡಿ ಬೆಳೆದು ಹೆಚ್ಚುವುದು ಹೆಬ್ಬೆಳಸಾಗಿ ಹುಲುಸಾಗಿ ॥ ೨ ॥

ಹೆಚ್ಚು ಕಡಮೆಗಳಾಗದಂದದೆ
ಎಚ್ಚರದಿ ನೇಗಿಲನು ನಡಸುತ
ಚೆಚ್ಚರದೆ ಹದವರಿತು ಬಿತ್ತವ ಬಿತ್ತಿದರೆ ಮುಂದೆ

ಹೆಚ್ಚು ಬೆಳೆ ಬೆಳೆದೆಮ್ಮ ಕಣಜವ
ಹೊಚ್ಚಲಾಗದ ತೆರದೆ ತುಂಬುತ
ಮೆಚ್ಚಿದಂದದೆ ಸಾಲುಹಬ್ಬವ ತಹುದು ಸುಗ್ಗಿಯಲಿ ॥ ೩ ॥

೧೪. ದುರ್ಜನರ ಸಂಗವನ್ನು ಬಿಡಬೇಕು

ದುರ್ಜನರ ಸಂಗವನು ತ್ಯಜಿಸು ಮನವೇ ಸಾಧು
ಸಜ್ಜನರ ಸಂಗವನು ಭಜಿಸಿ ಸುಖಿಯಾಗೆಲವೋ ॥ ಪಲ್ಲವಿ ॥

ದುಷ್ಟವ್ಯಾಘ್ರನ ಕೈಲಿ ಮುಟ್ಟಿ ಹಿಡಿತರಬಹುದು
ಅಟ್ಟಿಬಹ ಮದಕರಿಯು ಕಟ್ಟಬಹುದು
ಕೃಷ್ಣಸರ್ಪನ ಹುತ್ತ ಕಲಕಿ ಜೀವಿಸಬಹುದು
ದುಷ್ಟಾತ್ಮರಾದವರ ಬಿಟ್ಟು ಕಳೆ ಮನವೇ ॥ ೧ ॥

ಹರಿವ ಗರಗಸದಲ್ಲಿ ಶಿರವನೊಡ್ಡಲುಬಹುದು
ಬೆರಸಿ ಬಹ ಕಾಳ್ಕಿಚ್ಚು ಧರಿಸಬಹುದು
ಸರಸದಲಿ ನಿಂತು ಕೇಸರಿಯು ಕೆಣಕಲುಬಹುದು
ಮರಸಿ ಕೊರಳನು ಕೊಯ್ವ ನರರ ಕಳೆ ಮನವೇ ॥ ೨ ॥

ಒಂದು ಜಾತಿಗೆ ವಿಷವು ಪುಚ್ಛದೊಳಗಿಹುದು ಮ
ತ್ತೊಂದು ಜಾತಿಗೆ ದಂತದೊಳಗೆ ವಿಷವು
ಒಂದು ಜಾತಿಗೆ ಮೈಯ ಅಂಗವೆಲ್ಲವು ವಿಷವು
ಹಿಂದೆಯಾಡುವ ನುಡಿಯು ಘೋರವಿಷ ಮನವೇ ॥ ೩ ॥

೧೫. ಯಾರು ಜಾಣ?

ಮಂದಮತಿ ನಿಂದಿಸಲು ಮನಕದ
ತಂದುಕೊಳ್ಳದ ನರನು ಜಾಣನು
ಬಂದ ಬಹು ಚಿಂತೆಯಲಿ ಧೈರ್ಯವ ತಳೆವನತಿಜಾಣ
ಸಂದಿಸಿದ ಕಲಹದಲಿ ಶಾಂತಿಯ
ಹೊಂದುವಾತನು ಜಾಣನಿಳೆಯೊಳ
ಗೊಂದೆ ಮನದಲಿ ಧರ್ಮವಾಚರಿಪಾತ ಕಡುಜಾಣ ॥ ೧ ॥

ಅರಿಯದಿರೆ ಚತುರೋಕ್ತಿಯನು ಬಾ
ಯ್ದೆರೆಯದಾತನು ಜಾಣ, ಹೆರರಿಗೆ
ಧರಣಿಯೊಳು ಹೊಣೆಗಾರನಾಗದ ಮನುಜನತಿಜಾಣ
ಹಿರಿದು ಸನ್ಮಾರ್ಗದಲಿ ನಡೆಯುವ
ನರನು ಜಾಣನು, ದೇವದೇವನ
ಚರಣ ಕಮಲವ ನಂಬಿ ಭಜಿಸುವ ಮನುಜನತಿಜಾಣ ॥ ೨ ॥

ಮನೆಯ ಕಲಹವ ಪರರಿಗರುಹದ
ಮನುಜ ಜಾಣನು, ಮಮತೆಯಿಂ ತ
ನ್ನನುಜರನು ಕಾಣ್ಬವನು ತಾ ಕಡುಜಾಣನೆನಿಸುವನು
ಧನವಿರಲು ತನ್ನಲ್ಲಿ ಬಡವರಿ
ಗನುನಯದಿ ಕೊಡುವಾತ ಜಾಣನು
ಮನದೊಳಗೆ ನರಹರಿಯ ನೆನೆಯುವ ಮನುಜನತಿಜಾಣ ॥ ೩ ॥

೧೬. ದೇವರ ನಾಮ

ಯಾರ ನಾಮವನೊಲಿದು ಪಾಡುವೆ?
ಯಾರ ಪಾದವ ಪೂಜೆ ಮಾಡುವೆ?
ಯಾರ ಮೂರ್ತಿಯ ನೆನೆವೆ ಮನದಲಿ? ನೀನರಿಯದಂತೆ
ಯಾರು ಗತಿ? ಮತಿ ಯಾರು? ದಿಕ್ಕೆನ
ಗಾರು? ನೀನಲ್ಲದೆ ಜಗತ್ಪತಿ,
ಕಾರುಣಿಕ! ಕೈದೋರಿ ರಕ್ಷಿಸು ನಮ್ಮನನವರತ ॥ ೧ ॥

ಮರೆದೆನಭ್ಯುದಯದಲಿ ನಿಮ್ಮನು,
ಮರೆಯೆನಾಪತ್ತಿನಲಿ ಪೊರೆಯೆಂ
ದೊರಲುವೆನು, ಮನವೇಕಭಾವದೊಳಿಲ್ಲ, ನಿಮ್ಮಡಿಯ
ಮರೆದು ಬಾಹಿರನಾದವನ ನೀ
ಮರೆವರೇ? ಹಸು ತನ್ನ ಕರುವನು
ಮರೆವುದೇ? ಮಮತೆಯಲಿ ರಕ್ಷಿಸು ನಮ್ಮನನವರತ ॥ ೨ ॥

1518-37.—ಬೆಂಗಳೂರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟಾದ
ಜಿ. ಶ್ರೀನಿವಾಸರಾಯರವರು ಮುದ್ರಿಸಿರುವರು